ಕರ್ನಾಟಕ

# ಸ್ಕೌಟ್ ಮತ್ತು ಗೈಡ್

ಮಾಸ ಪತ್ರಿಕೆ

# Karnataka Scout & Guide

Monthly Magazine

80ನೇ ಸ್ವಾತಂತ್ರ್ಯ ದಿನಾಚರಣೆ


| Vol -67 | Issue- 8 | August 2026 | Pages: 40 | Annual Subscription: ₹ 200/- |
| --- | --- | --- | --- | --- |
| ಸಂಪುಟ: 67 | ಸಂಚಿಕೆ: 8 | ಆಗಸ್ಟ್ 2026 | ಪುಟಗಳು: 40 | ವಾರ್ಷಿಕ ಚಂದ ರೂ. 200/- |




ಆಗಸ್ಟ್ 15ರಂದು ಬೆಂಗಳೂರಿನ ಮಾಣಿಕ್‌ಷಾ ಪೆರೇಡ್ ಮೈದಾನದಲ್ಲಿ 80ನೇ ಸ್ವಾತಂತ್ರ್ಯ ದಿನಾಚರಣೆ ಪ್ರಯುಕ್ತ ನಡೆದ ರಾಜ್ಯಮಟ್ಟದ ಪಥ ಚಲನದಲ್ಲಿ ಬೆಂಗಳೂರು ಉತ್ತರ ಜಿಲ್ಲೆಯ ಆರ್.ಟಿ.ನಗರ ಪಬ್ಲಿಕ್ ಶಾಲೆಯ ಗೈಡ್ಸ್ ತಂಡ ಭಾಗವಹಿಸಿ ದ್ವಿತೀಯ ಸ್ಥಾನ ಪಡೆದ ಪ್ರಯುಕ್ತ ತಂಡದ ನಾಯಕಿ ಕುಮಾರಿ ರಕ್ಷಾ .ಎಂ ರವರನ್ನು ಕರ್ನಾಟಕದ ಮುಖ್ಯಮಂತ್ರಿಗಳಾದ ಸನ್ಮಾನ್ಯ ಶ್ರೀ ಡಿ.ಕೆ. ಶಿವಕುಮಾರ್ ರವರು ಪಾರಿತೋಷಕ ನೀಡಿ ಅಭಿನಂದಿಸಿದರು.



ಆಗಸ್ಟ್ 15 ರಂದು 80ನೇ ಸ್ವಾತಂತ್ರ್ಯೋತ್ಸವ ಪ್ರಯುಕ್ತ ಬೆಂಗಳೂರಿನ ರಾಜ್ಯ ಕೇಂದ್ರ ಕಛೇರಿಯ ಕೊಂಡಜ್ಜಿ ಬಸಪ್ಪ ಸಭಾಂಗಣದಲ್ಲಿ ರಾಜ್ಯ ಸಂಸ್ಥೆಯಿಂದ ಸ್ಕೌಟ್ಸ್-ಗೈಡ್ಸ್‌ಗಳಿಗೆ ಏರ್ಪಡಿಸಿದ್ದ 'ಸಾಂಸ್ಕೃತಿಕ ಸಂಜೆ' ಕಾರ್ಯಕ್ರಮದ ಉದ್ಘಾಟನೆಯನ್ನು ಮಾನ್ಯ ಮಾಜಿ ಶಾಸಕರಾದ ಶ್ರೀಮತಿ ಸೌಮ್ಯರೆಡ್ಡಿರವರು ನೆರವೇರಿಸಿ ಸ್ಕೌಟ್ಸ್-ಗೈಡ್ಸ್‌ಗಳನ್ನು ಉದ್ದೇಶಿಸಿ ಮಾತನಾಡಿ ಶುಭಹಾರೈಸಿದರು.

ಈ ಸಂದರ್ಭದಲ್ಲಿ ರಾಜ್ಯ ಮುಖ್ಯ ಆಯುಕ್ತರಾದ ಡಾ. ಪಿ.ಜಿ.ಆರ್. ಸಿಂಧ್ಯ, ಶ್ರೀಮತಿ ಗೀತಾಸಿಂಧ್ಯ, ಕೇಂದ್ರ ಸ್ಥಾನಿಕ ಆಯುಕ್ತರು ಹಾಗೂ ಜೈನ್ ವಿಶ್ವವಿದ್ಯಾಲಯದ ಜಂಟಿ ರಿಜಿಸ್ಟ್ರಾರ್ ಆದ ಶ್ರೀ ಎಂ.ಎಸ್. ಸಂತೋಷ್, ಶ್ರೀಮತಿ ಪೃಥ್ವಿಸಿಂಧ್ಯ, ಶ್ರೀ ಕೆ. ಗಂಗಪ್ಪಗೌಡ, ಶ್ರೀ ಬಿ.ಆರ್. ಪ್ರಸನ್ನಕುಮಾರ್, ಶ್ರೀ ಎಂ.ಎಸ್. ಸತೀಶ್, ಶ್ರೀ ಎ.ಎಸ್. ಮಧುಸೂದನ್, ಶ್ರೀಮತಿ ಮುಕ್ತ ಬಿ. ಕಾಗಲಿ, ಶ್ರೀಮತಿ ಬಿ.ವಿ. ರಾಮಲತಾ, ಶ್ರೀಮತಿ ಅರ್ಪಿತಾ ಕೊಂಡಜ್ಜಿ, ಶ್ರೀಮತಿ ಹೆಲೆನ್ ಲೋಬೊ ಉಪಸ್ಥಿತರಿದ್ದರು.



ಆಗಸ್ಟ್ 01 ರಂದು ರಾಜ್ಯ ಕೇಂದ್ರ ಕಛೇರಿಯಲ್ಲಿ ನಡೆದ 'ವಿಶ್ವ ಸ್ಕೌರ್ಫ್ ದಿನಾಚರಣೆ' ಕಾರ್ಯಕ್ರಮದಲ್ಲಿ ಮಾನ್ಯ ಆರೋಗ್ಯ ಹಾಗೂ ಕುಟುಂಬ ಕಲ್ಯಾಣ ಸಚಿವರು ಹಾಗೂ ಅಪರ ರಾಜ್ಯ ಮುಖ್ಯ ಆಯುಕ್ತರಾದ ಶ್ರೀ ಯು.ಟಿ. ಖಾದರ್‌ರವರು ಭಾಗವಹಿಸಿ ಸಸಿ ನೆಡುವ ಮೂಲಕ ಸಂಸ್ಥೆಗೆ ಶುಭ ಹಾರೈಸಿದರು. ಕಾರ್ಯಕ್ರಮದಲ್ಲಿ ಶ್ರೀ ಕೆ. ಅಮರನಾರಾಯಣ, ಭಾ.ಆ.ಸೇ. (ನಿವೃತ್ತ), ರಾಜ್ಯ ಮುಖ್ಯ ಆಯುಕ್ತರಾದ ಡಾ. ಪಿ.ಜಿ.ಆರ್. ಸಿಂಧ್ಯ ಇತರರು ಉಪಸ್ಥಿತರಿದ್ದರು.

ಕರ್ನಾಟಕ ಸ್ಕೌಟ್ ಮತ್ತು ಗೈಡ್ ಮಾಸಿಕ ವಾರ್ತಾಪತ್ರಿಕೆ

KARNATAKA Scout & Guide
MONTHLY NEWS MAGAZINE

Vol: 67 Issue: 08 August 2026



**ಪೋಷಕರು**

ಡಾ. ಪಿ.ಜಿ.ಆರ್. ಸಿಂಧ್ಯ

**ಗೌರವ ಅಧ್ಯಕ್ಷರು**

ಡಾ. ಗೊ.ರು. ಚನ್ನಬಸಪ್ಪ

**ಅಧ್ಯಕ್ಷರು**

ಕೊಂಡಜ್ಜಿ ಬ. ಷಣ್ಮುಖಪ್ಪ

**ಉಪಾಧ್ಯಕ್ಷರು**

ಡಾ. ಎಂ.ಕೆ. ಶ್ರೀಧರ್

**ಸಂಪಾದಕರು**

ಕೆ. ಗಂಗಪ್ಪಗೌಡ

**ಸಹಸಂಪಾದಕರು**

ಎನ್. ಶ್ರೀನಿವಾಸನ್

**ಸದಸ್ಯರು**

ಮೋಹನ್ ಕೊಂಡಜ್ಜಿ
ಸಿ.ಪಿ. ಪರಮೇಶ್ವರ
ಎಂ.ಎನ್. ಷಡಕ್ಷರಿ
ಸಿ.ವಿ. ತಿರುಮಲರಾವ್
ಡಾ. ಮುಕ್ತಾ ಬಿ. ಕಾಗಲಿ

ಸಂಚಿಕೆಯ ವಾರ್ಷಿಕ ಚಂದಾ ರೂ. 200/-
ವಿದ್ಯಾಸಂಸ್ಥೆ ಹಾಗೂ ಸಂಘ-ಸಂಸ್ಥೆಗಳಿಗೆ
ವಾರ್ಷಿಕ ಚಂದಾ ರೂ. 200/-

ಚಂದಾಹಣವನ್ನು
ಸಂಪಾದಕರು, ಕರ್ನಾಟಕ ಸ್ಕೌಟ್ ಮತ್ತು ಗೈಡ್ ಮಾಸಪತ್ರಿಕೆ
ರಾಜ್ಯ ಕೇಂದ್ರ ಕಛೇರಿ, ಶಾಂತಿಗೃಹ
#39, ಅರಮನೆ ರಸ್ತೆ, ಬೆಂಗಳೂರು - 560 001
ಇಲ್ಲಿಗೆ ಕಳುಹಿಸಲು ಕೋರಿದೆ.

## ಒಳಪುಟಗಳಲ್ಲಿ...

ರಾಜ್ಯ ಮುಖ್ಯ ಆಯುಕ್ತರ ನುಡಿ ...04
ಸಂಪಾದಕೀಯ ...08
ವಿಶ್ವ ಸ್ಕೌಟ್ ಸ್ಕಾರ್ಫ್ ದಿನಾಚರಣೆ ...10
80ನೇ ಸ್ವಾತಂತ್ರ್ಯ ದಿನಾಚರಣೆ ಕಾರ್ಯಕ್ರಮ ...11
ಸ್ವಾತಂತ್ರ್ಯೋತ್ಸವ ಸಾಂಸ್ಕೃತಿಕ ಸಂಜೆ ...12
ಡಾ. ಗೊ.ರು. ಚೆನ್ನಬಸಪ್ಪನವರ 80ನೇ ಸ್ವಾತಂತ್ರ್ಯೋತ್ಸವದ ಧ್ವಜಾರೋಹಣ ನೆರವೇರಿಸಿ ಮಾಡಿದ ಭಾಷಣ ...13
ರಾಜ್ಯ ಸಂಸ್ಥೆಯಲ್ಲಿ ನಡೆದ ವಿವಿಧ ಕಾರ್ಯಕ್ರಮಗಳು ...15
ರಾಜ್ಯ ಮಟ್ಟದ ರಾಜ್ಯ ಪುರಸ್ಕಾರ ಪರೀಕ್ಷಾ ಶಿಬಿರಗಳು ...16
Brief Report of the National Level Scouts of the World Award Discovery Workshop ...17
A Throwback Picture ...18
ನಾಯಕನ ಗುಣ ಲಕ್ಷಣಗಳು - ಪಂಚತಂತ್ರ ...18
ಸ್ಕೌಟ್ ಸ್ಕಿಲೋ ಕಾರ್ಯಕ್ರಮಗಳು ...19
ಜಿಲ್ಲಾ ವಾರ್ತೆಗಳು ...20
ಶ್ರದ್ಧಾಂಜಲಿ ...38

## ಓದುಗರ ಗಮನಕ್ಕೆ

ಸಹೃದಯ ಓದುಗರೇ,

ಸ್ಕೌಟ್ಸ್ ಮತ್ತು ಗೈಡ್ಸ್ ಸಾಹಿತ್ಯ ಪುಸ್ತಕಗಳನ್ನು ಓದಲು ಕೆಳಗಿನ Q.R. Code ಹಾಗೂ ಲಿಂಕ್‌ನ್ನು ಉಪಯೋಗಿಸಿ

https://archive.org/details/ServantsOfKnowledge?tab=collection&query=sng.*&sort=-addeddate

- ಸಂಪಾದಕರು

080-2226 0017, 2226 7470 www.bsgkarnataka.in The Bharat Scouts & Guides-Karnataka



# ರಾಜ್ಯ ಮುಖ್ಯ ಆಯುಕ್ತರ ನುಡಿ

**ಸಮಸ್ತ ಕಬ್ಸ್–ಬುಲ್ ಬುಲ್ಸ್, ಸ್ಕೌಟ್ಸ್–ಗೈಡ್ಸ್, ರೋವರ್ಸ್–ರೇಂಜರ್ಸ್, ಪದಾಧಿಕಾರಿಗಳು, ಶಿಕ್ಷಕರು ಹಾಗೂ ಹಿತೈಷಿಗಳಿಗೆ ನನ್ನ ಹೃತ್ಪೂರ್ವಕ ಶುಭಾಶಯಗಳು.**

ರಾಜ್ಯ ಸರ್ಕಾರದಲ್ಲಿ ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಸಚಿವರಾಗಿ ಮರುನೇಮಕಗೊಂಡಿರುವ ಶ್ರೀ ಮಧು ಬಂಗಾರಪ್ಪ ಅವರಿಗೆ ಹಾಗೂ ನೂತನವಾಗಿ ಉನ್ನತ ಶಿಕ್ಷಣ ಸಚಿವರಾಗಿ ನೇಮಕಗೊಂಡಿರುವ ಶ್ರೀ ಬಸವರಾಜ ರಾಯರೆಡ್ಡಿ ಅವರಿಗೆ ಭಾರತ್ ಸ್ಕೌಟ್ಸ್ ಮತ್ತು ಗೈಡ್ಸ್, ಕರ್ನಾಟಕ ರಾಜ್ಯ ಸಂಸ್ಥೆಯ ಪರವಾಗಿ ಹಾಗೂ ವೈಯಕ್ತಿಕವಾಗಿ ಹೃತ್ಪೂರ್ವಕ ಅಭಿನಂದನೆಗಳು ಮತ್ತು ಶುಭಾಶಯಗಳನ್ನು ಸಲ್ಲಿಸುತ್ತೇನೆ. ಶಿಕ್ಷಣ ಕ್ಷೇತ್ರದ ಕ್ಷೇತ್ರದ ಪ್ರಗತಿಯೊಂದಿಗೆ ರಾಜ್ಯದಲ್ಲಿ ಸ್ಕೌಟ್ಸ್ ಮತ್ತು ಗೈಡ್ಸ್ ಚಳವಳಿಯ ವಿಸ್ತರಣೆ ಹಾಗೂ ಬಲವರ್ಧನೆಗೂ ಇವರಿಂದ ನಿರಂತರ ಪ್ರೋತ್ಸಾಹ ಮತ್ತು ಸಹಕಾರ ದೊರೆಯಲಿ ಎಂದು ಆಶಿಸುತ್ತೇನೆ.

ರಾಜ್ಯ ಸಂಸ್ಥೆಯ ಚಟುವಟಿಕೆಗಳು ದಿನದಿಂದ ದಿನಕ್ಕೆ ಹೊಸ ಆಯಾಮಗಳನ್ನು ಪಡೆದುಕೊಳ್ಳುತ್ತಾ, ಸಕಾರಾತ್ಮಕ ಬೆಳವಣಿಗೆಯತ್ತ ಸಾಗುತ್ತಿರುವುದು ಸಂತಸದ ಹಾಗೂ ಹೆಮ್ಮೆಯ ಸಂಗತಿಯಾಗಿದೆ. ಸೇವೆ, ಶಿಸ್ತು, ನಾಯಕತ್ವ, ಸ್ವಾವಲಂಬನೆ, ಪರಿಸರ ಪ್ರಜ್ಞೆ, ಸಾಮಾಜಿಕ ಹೊಣೆಗಾರಿಕೆ ಮತ್ತು ರಾಷ್ಟ್ರಭಕ್ತಿ, ಇವು ಕೇವಲ ಸ್ಕೌಟಿಂಗ್‌ನ ಮೌಲ್ಯಗಳಲ್ಲ ; ಉತ್ತಮ ವ್ಯಕ್ತಿತ್ವವನ್ನು ರೂಪಿಸುವ ಹಾಗೂ ಜವಾಬ್ದಾರಿಯುತ ನಾಗರಿಕರನ್ನು ಸೃಷ್ಟಿಸುವ ಜೀವನ ಮೌಲ್ಯಗಳಾಗಿವೆ.

ಈ ಮೌಲ್ಯಗಳನ್ನು ಮಕ್ಕಳ ಮತ್ತು ಯುವಜನರ ಬದುಕಿನಲ್ಲಿ ಅಳವಡಿಸುವುದು ನಮ್ಮೆಲ್ಲರ ಜವಾಬ್ದಾರಿಯಾಗಿದೆ. ರಾಜ್ಯದ ಪ್ರತಿಯೊಂದು ಜಿಲ್ಲೆ, ಶಾಲೆ, ಕಾಲೇಜು ಹಾಗೂ ಶೈಕ್ಷಣಿಕ ಸಂಸ್ಥೆಗಳಲ್ಲಿ ಸ್ಕೌಟಿಂಗ್ ಮತ್ತು ಗೈಡಿಂಗ್ ಚಟುವಟಿಕೆಗಳು ಇನ್ನಷ್ಟು ವ್ಯಾಪಕವಾಗಿ ಬೆಳೆಯಬೇಕು ಎಂಬುದು ನಮ್ಮ ದೃಢಸಂಕಲ್ಪವಾಗಿರಲಿ. ಪ್ರತಿಯೊಬ್ಬ ಮಗುವಿಗೂ ಸ್ಕೌಟಿಂಗ್‌ನ ಅವಕಾಶ ದೊರೆಯಬೇಕು; ಪ್ರತಿಯೊಬ್ಬ ಯುವಕ–ಯುವತಿಯರಲ್ಲೂ ಸೇವಾ ಮನೋಭಾವ, ನಾಯಕತ್ವದ ಗುಣ ಮತ್ತು ರಾಷ್ಟ್ರಪ್ರೇಮ ಬೆಳೆಸಬೇಕು ಎಂಬುದು ನಮ್ಮ ಗುರಿಯಾಗಿರಲಿ.

ಆಗಸ್ಟ್ 01 ರಂದು "ಸ್ಕಾರ್ಫ್ ಡೇ" ಅಂಗವಾಗಿ ರಾಜ್ಯ ಸಂಸ್ಥೆಯಲ್ಲಿ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ವಿವಿಧ ಕ್ಷೇತ್ರಗಳ ಅನೇಕ ಗಣ್ಯರು ಭಾಗವಹಿಸಿ, ಸ್ಕೌಟ್–ಗೈಡ್ ಚಳುವಳಿಗೆ ತಮ್ಮ ಬೆಂಬಲ ಮತ್ತು ಪ್ರೋತ್ಸಾಹವನ್ನು ವ್ಯಕ್ತಪಡಿಸಿರುವುದು ಸಂತಸದ ಸಂಗತಿಯಾಗಿದೆ. ಅವರ ಉಪಸ್ಥಿತಿ ಹಾಗೂ ಶುಭ ಹಾರೈಕೆಗಳು ನಮ್ಮ ಮಕ್ಕಳು ಮತ್ತು ಯುವಜನರಲ್ಲಿ ಮತ್ತಷ್ಟು ಉತ್ಸಾಹ ಹಾಗೂ ಆತ್ಮವಿಶ್ವಾಸವನ್ನು ಮೂಡಿಸಿವೆ. ಆ ದಿನ ರಾಜ್ಯದ ವಿವಿಧ ಭಾಗಗಳಲ್ಲಿಯೂ ಸ್ಕಾರ್ಫ್ ಡೇ ಯನ್ನು ಅರ್ಥಪೂರ್ಣವಾಗಿ ಆಚರಿಸುವ ಮೂಲಕ ಸ್ಕೌಟಿಂಗ್–ಗೈಡಿಂಗ್ ನ ಮೌಲ್ಯಗಳ ಕುರಿತು ಜನರಲ್ಲಿ ಅರಿವು ಮೂಡಿಸಲಾಗಿದೆ. ಇಂತಹ ಕಾರ್ಯಕ್ರಮಗಳು ಚಳುವಳಿಯನ್ನು ಸಮಾಜದ ಇನ್ನಷ್ಟು ವಿಶಾಲ ವರ್ಗಗಳಿಗೆ ತಲುಪಿಸಲು ಸಹಕಾರಿಯಾಗುತ್ತವೆ.

ಅದೇ ದಿನ, ಚಿಕ್ಕಬಳ್ಳಾಪುರ ಜಿಲ್ಲೆಯ ಮುದ್ದೇನಹಳ್ಳಿಯ ಶ್ರೀ ಸತ್ಯಸಾಯಿ ಆಶ್ರಮದ ಶ್ರೀ ಮಧುಸೂದನ್ ಸಾಯಿ ಅವರನ್ನು ಭೇಟಿ ಮಾಡಿ, ಸಮಾಜಸೇವೆ, ಯುವಜನರ ವ್ಯಕ್ತಿತ್ವ ವಿಕಾಸ ಹಾಗೂ ವಿವಿಧ ಸೇವಾ ಚಟುವಟಿಕೆಗಳ ಕುರಿತು ಚರ್ಚಿಸಲಾಯಿತು. ಆಶ್ರಮದ ವತಿಯಿಂದ ರಾಜ್ಯದ ಸರ್ಕಾರಿ ಶಾಲೆಗಳ ಮಕ್ಕಳಿಗೆ ನೀಡಲಾಗುತ್ತಿರುವ "ರಾಗಿ ಮಾಲ್ಟ್" ಅನ್ನು ರಾಜ್ಯದ ಸುಮಾರು 8.5 ಲಕ್ಷ ಸ್ಕೌಟ್ಸ್ ಮತ್ತು ಗೈಡ್ಸ್ ಗಳಿಗೂ ವಿತರಿಸುವ ಕುರಿತು ಪೂಜ್ಯಗುರುಗಳು ತಿಳಿಸಿರುವುದು ಸಂತಸದ ಸಂಗತಿಯಾಗಿದೆ. ಅದೇ ಸಂದರ್ಭದಲ್ಲಿ, ಈ ವರ್ಷ ಶ್ರೀ ಸತ್ಯಸಾಯಿ ಆಶ್ರಮದಲ್ಲಿ ರಾಜ್ಯಮಟ್ಟದ ರೋವರ್–ರೇಂಜರ್ ಮೂಟ್ ಆಯೋಜಿಸಲು ತಾತ್ವಿಕ ಒಪ್ಪಿಗೆ ದೊರೆತಿರುವುದು ವಿಶೇಷ ಮಹತ್ವದ್ದಾಗಿದೆ. ಇಂತಹ ಸಹಭಾಗಿತ್ವಗಳು ಯುವಜನರನ್ನು ಸೇವಾ ಚಟುವಟಿಕೆಗಳೊಂದಿಗೆ ಸಂಪರ್ಕಿಸುವುದರ ಜೊತೆಗೆ ಅವರಲ್ಲಿ ಸಾಮಾಜಿಕ ಹೊಣೆಗಾರಿಕೆ ಮತ್ತು ಸೇವಾ ಮನೋಭಾವವನ್ನು ಬೆಳೆಸಲು ಸಹಕಾರಿಯಾಗಲಿವೆ.

ರಾಜ್ಯದ ಅನೇಕ ಸರ್ಕಾರಿ ಶಾಲೆಗಳ ಮಕ್ಕಳು ಸ್ಕೌಟಿಂಗ್–ಗೈಡಿಂಗ್‌ನಲ್ಲಿ ಆಸಕ್ತಿ ಹೊಂದಿದ್ದರೂ ಆರ್ಥಿಕ ಕಾರಣಗಳಿಂದ ಸಮವಸ್ತ್ರ ಖರೀದಿಸಲು ಸಾಧ್ಯವಾಗದ ಪರಿಸ್ಥಿತಿ ಇದೆ. ಈ ಹಿನ್ನೆಲೆಯಲ್ಲಿ ನಮ್ಮ ಮನವಿಗೆ ಸ್ಪಂದಿಸಿದ ಬೆಂಗಳೂರಿನ ಪ್ರತಿಷ್ಠಿತ ಕೃಷ್ಣಯ್ಯಚೆಟ್ಟಿ ಜ್ಯೂಯಲರ್ಸ್ ಸಂಸ್ಥೆಯ ಮಾಲೀಕರಾದ ಡಾ.ಸಿ.ವಿನೋದ್ ಹಯಗ್ರೀವ ಮತ್ತು ಶ್ರೀಮತಿ ತ್ರಿವೇಣಿ ವಿನೋದ್ ಅವರು ಅರ್ಹ 568 ಮಕ್ಕಳಿಗೆ ಸ್ಕೌಟ್–ಗೈಡ್ ಸಮವಸ್ತ್ರಗಳನ್ನು ದಾನವಾಗಿ ನೀಡಲು ಮುಂದಾಗಿರುವುದು ಅತ್ಯಂತ ಸಂತಸದ ಹಾಗೂ ಶ್ಲಾಘನೀಯ ಸಂಗತಿಯಾಗಿದೆ. ಈ ಸಮವಸ್ತ್ರ ವಿತರಣಾ ಕಾರ್ಯಕ್ರಮವು ಸೆಪ್ಟೆಂಬರ್ 12 ರಂದು ನಡೆಯಲಿದ್ದು, ಆರ್ಥಿಕವಾಗಿ ಹಿಂದುಳಿದ ಮಕ್ಕಳಿಗೂ ಸಮಾನ ಅವಕಾಶ ಕಲ್ಪಿಸುವ ಈ ಸೇವಾ ಕಾರ್ಯವು ಸ್ಕೌಟಿಂಗ್‌ನ "ಸೇವೆ ಮತ್ತು ಸಮಾನತೆ"ಯ ಆಶಯವನ್ನು ಬಲಪಡಿಸಲಿದೆ. ಈ ಮಾನವೀಯ ನೆರವಿಗಾಗಿ ಡಾ.ವಿನೋದ್ ಹಯಗ್ರೀವ ಹಾಗೂ ಕೃಷ್ಣಯ್ಯ ಚೆಟ್ಟಿ ಫೌಂಡೇಶನ್ ಸಂಸ್ಥೆಗೆ ನಮ್ಮ ಹೃತ್ಪೂರ್ವಕ ಕೃತಜ್ಞತೆಗಳನ್ನು ಸಲ್ಲಿಸುತ್ತೇನೆ.

ಆಗಸ್ಟ್ 5 ರಂದು ಬೆಂಗಳೂರಿನ ಕೊಂಡಜ್ಜಿ ಬಸಪ್ಪ ಸಭಾಂಗಣದಲ್ಲಿ ವನಲೋಕ ಹಾಗೂ ಎಂಪ್ರೀ ಸಹಯೋಗದಲ್ಲಿ ನಡೆದ "Green Schools Bengaluru Conclave" ಕಾರ್ಯಕ್ರಮದಲ್ಲಿ ಪರಿಸರ ಸಂರಕ್ಷಣೆ, ಹಸಿರು ಶಾಲೆಗಳ ನಿರ್ಮಾಣ ಹಾಗೂ ಮಕ್ಕಳಲ್ಲಿ ಪರಿಸರ ಜಾಗೃತಿ ಬೆಳೆಸುವ ಅಗತ್ಯವನ್ನು ಒತ್ತಿ ಹೇಳಲಾಯಿತು. ಆಗಸ್ಟ್ 6 ರಂದು KAMS ಹಾಗೂ BRAIN THON ಸಹಯೋಗದಲ್ಲಿ ನಡೆದ "ಡಿಜಿಟಲ್ ಮಾಧ್ಯಮದಲ್ಲಿ ಶಿಕ್ಷಣ ಮತ್ತು ಪೋಕ್ಸೋ ಕಾಯ್ದೆ ಅನುಷ್ಠಾನ" ಕಾರ್ಯಾಗಾರದಲ್ಲಿ ಮಕ್ಕಳ ಸುರಕ್ಷತೆ, ಡಿಜಿಟಲ್ ಜಾಗೃತಿ ಹಾಗೂ ಮಕ್ಕಳ ಹಕ್ಕುಗಳ ಕುರಿತು ಅರಿವು ಮೂಡಿಸುವ ಮಹತ್ವವನ್ನು ತಿಳಿಸಲಾಯಿತು. ಪರಿಸರ ಸಂರಕ್ಷಣೆ, ಮಕ್ಕಳ ಸುರಕ್ಷತೆ ಹಾಗೂ ಡಿಜಿಟಲ್ ಜಾಗೃತಿಯಂತಹ ಸಮಕಾಲೀನ ಸವಾಲುಗಳಲ್ಲಿ ಸ್ಕೌಟ್ಸ್ ಮತ್ತು ಗೈಡ್ಸ್‌ಗಳ ಸೇವಾ ಮನೋಭಾವವನ್ನು ಪರಿಣಾಮಕಾರಿಯಾಗಿ ಬಳಸಿಕೊಳ್ಳುವುದು ನಮ್ಮ ಪ್ರಮುಖ ಆದ್ಯತೆಯಾಗಿದೆ.

ಆಗಸ್ಟ್ 21 ರಂದು ಎಂಪ್ರೀ ಸಂಸ್ಥೆಯೊಂದಿಗೆ "ಪರಿಸರ ಗಣಪತಿ" ಸೇರಿದಂತೆ ವಿವಿಧ ಪರಿಸರ ಸಂರಕ್ಷಣಾ ಚಟುವಟಿಕೆಗಳಲ್ಲಿ ಸ್ಕೌಟ್ಸ್ ಮತ್ತು ಗೈಡ್ಸ್‌ಗಳ ಸಕ್ರಿಯ ಪಾಲ್ಗೊಳ್ಳುವಿಕೆ ಕುರಿತು ಚರ್ಚಿಸಲಾಯಿತು. ಪರಿಸರ ಸಂರಕ್ಷಣೆ, ಮಕ್ಕಳ ಸುರಕ್ಷತೆ ಹಾಗೂ ಡಿಜಿಟಲ್ ಜಾಗೃತಿಯಂತಹ ಸಮಕಾಲೀನ ಸವಾಲುಗಳಲ್ಲಿ ಸ್ಕೌಟ್ಸ್ ಮತ್ತು ಗೈಡ್ಸ್‌ಗಳ ಸೇವಾ ಮನೋಭಾವವನ್ನು ಪರಿಣಾಮಕಾರಿಯಾಗಿ ಬಳಸಿಕೊಳ್ಳುವುದು ರಾಜ್ಯ ಸಂಸ್ಥೆಯ ಪ್ರಮುಖ ಆದ್ಯತೆಯಾಗಿದೆ. ಈ ಮೂರು ಮಹತ್ವದ ಕಾರ್ಯಕ್ರಮಗಳಲ್ಲಿಯೂ ರಾಜ್ಯ ಸಂಸ್ಥೆ ಸಕ್ರಿಯವಾಗಿ ಕೈಜೋಡಿಸುತ್ತಿರುವುದು ಸಂತೋಷದ ಹಾಗೂ ಹೆಮ್ಮೆಯ ಸಂಗತಿಯಾಗಿದೆ.

ಆಗಸ್ಟ್ 10ರಂದು ಬೆಳಗಾವಿಯಲ್ಲಿ ನಡೆದ ರಾಜ್ಯ ಪುರಸ್ಕಾರ ಪ್ರಶಸ್ತಿ ಪತ್ರ ಪ್ರಧಾನ ಹಾಗೂ 'ನಶಾ ಮುಕ್ತ ಭಾರತ' ಪ್ರತಿಜ್ಞಾ ಕಾರ್ಯಕ್ರಮದಲ್ಲಿ ಭಾಗವಹಿಸಿ, ಯುವಜನರನ್ನು ವ್ಯಸನಮುಕ್ತ, ಆರೋಗ್ಯಕರ ಹಾಗೂ ಶಿಸ್ತುಬದ್ಧ ಜೀವನದತ್ತ ಕೊಂಡೊಯ್ಯುವ ಸಂದೇಶ ನೀಡಲಾಯಿತು.

ಆಗಸ್ಟ್ 15 ರಂದು 80ನೇ ಸ್ವಾತಂತ್ರ್ಯ ದಿನಾಚರಣೆಯ ಅಂಗವಾಗಿ ರಾಜ್ಯ ಕೇಂದ್ರ ಕಚೇರಿಯಲ್ಲಿ ಮೊದಲ ಬಾರಿಗೆ "ಸಾಂಸ್ಕೃತಿಕ ಸಂಜೆ" ಕಾರ್ಯಕ್ರಮವನ್ನು ಆಯೋಜಿಸಲಾಗಿತ್ತು. ಸುಮಾರು 11 ಶಾಲೆಗಳ ಮಕ್ಕಳು ಭಾಗವಹಿಸಿ ತಮ್ಮ ಪ್ರತಿಭೆಯನ್ನು ಅನಾವರಣಗೊಳಿಸಿದರು. ಈ ಕಾರ್ಯಕ್ರಮಕ್ಕೆ ಜೈನ್ ವಿಶ್ವವಿದ್ಯಾಲಯ ನೀಡಿದ ಸಹಕಾರವನ್ನು ಕೃತಜ್ಞತೆಯಿಂದ ಸ್ಮರಿಸುತ್ತೇನೆ. ಇಂತಹ ಕಾರ್ಯಕ್ರಮಗಳು ಮಕ್ಕಳಲ್ಲಿ ದೇಶಭಕ್ತಿ, ರಾಷ್ಟ್ರೀಯ ಏಕತೆ, ಸಾಂಸ್ಕೃತಿಕ ಅರಿವು ಹಾಗೂ ಆತ್ಮವಿಶ್ವಾಸ ಬೆಳೆಸಲು ಸಹಕಾರಿಯಾಗುತ್ತವೆ.

ರಾಷ್ಟ್ರಪತಿ ಭವನದ ಚಹಾಕೂಟದಲ್ಲಿ ಭಾಗವಹಿಸಿದ ಕರ್ನಾಟಕದ ಸಿರಸಿಯ ರೇಂಜರ್ ಹಾಗೂ ಆಪದ್ ಮಿತ್ರ ಸ್ವಯಂಸೇವಕಿ, ಕುಮಾರಿ ಸುಜಾತ ನಾಯ್ಕ್ ಅವರು ರಾಷ್ಟ್ರಮಟ್ಟದಲ್ಲಿ ಕರ್ನಾಟಕಕ್ಕೆ ಕೀರ್ತಿ ತಂದಿರುವ ಅವರ ಸಾಧನೆ ಹೆಮ್ಮೆಯ ಸಂಗತಿಯಾಗಿದೆ. ಈ ಹಿನ್ನೆಲೆಯಲ್ಲಿ ಅವರನ್ನು ಆಗಸ್ಟ್ 19 ರಂದು ಕೇಂದ್ರ ಕಚೇರಿಯಲ್ಲಿ ಸನ್ಮಾನಿಸಿದ್ದು ಸಂತಸ ತಂದಿದೆ.

ಆಗಸ್ಟ್ 20 ರಂದು ಸ್ಕೌಟಿಂಗ್–ಗೈಡಿಂಗ್ ಶಿಕ್ಷಣದ ಗುಣಮಟ್ಟವನ್ನು ಮತ್ತಷ್ಟು ಸುಧಾರಿಸುವುದು, ತರಬೇತಿ ವ್ಯವಸ್ಥೆಯನ್ನು ಬಲಪಡಿಸುವ ಕುರಿತು ನಡೆದ ಸಮಾಲೋಚನಾ ಸಭೆಯು ಫಲಪ್ರದವಾಗಿತ್ತು. ಸಭೆಯಲ್ಲಿ ಮಹತ್ವದ ವಿಚಾರಗಳನ್ನು ಚರ್ಚಿಸಲಾಗಿದ್ದು, ಮುಂದಿನ ದಿನಗಳಲ್ಲಿ ಉತ್ತಮ ಫಲಿತಾಂಶಗಳನ್ನು ಸಾಧಿಸುವ ವಿಶ್ವಾಸ ಮೂಡಿದೆ.

ವಿವಿಧ ಜಿಲ್ಲೆಗಳಲ್ಲಿ ನಡೆದ ಪ್ರೇರಣಾ ಶಿಬಿರಗಳು, ರಾಜ್ಯ ಪುರಸ್ಕಾರ ಕಾರ್ಯಕ್ರಮಗಳು ಹಾಗೂ ಹೊಸ ಸ್ಕೌಟ್–ಗೈಡ್ ಘಟಕಗಳ ಉದ್ಘಾಟನೆಗಳು ಚಳವಳಿಗೆ ಹೊಸ ಚೈತನ್ಯ ನೀಡಿವೆ. ಆಗಸ್ಟ್ 24 ರಿಂದ 26 ರವರೆಗೆ ಚಾಮರಾಜನಗರ, ಹಾಸನ ಹಾಗೂ ಉಡುಪಿ ಜಿಲ್ಲೆಗಳಲ್ಲಿ ನಡೆದ ಶಿಕ್ಷಣಾಧಿಕಾರಿಗಳ ಮಾಹಿತಿ ಶಿಬಿರಗಳು, ಜಿಲ್ಲಾ ಸಭೆಗಳಲ್ಲಿ ಭಾಗವಹಿಸಿದ್ದು ಸಂತೋಷ ತಂದಿದೆ. ಮೂಡಬಿದಿರೆಯಲ್ಲಿ ನಡೆದ "ಆಳ್ವಾಸ್ ಪ್ರಗತಿ–2026" ಉದ್ಯೋಗ ಮೇಳವು ಯುವಜನರಿಗೆ ಕೌಶಲ್ಯಾಭಿವೃದ್ಧಿ ಹಾಗೂ ಉದ್ಯೋಗಾವಕಾಶಗಳನ್ನು ಕಲ್ಪಿಸುವ ಮಹತ್ವದ ವೇದಿಕೆಯಾಗಿ ಗಮನ ಸೆಳೆಯಿತು. ಉನ್ನತ ಶಿಕ್ಷಣ ಸಂಸ್ಥೆಗಳಲ್ಲಿ ಸ್ಕೌಟಿಂಗ್–ಗೈಡಿಂಗ್ ಚಟುವಟಿಕೆಗಳನ್ನು ವಿಸ್ತರಿಸುವ ನಿಟ್ಟಿನಲ್ಲಿ ಚಾಮರಾಜನಗರ ವಿಶ್ವವಿದ್ಯಾಲಯದ ಉಪಕುಲಪತಿಗಳೊಂದಿಗೆ ಚರ್ಚೆ ನಡೆಸಲಾಗಿದ್ದು, ಈ ಕುರಿತು ಸಕಾರಾತ್ಮಕ ಸ್ಪಂದನೆ ದೊರೆತಿರುವುದು ಸಂತಸದ ಸಂಗತಿಯಾಗಿದೆ.

ಒಟ್ಟಿನಲ್ಲಿ ಆಗಸ್ಟ್ ತಿಂಗಳು ರಾಜ್ಯ ಸಂಸ್ಥೆಯ ಪಾಲಿಗೆ ಅತ್ಯಂತ ಚಟುವಟಿಕೆಯ, ಅರ್ಥಪೂರ್ಣ ಹಾಗೂ ಫಲಪ್ರದ ತಿಂಗಳಾಗಿತ್ತೆಂದು ಭಾವಿಸುತ್ತೇನೆ. ಈ ತಿಂಗಳಲ್ಲಿ ಚಿಕ್ಕಬಳ್ಳಾಪುರ, ಮಧುಗಿರಿ, ಶಿರಸಿ, ಕೋಲಾರ, ಶಿವಮೊಗ್ಗ,ಬೆಳಗಾವಿ, ಬಳ್ಳಾರಿ, ಚಿತ್ರದುರ್ಗ, ತುಮಕೂರು, ಗುಲ್ಬರ್ಗ, ಯಾದಗಿರಿ, ರಾಯಚೂರು, ಮೈಸೂರು, ಚಾಮರಾಜನಗರ, ಹಾಸನ ಹಾಗೂ ಉಡುಪಿ ಜಿಲ್ಲೆಗಳು ಮತ್ತು ಬಂಟ್ವಾಳ, ಕುಂದಾಪುರ ಮೊದಲಾದ ಸ್ಥಳೀಯ ಸಂಸ್ಥೆಗಳಿಗೆ ಪ್ರವಾಸ ಕೈಗೊಂಡು, ಜಿಲ್ಲಾ ಮತ್ತು ಸ್ಥಳೀಯ ಸಂಸ್ಥೆಗಳ ಪದಾಧಿಕಾರಿಗಳು, ಶಿಕ್ಷಣ ಇಲಾಖೆಯ ಅಧಿಕಾರಿಗಳು, ಶಿಕ್ಷಕರು, ವಿದ್ಯಾರ್ಥಿಗಳು,  ಪೋಷಕರು ಹಾಗೂ ವಿವಿಧ ಸಂಘ ಸಂಸ್ಥೆಗಳ ಪ್ರತಿನಿಧಿಗಳೊಂದಿಗೆ ನೇರವಾಗಿ ಸಂವಾದ ನಡೆಸುವ ಅವಕಾಶ ದೊರೆಯಿತು.

ಈ ಪ್ರವಾಸಗಳ ಮೂಲಕ ರಾಜ್ಯದ ಬಹುತೇಕ ಜಿಲ್ಲೆಗಳ ಸ್ಕೌಟಿಂಗ್–ಗೈಡಿಂಗ್ ಚಟುವಟಿಕೆಗಳ ಪ್ರಗತಿ, ಸದಸ್ಯತ್ವ ವೃದ್ಧಿ, ಗುಣಮಟ್ಟ ಹಾಗೂ ಮುಂದಿನ ಕಾರ್ಯಯೋಜನೆಗಳ ಕುರಿತು ಸಮಾಲೋಚನೆ ನಡೆಸುವುದರ ಜೊತೆಗೆ, ನೆಲಮಟ್ಟದ ಕಾರ್ಯಕರ್ತರ ಸಮಸ್ಯೆಗಳನ್ನು ಆಲಿಸಲು, ಸಲಹೆಗಳನ್ನು ಸ್ವೀಕರಿಸಲು ಹಾಗೂ ಮುಂದಿನ ಕಾರ್ಯಯೋಜನೆಗಳಿಗೆ ಅಗತ್ಯ ಮಾರ್ಗದರ್ಶನ ನೀಡಲು ಸಾಧ್ಯವಾಯಿತು. ರಾಜ್ಯ ಸಂಸ್ಥೆಯ ಕಾರ್ಯಚಟುವಟಿಕೆಗಳು ಕೇಂದ್ರ ಕಚೇರಿಗೆ ಸೀಮಿತವಾಗಿರದೆ, ಪ್ರತಿಯೊಂದು  ಜಿಲ್ಲೆ ಹಾಗೂ ಸ್ಥಳೀಯ ಸಂಸ್ಥೆಗಳನ್ನು ತಲುಪಬೇಕು. ಈ ನಿಟ್ಟಿನಲ್ಲಿ ಪ್ರತಿಯೊಬ್ಬ ರಾಜ್ಯ ಪದಾಧಿಕಾರಿಯೂ ಸಾಧ್ಯವಾದಷ್ಟು ಜಿಲ್ಲೆಗಳಿಗೆ ಪ್ರವಾಸ ಮಾಡಿ, ಕಾರ್ಯಕರ್ತರು ಮತ್ತು ದಳನಾಯಕರೊಂದಿಗೆ ನೇರವಾಗಿ ಸಂವಾದ ನಡೆಸಬೇಕು ಎಂಬುದು ನನ್ನ ಕಳಕಳಿಯ ವಿನಂತಿಯಾಗಿದೆ. ನಮ್ಮ ಕಾರ್ಯಕರ್ತರ ಉತ್ಸಾಹ ಮತ್ತು ಬದ್ಧತೆಯೇ ರಾಜ್ಯ ಸಂಸ್ಥೆಯ ನಿಜವಾದ ಶಕ್ತಿ.

ಮುಂದಿನ ದಿನಗಳಲ್ಲಿ ಹೆಚ್ಚಿನ ಶಾಲೆ ಕಾಲೇಜುಗಳಲ್ಲಿ ಸ್ಕೌಟ್–ಗೈಡ್ ಘಟಕಗಳನ್ನು ಆರಂಭಿಸುವುದು, ರೋವರ್–ರೇಂಜರ್ ಚಟುವಟಿಕೆಗಳನ್ನು ಉನ್ನತ ಶಿಕ್ಷಣ ಸಂಸ್ಥೆಗಳಿಗೆ ವಿಸ್ತರಿಸುವುದು, ತರಬೇತಿ ವ್ಯವಸ್ಥೆಯನ್ನು ಬಲಪಡಿಸುವುದು ಹಾಗೂ ಗುಣಮಟ್ಟದ ಸ್ಕೌಟಿಂಗ್ ಶಿಕ್ಷಣವನ್ನು ಪ್ರತಿಯೊಬ್ಬ ವಿದ್ಯಾರ್ಥಿಗೂ ತಲುಪಿಸುವುದು ನಮ್ಮ ಪ್ರಮುಖ ಗುರಿಯಾಗಿದೆ. ಇದರ ಜೊತೆಗೆ ಪರಿಸರ ಸಂರಕ್ಷಣೆ, ಮಕ್ಕಳ ಸುರಕ್ಷತೆ, ಮಾದಕ ವ್ಯಸನಮುಕ್ತಿ, ಡಿಜಿಟಲ್ ಜಾಗೃತಿ, ಆರೋಗ್ಯ, ವಿಪತ್ತು ನಿರ್ವಹಣೆ ಹಾಗೂ ಯುವಜನರ ಕೌಶಲ್ಯಾಭಿವೃದ್ಧಿ ಕ್ಷೇತ್ರಗಳಲ್ಲಿ ಸ್ಕೌಟ್ಸ್ ಮತ್ತು ಗೈಡ್ಸ್‌ಗಳ ಸೇವಾ ಮನೋಭಾವವನ್ನು ಇನ್ನಷ್ಟು ಪರಿಣಾಮಕಾರಿಯಾಗಿ ಬಳಸಿಕೊಳ್ಳೋಣ.

ಸೆಪ್ಟೆಂಬರ್‌ನಲ್ಲಿ ಗಣೇಶ ಹಬ್ಬದ ಸಂದರ್ಭದಲ್ಲಿ "ನಮ್ಮ ಗಣೇಶ–ಪರಿಸರಸ್ನೇಹಿ ಗಣೇಶ" ಎಂಬ ಸಂದೇಶದೊಂದಿಗೆ ಕಬ್ಸ್– ಬುಲ್‌ಬುಲ್ಸ್, ಸ್ಕೌಟ್ಸ್–ಗೈಡ್ಸ್, ರೋವರ್ಸ್–ರೇಂಜರ್ಸ್‌ಗಳು ಪರಿಸರಸ್ನೇಹಿ ಗಣೇಶೋತ್ಸವ ಆಚರಿಸುವುದರ ಜೊತೆಗೆ, ಮಣ್ಣಿನ ಗಣಪತಿ, ನೈಸರ್ಗಿಕ ಬಣ್ಣಗಳು, ಪ್ಲಾಸ್ಟಿಕ್ ಮುಕ್ತ ಆಚರಣೆ ಹಾಗೂ ಜಲಮೂಲಗಳ ಸಂರಕ್ಷಣೆಯ ಕುರಿತು ಸಾರ್ವಜನಿಕರಲ್ಲಿ ಜಾಗೃತಿ ಮೂಡಿಸಬೇಕು. ಸೇವೆ ನಮ್ಮ ಶಕ್ತಿ – ಶಿಸ್ತು ನಮ್ಮ ಸಂಪತ್ತು – ನಾಯಕತ್ವ ನಮ್ಮ ಗುರಿ – ರಾಷ್ಟ್ರ ನಿರ್ಮಾಣ ನಮ್ಮ ಧ್ಯೇಯ". ಎಲ್ಲರ ಸಹಕಾರ, ಪ್ರೋತ್ಸಾಹ ಮತ್ತು ಮಾರ್ಗದರ್ಶನದೊಂದಿಗೆ ಕರ್ನಾಟಕವನ್ನು ಸ್ಕೌಟಿಂಗ್ ಮತ್ತು ಗೈಡಿಂಗ್ ಕ್ಷೇತ್ರದಲ್ಲಿ ದೇಶದ ಮಾದರಿ ರಾಜ್ಯವನ್ನಾಗಿ ರೂಪಿಸುವ ವಿಶ್ವಾಸ ನನಗಿದೆ.

ರಾಜ್ಯ ಸಂಸ್ಥೆಯಲ್ಲಿ ವಿವಿಧ ಹುದ್ದೆಗಳಲ್ಲಿ ಹಾಗೂ ರಾಷ್ಟ್ರೀಯ ಸಂಸ್ಥೆಯ ಕಾರ್ಯನಿರ್ವಾಹಕ ನಿರ್ದೇಶಕರಾಗಿ ಸೇವೆ ಸಲ್ಲಿಸಿದ್ದ ಶ್ರೀ ಟಿ.ಎಸ್.ಲೂಕಾಸ್ ಅವರು ದಿನಾಂಕ 24–08–2026 ರಂದು ದೈವಾಧೀನರಾದುದು ಅತ್ಯಂತ ದುಃಖದ ಸಂಗತಿಯಾಗಿದೆ. ಸ್ಕೌಟಿಂಗ್–ಗೈಡಿಂಗ್ ಚಳವಳಿಗೆ ಅವರು ಸಲ್ಲಿಸಿದ್ದ ಅಮೂಲ್ಯ ಸೇವೆ ಸದಾ ಸ್ಮರಣೀಯ. ಇವರ ಆತ್ಮಕ್ಕೆ ಚಿರಶಾಂತಿ ದೊರೆಯಲಿ ಹಾಗೂ ಅವರ ಕುಟುಂಬದವರು, ಬಂಧುಗಳು ಮತ್ತು ಅಭಿಮಾನಿಗಳಿಗೆ ದುಃಖವನ್ನು ಭರಿಸುವ ಶಕ್ತಿಯನ್ನು ಭಗವಂತನು ನೀಡಲಿ ಎಂದು ಪ್ರಾರ್ಥಿಸುತ್ತೇನೆ.

ಎಲ್ಲರಿಗೂ ಶುಭವಾಗಲಿ.

ತಮ್ಮ ವಿಶ್ವಾಸಿ

(ಪಿ.ಜಿ.ಆರ್. ಸಿಂಧ್ಯ)

ರಾಜ್ಯ ಮುಖ್ಯ ಆಯುಕ್ತರು

ಆಹಾರ ದೈವಿಕ ಸಂಪತ್ತು, ಅದನ್ನು ಸಂರಕ್ಷಿಸೋಣ
ಆಹಾರವನ್ನು ಉಳಿಸಿ, ಭವಿಷ್ಯವನ್ನು ಕಾಪಾಡಿ!



# ಹೃತ್ಪೂರ್ವಕ ಅಭಿನಂದನೆಗಳು

ಮಂಗಳೂರಿನ ಸಂತ ಅಲೋಶಿಯಸ್ ಗೊಂಝಗಾ ಶಾಲೆಯ ಪ್ರತಿಭಾವಂತ ಸ್ಕೌಟ್ ವಿದ್ಯಾರ್ಥಿಯಾಗಿರುವ **ಕು॥ ಅಶ್ಮಿತ್ ಎ.ಜೆ. ರವರು** ತನ್ನ ಮಧುರ ಕಂಠ ಹಾಗೂ ಅಪ್ರತಿಮ ಪ್ರತಿಭೆಯ ಮೂಲಕ ಝೀ ಕನ್ನಡ ವಾಹಿನಿಯ **'ಸ ರಿ ಗ ಮ ಪ ಲಿಟ್ಲ್ ಚಾಂಪ್ಸ್ 2026'ರ** ರಿಯಾಲಿಟಿ ಶೋನಲ್ಲಿ ಅದ್ಭುತ ಸಂಗೀತ ಪ್ರತಿಭೆಯನ್ನು ಪ್ರದರ್ಶಿಸಿ ಪ್ರಥಮ ಸ್ಥಾನ ಪಡೆದು 20ಲಕ್ಷ ರೂ. ಗಳ ಬಹುಮಾನ ಪಡೆದು ಮಹತ್ತರ ಸಾಧನೆ ಮಾಡಿ ರಾಜ್ಯದ ಜನತೆಯ ಮನಗೆದ್ದು, ಸಂಸ್ಥೆಗೆ ಕೀರ್ತಿ ತಂದಿರುವುದು ಅತ್ಯಂತ ಹೆಮ್ಮೆಯ ಸಂಗತಿಯಾಗಿದೆ.

ಈ ಹಿಂದೆ ಜಿಲ್ಲಾ ಹಾಗೂ ರಾಜ್ಯ ಮಟ್ಟದ ದೇಶಭಕ್ತಿ ಗೀತಗಾಯನ ಸ್ಪರ್ಧೆಗಳಲ್ಲಿ ಪ್ರಥಮ ಸ್ಥಾನ ಗಳಿಸಿ ತಮ್ಮ ಪ್ರತಿಭೆಯನ್ನು ಸಾಬೀತುಪಡಿಸಿದ್ದ ಕು॥ ಅಶ್ಮಿತ್ ರವರ ಈ ಸಾಧನೆ ಇನ್ನಷ್ಟು ಯುವ ಪ್ರತಿಭೆಗಳಿಗೆ ಪ್ರೇರಣೆಯಾಗಲಿ.

– ರಾಜ್ಯ ಕಾರ್ಯದರ್ಶಿ











# ಹೃತ್ಪೂರ್ವಕ ಅಭಿನಂದನೆಗಳು

ಕು. ಸುಜಾತಾ ಸುರೇಶ್ ನಾಯಕ್, ಸರ್ಕಾರಿ ಪ್ರಥಮದರ್ಜೆ ಮಹಾವಿದ್ಯಾಲಯ, ಶಿರಸಿ ಶೈಕ್ಷಣಿಕ ಜಿಲ್ಲೆ ಇವರು ಭಾರತ್ ಸ್ಕೌಟ್ಸ್ ಮತ್ತು ಗೈಡ್ಸ್ ಯುವ ಆಪದ್ ಮಿತ್ರ ಸ್ವಯಂಸೇವಕರು 80ನೇ ಸ್ವಾತಂತ್ರ್ಯ ದಿನಾಚರಣೆ ಪ್ರಯುಕ್ತ 2026ರ ಆಗಸ್ಟ್ 15ರಂದು ನವದೆಹಲಿಯ ರಾಷ್ಟ್ರಪತಿ ಭವನದಲ್ಲಿ ಗೌರವಾನ್ವಿತ ರಾಷ್ಟ್ರಪತಿಗಳಾದ ಶ್ರೀಮತಿ ದ್ರೌಪತಿ ಮುರ್ಮು ರವರ ಅಧ್ಯಕ್ಷತೆಯಲ್ಲಿ ಆರೋಜಿಸಲಾಗಿದ್ದ ಚಹಾಕೂಟದಲ್ಲಿ 'At Home Recepiton' ಕಾರ್ಯಕ್ರಮದಲ್ಲಿ ಭಾಗವಹಿಸಿದ್ದು ಹೆಮ್ಮೆಯ ವಿಷಯವಾಗಿದೆ.

ದೇಶದಾದ್ಯಂತ ಆಯ್ಕೆಯಾದ 05 ಯುವ ಆಪದಾ ಮಿತ್ರ ಸ್ವಯಂಸೇವಕರಲ್ಲಿ ಕರ್ನಾಟಕದ ರೇಂಜರ್ ವಿದ್ಯಾರ್ಥಿನಿ ಕು. ಸುಜಾತಾ ಸುರೇಶ್ ನಾಯಕ್ ಅವರು ಈ ಸ್ಥಾನ ಪಡೆದಿರುವುದು ಸಂತೋಷದಾಯಕವಾಗಿದೆ. ಈ ಆಯ್ಕೆಗೆ ಕಾರಣರಾದ ರಾಷ್ಟ್ರ ಹಾಗೂ ರಾಜ್ಯ ವಿಪತ್ತು ನಿರ್ವಹಣಾ ಅಧಿಕಾರಿಗಳಿಗೆ ಹೃತ್ಪೂರ್ವಕ ಧನ್ಯವಾದಗಳು.





ಈ ಪ್ರಯುಕ್ತ ಕರ್ನಾಟಕ ರಾಜ್ಯದ ಉಪಮುಖ್ಯಮಂತ್ರಿಗಳು ಹಾಗೂ ಕಂದಾಯ ಮತ್ತು ಕ್ರೀಡಾ ಸಚಿವರಾದ ಡಾ. ಜಿ. ಪರಮೇಶ್ವರ ರವರು ಕುಮಾರಿ ಸುಜಾತ ನಾಯಕ್‌ರನ್ನು ಸನ್ಮಾನಿಸಿ ಅಭಿನಂದಿಸಿದರು. ಈ ಸಂದರ್ಭದಲ್ಲಿ ಶ್ರೀ ಮನೋಜ್ ಕುಮಾರ್ ಮೀನಾ, ಭಾ.ಆ.ಸೇ., ಕಾರ್ಯದರ್ಶಿ, ಕಂದಾಯ ಇಲಾಖೆ, ಕರ್ನಾಟಕ ಸರ್ಕಾರ, ಶ್ರೀಮತಿ ಹೊನ್ನಾಂಬ, ಭಾ.ಆ.ಸೇ., ಆಯುಕ್ತರು, ಕರ್ನಾಟಕ ರಾಜ್ಯ ವಿಪತ್ತು ನಿರ್ವಹಣಾ ಪ್ರಾಧಿಕಾರ ಇವರುಗಳು ಉಪಸ್ಥಿತರಿದ್ದರು.

– ರಾಜ್ಯ ಕಾರ್ಯದರ್ಶಿ



# ಸಂಪಾದಕೀಯ



ಮಾನ್ಯರೆ,

ಉತ್ಸಾಹ ಭರಿತ, ಪ್ರಗತಿದಾಯಕ ದಿಕ್ಕಿನತ್ತ ಸ್ಕೌಟ್ಸ್ ಮತ್ತು ಗೈಡ್ಸ್ ಕರ್ನಾಟಕದ ದಿಟ್ಟ ಹೆಜ್ಜೆಗಳು.

"ಶಿಕ್ಷಣವೆಂದರೆ ಕೇವಲ ಪಠ್ಯಪುಸ್ತಕದ ಜ್ಞಾನ ಸಂಗ್ರಹಣೆ, ಪರೀಕ್ಷೆ ಮತ್ತು ಅಂಕಗಳಿಗೆ ಸೀಮಿತವಾಗದೆ ವಿದ್ಯಾರ್ಥಿಗಳ ದೈಹಿಕ, ಮಾನಸಿಕ, ಸಾಮಾಜಿಕ ಹಾಗೂ ಭಾವನಾತ್ಮಕ ಬೆಳವಣಿಗೆಗೂ ಆದ್ಯ ಕ್ರಮಗಳನ್ನು ವಹಿಸಬೇಕಾಗಿರುವುದು" ಸುವೇದ್ಯ. ಜೊತೆಗೆ ವಿದ್ಯಾರ್ಥಿಗಳಲ್ಲಿ ಪ್ರಾಮಾಣಿಕತೆ, ಪರಿಶ್ರಮ, ಒಳ್ಳೆಯದನ್ನು ಸಾಧಿಸಬೇಕೆಂಬ ಛಲ, ಒಳ್ಳೆಯ ಪೌರನಾಗಿ ತನ್ನ ಕುಟುಂಬಕ್ಕೆ, ದೇಶಕ್ಕೆ ತೋರಿಸಬೇಕಾದ ಗೌರವ, ಕರ್ತವ್ಯದ ಅರಿವು, ಮುಂತಾದವುಗಳನ್ನು ಅವರು ಹೊಂದುವಂತಾಗುವಲ್ಲಿ ಶಿಕ್ಷಣಾಸಕ್ತರೆಲ್ಲರೂ ಶ್ರಮವಹಿಸುವುದು ಅತ್ಯಗತ್ಯ. ವಿದ್ಯಾರ್ಥಿಗಳಿಗೆ ಒಳ್ಳೆಯ ಮಾರ್ಗದರ್ಶನದಿಂದ ಒಳ್ಳೆಯ ಯುವಪೀಳಿಗೆ ಸಾಧ್ಯ. ಒಳ್ಳೆಯ ಯುವ ಪೀಳಿಗೆಯಿಂದ ನಾಳಿನ ಭಾರತದ ಕನಸು ನನಸಾಗುತ್ತದೆ ಎಂಬುದನ್ನು ಮನಗಂಡು ಸರ್ವರೂ ಈ ಗುಣಾತ್ಮಕ ಶಿಕ್ಷಣದ ಸಾಧನೆಯನ್ನು ಹೊಂದುವಲ್ಲಿ ಶ್ರಮಿಸುತ್ತಿರುವುದು ಸರಿಯಷ್ಟೆ. ಅದರಂತೆ, ಮಾನ್ಯ ರಾಜ್ಯ ಮುಖ್ಯ ಆಯುಕ್ತರಾದ ಡಾ॥ ಪಿ.ಜಿ.ಆರ್.ಸಿಂಧ್ಯರವರ ಘನ ನೇತೃತ್ವದಲ್ಲಿ "ಶಿಕ್ಷಣವು ರಾಷ್ಟ್ರ ನಿರ್ಮಿಸುವ ಎಲ್ಲಾ ಶಕ್ತಿಗಳಿಗಿಂತಲೂ ಹೆಚ್ಚು ಮುಖ್ಯವೂ, ಪವಿತ್ರವೂ ಆಗಿದೆ" ಎಂಬುದನ್ನು ಮನಗಂಡು ಹಗಲಿರುಳೆನ್ನದೆ ಶ್ರಮಿಸುತ್ತಾ, ಮಾರ್ಗದರ್ಶನ ನೀಡುತ್ತಾ, ಭಾರತ್ ಸ್ಕೌಟ್ಸ್ ಮತ್ತು ಗೈಡ್ಸ್ ಚಳವಳಿಯ ಧ್ಯೇಯೋದ್ದೇಶಗಳನ್ನು ಸಾಕ್ಷಾತ್ಕಾರಗೊಳಿಸುವಲ್ಲಿ ತಮ್ಮೆಲ್ಲ ತಂಡಗಳೊಂದಿಗೆ ಮುನ್ನಡೆಯುತ್ತಿರುವುದು ಹರ್ಷದಾಯಕ.

ಮಾನ್ಯ ರಾಜ್ಯ ಮುಖ್ಯ ಆಯುಕ್ತರವರ ನೇತೃತ್ವದಲ್ಲಿ, ಕೇವಲ ರಾಜ್ಯದ ಎಲ್ಲಾ ಹಂತದ ಶಿಕ್ಷಣ ಇಲಾಖೆಗಳವರಲ್ಲದೆ, ಇತರೆ ಇಲಾಖೆಗಳವರೂ ಕೈಜೋಡಿಸಿ, ಯುವ ಶಕ್ತಿಯನ್ನು ಸನ್ಮಾರ್ಗದಲ್ಲಿ ಮುನ್ನಡೆಸುವಲ್ಲಿ ಕಾರ್ಯಚಟುವಟಿಕೆಗಳು ಅರ್ಥಗರ್ಭಿತವಾಗಿ, ಆಕರ್ಷಣೀಯವಾಗಿ ನಿರ್ವಹಣೆ ಆಗುತ್ತಿರುವುದು ಉಲ್ಲೇಖಾರ್ಹ. ಅದರಂತೆ, ಆಗಸ್ಟ್ 2026ರ ಮಾಹೆಯಲ್ಲಿ ಹತ್ತು-ಹಲವಾರು ಕಾರ್ಯಕ್ರಮಗಳು, ಚಟುವಟಿಕೆಗಳು ನಿರ್ವಹಣೆ ಆಗಿದ್ದು, ಅವುಗಳಲ್ಲಿ ಮುಖ್ಯವಾದವುಗಳು ಕೆಳಕಂಡಂತೆ ಇರುವವು.

ಆಗಸ್ಟ್ 01 ರಂದು ಏರ್ಪಟ್ಟ ಸ್ಕಾರ್ಫ್-ಡೇ ಸಮಾರಂಭವು ಭಾರತ್ ಸ್ಕೌಟ್ಸ್ ಮತ್ತು ಗೈಡ್ಸ್ ಸೇವಾ ಮನೋಭಾವನೆ, ನಾಯಕತ್ವ ಬೆಳೆಸುವ ಸಾಮರ್ಥ್ಯ, ಒಗ್ಗಟ್ಟಿನಿಂದ ಕಾರ್ಯನಿರ್ವಹಣೆ ಮತ್ತು ಸಾಮಾಜಿಕ ಜವಾಬ್ದಾರಿ ನಿರ್ವಹಣೆಯಲ್ಲಿ ನಮ್ಮಗಳೆಲ್ಲರ ಜವಾಬ್ದಾರಿಗಳನ್ನು ಪುನರ್ ಉಚ್ಛರಿಸಿ (Re-affirming) ಮತ್ತೊಮ್ಮೆ ಆ ಎಲ್ಲಾ ಜವಾಬಾರಿಯುತ ನಡವಳಿಕೆಗಳಿಗೆ ಪುನಃ ಸಮರ್ಪಿಸಿಕೊಳ್ಳುವ ಕಾರ್ಯವು (Re-connecting) ಯಶಸ್ವಿಯಾಗಿ ನಿರ್ವಹಣೆ ಆಗಿರುವುದು. ಈ ಸಂದರ್ಭದಲ್ಲಿ ಅನೇಕ ಗಣ್ಯಾತಿಗಣ್ಯರು ಭಾಗವಹಿಸಿ, ಸ್ಕೌಟ್ಸ್ ಮತ್ತು ಗೈಡ್ಸ್ ಚಳವಳಿಯ ಧ್ಯೇಯೋದ್ದೇಶಗಳ ಕಾರ್ಯಾನುಷ್ಠಾನದಲ್ಲಿ ತಮ್ಮಗಳೆಲ್ಲರ ಪ್ರೀತಿ, ಆಧರದ ಪ್ರೋತ್ಸಾಹ ನೀಡುವುದು, ನೀಡಲು ಸಮ್ಮತಿಸಿರುವುದು ಹೆಮ್ಮೆದಾಯಕ.

ಆಗಸ್ಟ್ 05 ರಂದು EMPRI ಮತ್ತು VANALOKA ರವರ ಸಹಯೋಗದೊಂದಿಗೆ, ನಿರ್ವಹಣೆ ಆಗಿ, ಪರಿಸರ ಜಾಗೃತಿ ಕಾರ್ಯಕ್ರಮ, ಚಟುವಟಿಕೆಗಳು ಎಲ್ಲರ ಆಧರಾಭಿಮಾನಕ್ಕೆ ಪಾತ್ರವಾಗಿ ಪರಿಸರ ಪ್ರಜ್ಞೆ, ಪರಿಸರ ಜಾಗೃತಿ ಬಗ್ಗೆ ಹೆಚ್ಚು ಪ್ರಭಾವವನ್ನುಂಟುಮಾಡಿರುವುದು.

ಆಗಸ್ಟ್ 15ರ ಸ್ವಾತಂತ್ರ್ಯೋತ್ಸವದ ದಿನಾಚರಣೆಯು ದಳ, ಸ್ಥಳೀಯ, ಜಿಲ್ಲೆ ಹಾಗೂ ರಾಜ್ಯ ಹಂತಗಳಲ್ಲಿ, ರಾಜ್ಯದ ಎಲ್ಲೆಡೆ ಅರ್ಥಪೂರ್ಣವಾಗಿ, ಉತ್ಸಾಹ ಭರಿತವಾಗಿ ನಿರ್ವಹಣೆ ಆಗಿ, ಸಾರ್ವಜನಿಕರೆಲ್ಲರ ಆಧರಾಭಿಮಾನಕ್ಕೆ ಪಾತ್ರವಾಗಿರುವುದನ್ನು ತಿಳಿಸಲು ಹರ್ಷಿಸುತ್ತೇನೆ. ಅಂದು ರಾಜ್ಯ ಸಂಸ್ಥೆಯ ಆವರಣದಲ್ಲಿ ಮಾನ್ಯ ಶ್ರೀ ಕೊಂಡಜ್ಜಿ ಬ. ಷಣ್ಮುಖಪ್ಪರವರ ಅಧ್ಯಕ್ಷತೆ ಮತ್ತು ಮಾನ್ಯ ನಾಡೋಜ ಡಾ॥ ಗೊ.ರು. ಚನ್ನಬಸಪ್ಪರವರಿಂದ ಏರ್ಪಟ್ಟ ಧ್ವಜಾರೋಹಣ ಕಾರ್ಯಕ್ರಮ ಮತ್ತು ಅವರುಗಳ ಸಂದೇಶಗಳು ಮನೋಜ್ಞವಾಗಿದ್ದವು. ನಮ್ಮ ಭಾರತ್ ಸ್ಕೌಟ್ಸ್ ಮತ್ತು ಗೈಡ್ಸ್‌ನ ಆರ್.ಟಿ.ನಗರ ಪಬ್ಲಿಕ್ ಶಾಲೆಯಲ್ಲಿನ ಸ್ಕೌಟ್ಸ್ ಮತ್ತು ಗೈಡ್ಸ್‌ಗಳು ರಾಜ್ಯ ಮಟ್ಟದ ಸ್ವಾತಂತ್ರ್ಯೋತ್ಸವ ಸಮಾರಂಭದ ಪಥಚಲನೆಯ ಸ್ಪರ್ಧೆಯಲ್ಲಿ ಶ್ರೇಷ್ಠ ಬಹುಮಾನ ಪಡೆದು, ಕರ್ನಾಟಕದ ಸನ್ಮಾನ್ಯ ಮುಖ್ಯ ಮಂತ್ರಿಗಳವರಿಂದ ಸನ್ಮಾನಿಸಲ್ಪಟ್ಟಿರುವುದು ಅಭಿನಂದನಾರ್ಹ. ಅಂದು ಸಂಜೆ ಏರ್ಪಟ್ಟ ಸಾಂಸ್ಕೃತಿಕ ಕಾರ್ಯಕ್ರಮವೂ ಬಹಳಷ್ಟು ಸ್ಫೂರ್ತಿದಾಯಕ ಆಗಿದ್ದಿತು.

ಪ್ರತಿ ತಿಂಗಳಂತೆ, ಈ ಆಗಸ್ಟ್ 2026ರ ಮಾಹೆಯಲ್ಲಿ ಪ್ರತಿ ಭಾನುವಾರ ಬೆಳಗ್ಗೆ 11 ರಿಂದ 12 ಗಂಟೆವರೆಗೆ ಆಯಾಯ ವಿಷಯ ತಜ್ಞರು / ಗಣ್ಯರಿಂದ ಈ ಕೆಳಕಂಡ ಸ್ಕೌಟ್-ಸ್ಕಿಲೋ ಕಾರ್ಯಕ್ರಮಗಳು ನಿರ್ವಹಿಸಲ್ಪಟ್ಟು ಸಾವಿರಾರು ವಿದ್ಯಾರ್ಥಿಗಳಲ್ಲಿ ಆ ಬಗ್ಗೆ ಹೆಚ್ಚು ಪ್ರಾವಿಣ್ಯತೆಯನ್ನು ಹೊಂದುವಲ್ಲಿ ಪೂರಕ ಮತ್ತು ಪ್ರೇರಕ ಆಗಿರುವುದು ಹರ್ಷದಾಯ.

| ದಿನಾಂಕ | ವಿಷಯ | ವಿಷಯ ತಜ್ಞರು |
|---|---|---|
| 02.08.2026 | ಸ್ಕಾರ್ಫ್-ಡೇ ಮಹತ್ವ | ಶ್ರೀ ಎನ್.ಶ್ರೀನಿವಾಸನ್, ಎಲ್.ಟಿ (ಸ್ಕೌ),<br>ಸಹಾಯಕ ರಾಜ್ಯ ಆಯುಕ್ತರು (ಸ್ಕೌಟ್ಸ್) |
| 09.08.2026 | Importance of<br>International Tribal Day | ಶ್ರೀ ಅರುಣ್‌ರಾವ್, ಅಧ್ಯಕ್ಷರು,<br>ಕರ್ನಾಟಕ ರಾಜ್ಯ ಲ್ಯಾಂಪ್ ಸಹಕಾರ ಮಹಾಮಂಡಳಿ, ಮೈಸೂರು |
| 16.08.2026 | ನಾಗರೀಕ ಪ್ರಾವಿಣ್ಯತಾ ಪದಕ ಮತ್ತು<br>ದಿ॥ ಶ್ರೀ ದೀನದಯಾಳು ನಾಯ್ಡುರವರ<br>ಜನ್ಮ ದಿನಾಚರಣೆ | ಶ್ರೀ ವಿ.ಎಸ್. ಉತ್ರಪ್ಪರವರು, ಮಾಜಿ ಸಂಸದರು |

| | | |
|---|---|---|
| 23.08.2026 | ಪರಂಪರೆ ಪ್ರಾವಿಣ್ಯತಾ ಪದಕ | ಡಾ॥ ತುಕಾರಾಂ, ಇತಿಹಾಸಕಾರರು ಮತ್ತು ಸಂಸ್ಥಾಪಕರು ರಾಣಿ ಅಬ್ಬಕ್ಕ ತುಳು ಅಧ್ಯಯನ ಕೇಂದ್ರ, ಬಂಟ್ವಾಳ |
| 30.08.2026 | Nutritional Anemia | ಡಾ॥ ಅಖಿಲಾ ಆರ್ಕಾಟ್ ವೆಡಿವೇಲನ್ ಅಸಿಸ್ಟೆಂಟ್ ಪ್ರೊಫೆಸರ್, ಅಮೇರಿಕಾ |

ಆಗಸ್ಟ್ 31ರಂದು ಡಾ॥ ವಿದ್ಯಾ ಶಂಕರ್‌ರವರು, ಉಪಕುಲಪತಿಗಳು, ವಿಶ್ವೇಶ್ವರಯ್ಯ ತಾಂತ್ರಿಕ ವಿದ್ಯಾಲಯರವರ ಅಧ್ಯಕ್ಷತೆಯಲ್ಲಿ, ಮಾನ್ಯ ಡಾ॥ ಪಿ.ಜಿ.ಆರ್.ಸಿಂಧ್ಯ, ರಾಜ್ಯ ಮುಖ್ಯ ಆಯುಕ್ತರವರ ನೇತೃತ್ವದಲ್ಲಿ ನಡೆದ ಸಭೆಯಲ್ಲಿ ಭಾರತ್ ಸ್ಕೌಟ್ಸ್ ಮತ್ತು ಗೈಡ್ಸ್ ಚಳವಳಿಯಲ್ಲಿ ಗುಣಾತ್ಮಕ ತರಬೇತಿ, ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲು ಮತ್ತು Scouts and Guides Certificate Course ನಿರ್ವಹಿಸುವಲ್ಲಿ ಮತ್ತು ಈ ಚಳವಳಿಯ ಶ್ರೇಷ್ಠತೆಯನ್ನು ಹೆಚ್ಚು-ಹೆಚ್ಚು ಕಾರ್ಯಾನುಷ್ಠಾನಗೊಳಿಸುವಲ್ಲಿ ತಮ್ಮ ಸಂಪೂರ್ಣ ಸಲಹೆ-ಸಹಕಾರ ನೀಡುವುದಾಗಿ ಮಾನ್ಯ ಉಪಕುಲಪತಿಗಳು ಹರ್ಷದಿಂದ ತಿಳಿಸಿರುವುದು ನಮಗೆಲ್ಲ ಅತ್ಯಾನಂದ ಆಗಿರುವುದು. ಅವರು ಸ್ಕೌಟ್ಸ್ ಮತ್ತು ಗೈಡ್ಸ್ ಚಳವಳಿಯ ಧ್ಯೇಯೋದ್ದೇಶಗಳ ಬಗ್ಗೆ, ಅವುಗಳ ಸಕ್ರಿಯ ನಿರ್ವಹಣೆಯಲ್ಲಿ ನಮ್ಮ ರಾಜ್ಯ ಮುಖ್ಯ ಆಯುಕ್ತರವರೊಂದಿಗೆ, ಅವರ ಮಹದಾಶೆಯಂತೆ, ಸಕ್ರಿಯವಾಗಿ ನಿರ್ವಹಿಸಲು ಸಮ್ಮತಿಸಿರುವುದು ಸ್ಕೌಟ್ಸ್-ಗೈಡ್ಸ್ ಕರ್ನಾಟಕ ಸಂಸ್ಥೆಯ ಹೆಗ್ಗಳಿಕೆ ಆಗಿರುವುದು.

ಮೇಲ್ಕಂಡಂತೆ ಗುಣಾತ್ಮಕ ಸ್ಕೌಟ್ಸ್ ಮತ್ತು ಗೈಡ್ಸ್ ಶಿಕ್ಷಣದ ಸಾಧನೆಯಲ್ಲಿ ಕೆಲವು ಮುಖ್ಯ ಕಾರ್ಯಕ್ರಮಗಳು, ಚಟುವಟಿಕೆಗಳಲ್ಲದೆ, ಇದಕ್ಕೆ ಪೂರಕವಾಗಿ ಹಲವಾರು ತರಬೇತಿಗಳು, ಆನ್‌ಲೈನ್ ಸಭೆಗಳು, ಪ್ರೇರಣಾ ಕಾರ್ಯಕ್ರಮಗಳು, ಪರಿಸರಸ್ನೇಹಿ ಗಣಪತಿ ಸಿದ್ಧತೆ / ಮಾರ್ಗದರ್ಶನ ಕಾರ್ಯಗಳು, ಮುಂತಾದವುಗಳೆಲ್ಲವೂ ಸಕಾಲದಲ್ಲಿ ಸಮರ್ಪಕವಾಗಿ ನಿರ್ವಹಣೆ ಆಗಿದ್ದು, ಆ ಎಲ್ಲಾ ಕಾರ್ಯಕ್ರಮಗಳು ಚಟುವಟಿಕೆಗಳು, ತರಬೇತಿಗಳಲ್ಲಿ ಸಹಕರಿಸಿ, ನಿರ್ವಹಿಸಿ, ಯಶಸ್ವಿಗೊಳಿಸಿ, ಯುವಜನಾಂಗದವರಲ್ಲಿ ಉತ್ಸಾಹ ತುಂಬಿ, ಪ್ರೇರಣೆ ನೀಡಿದ / ನೀಡುತ್ತಿರುವ ಪ್ರತಿಯೊಬ್ಬರಿಗೂ ಭಾರತ್ ಸ್ಕೌಟ್ಸ್ ಮತ್ತು ಗೈಡ್ಸ್ ಕರ್ನಾಟಕ ರಾಜ್ಯ ಸಂಸ್ಥೆಯ ಪರವಾಗಿ ಅನಂತಾನಂತ ಅಭಿನಂದನೆಗಳೊಂದಿಗೆ ಕೃತಜ್ಞತೆಗಳನ್ನು ಈ ಮೂಲಕ ತಿಳಿಸಬಯಸುತ್ತೇನೆ.

ಸ್ಕೌಟ್ಸ್-ಗೈಡ್ಸ್ ವಂದನೆಗಳೊಂದಿಗೆ,

ತಮ್ಮ ವಿಶ್ವಾಸಿ

(ಕೆ. ಗಂಗಪ್ಪಗೌಡ)

ಸಂಪಾದಕರು ಹಾಗೂ ರಾಜ್ಯ ಕಾರ್ಯದರ್ಶಿ

ಭಾರತ್ ಸ್ಕೌಟ್ಸ್ ಮತ್ತು ಗೈಡ್ಸ್, ಕರ್ನಾಟಕ

## ವಿವಿಧ ಜಿಲ್ಲೆಗಳಲ್ಲಿ ನಡೆದ ಚಟುವಟಿಕೆಗಳಲ್ಲಿ ಭಾಗವಹಿಸಿದ ಕಬ್ಸ್-ಬುಲ್‌ಬುಲ್ಸ್, ಸ್ಕೌಟ್ಸ್-ಗೈಡ್ಸ್‌ಗಳ ವಿಹಂಗಮ ನೋಟ



ಬೆಂಗಳೂರು ಪೂರ್ವ



ದಾವಣಗೆರೆ



ಬಳ್ಳಾರಿ



ಬೆಂಗಳೂರು ಉತ್ತರ



ಬೆಂಗಳೂರು ದಕ್ಷಿಣ



ಕೋಲಾರ

# ವಿಶ್ವ ಸ್ಕೌಟ್ ಸ್ಕಾರ್ಫ್ ದಿನಾಚರಣೆ




‘ಯುವಕರು, ವಿದ್ಯಾರ್ಥಿಗಳು ಬಲಿಷ್ಠರಾದರೆ ದೇಶ ಬಲಿಷ್ಠ’ –ಸಚಿವ ಶ್ರೀ ಯು.ಟಿ.ಖಾದರ್.

ಆಗಸ್ಟ್ 01 ರಂದು ರಾಜ್ಯ ಸಂಸ್ಥೆ ವತಿಯಿಂದ ‘ವಿಶ್ವ ಸ್ಕೌಟ್ ಸ್ಕಾರ್ಫ್ ದಿನಾಚರಣೆ’ಯ ಕಾರ್ಯಕ್ರಮವನ್ನು ಕೊಂಡಜ್ಜಿ ಬಸಪ್ಪ ಸಭಾಂಗಣ, ರಾಜ್ಯ ಕೇಂದ್ರ ಕಛೇರಿ, ಶಾಂತಿಗೃಹ, ಬೆಂಗಳೂರು ಇಲ್ಲಿ ಆಯೋಜಿಸಲಾಗಿತ್ತು.

ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವ ಶ್ರೀ ಯು.ಟಿ. ಖಾದರ್, ಭಾರತ್ ಸ್ಕೌಟ್ಸ್ ಮತ್ತು ಗೈಡ್ಸ್ ಕರ್ನಾಟಕ ರಾಜ್ಯ ಮುಖ್ಯ ಆಯುಕ್ತರಾದ ಡಾ॥ ಪಿ.ಜಿ.ಆರ್. ಸಿಂಧ್ಯ ರವರು ಕಾರ್ಯಕ್ರಮವನ್ನು ಉದ್ಘಾಟಿಸಿದರು.

ಶ್ರೀ ಯು.ಟಿ. ಖಾದರ್‌ರವರು ಮಾತನಾಡಿ, ಸ್ಕೌಟ್ಸ್ ಮತ್ತು ಗೈಡ್ಸ್‌ನಿಂದ ಪಡೆದ ತರಬೇತಿ, ಶಿಸ್ತಿನಿಂದ ನಾನು ಈ ಮಟ್ಟಕ್ಕೆ ಬೆಳೆದು ಬರಲು ಸಾಧ್ಯವಾಗಿದೆ. ವಿದ್ಯಾರ್ಥಿಗಳಿಗೆ ಸ್ಕೌಟ್ ಮತ್ತು ಗೈಡ್ ಸಂಸ್ಥೆಯ ವತಿಯಿಂದ ಕೊಡುವ ತರಬೇತಿ ಈ ದೇಶಕ್ಕೆ ಅವರು ಉತ್ತಮ ಕೊಡುಗೆ ನೀಡಲು ಸಾಧ್ಯವಾಗುತ್ತದೆ. ಯುವಕರು, ವಿದ್ಯಾರ್ಥಿಗಳು ಬಲಿಷ್ಠವಾದಾಗ ಮಾತ್ರ ದೇಶ ಬಲಿಷ್ಠವಾಗಲು ಸಾಧ್ಯ. ಈ ಹಿನ್ನಲೆಯಲ್ಲಿ ಈ ಸಂಸ್ಥೆಯಲ್ಲಿ ಉತ್ತಮ ತರಬೇತಿ ನೀಡಲಾಗುತ್ತದೆ ಎಂದು ಹೇಳಿದರು.

ಡಾ॥ ಪಿ.ಜಿ.ಆರ್ ಸಿಂಧ್ಯರವರು ಮಾತನಾಡಿ, ಆರೋಗ್ಯ ಸಚಿವರಾದ ಶ್ರೀ ಯು .ಟಿ. ಖಾದರ್ ಅವರು ನಮ್ಮ ಸಂಸ್ಥೆಯನ್ನು ರಾಷ್ಟ್ರೀಯ ಮಟ್ಟದಲ್ಲಿ ಬೆಳೆಯಲು ತಮ್ಮದೇ ಆದ ಸಹಕಾರ ನೀಡುತ್ತಿದ್ದಾರೆ. ಆಗಸ್ಟ್ 1ನೇ ತಾರೀಖು ಮಹತ್ವದ ದಿನವಾಗಿದೆ. ಅಂತರಾಷ್ಟ್ರೀಯ ಮಟ್ಟದಲ್ಲಿ ಈ ದಿನವನ್ನು ಆಚರಿಸಲಾಗುತ್ತದೆ. ಸ್ಕಾರ್ಫ್ ದಿನಾಚರಣೆಯ ಕಾರ್ಯಕ್ಕೆ ಎಲ್ಲರ ಸಹಕಾರ ಇರಲಿ ಎಂದು ಅನೇಕರನ್ನು ಆಹ್ವಾನಿಸಲಾಗಿದೆ ಎಂದು ಹೇಳಿದರು.

ನಂತರ ಗಿಡ ನೆಡುವ ಮೂಲಕ ಸ್ಕೌಟ್ಸ್ ಮತ್ತು ಗೈಡ್ ಸಂಸ್ಥೆ ಮುನ್ನಡೆಸುವ ಕುರಿತು ಪ್ರತಿಜ್ಞಾವಿಧಿ ಸ್ವೀಕರಿಸಲಾಯಿತು.

ಶ್ರೀ ಕೆ. ಗಂಗಪ್ಪ ಗೌಡ, ರಾಜ್ಯ ಕಾರ್ಯದರ್ಶಿ, ಶ್ರೀ ಎಂ. ಪ್ರಭಾಕರ್ ಭಟ್, ಎಸ್.ಒ.ಸಿ(ಸ್ಕೌ), ಹಿರಿಯ ನಿವೃತ್ತ ಐಎಎಸ್ ಅಧಿಕಾರಿ ಶ್ರೀ ಕೆ. ಅಮರನಾರಾಯಣ, ಸಮಾಜ ಸೇವಕಿ ಶ್ರೀಮತಿ ರುತ್ ಮನೋರಮಾ, ಪ್ರೊ. ರಾಧಾಕೃಷ್ಣ, ಚಲನಚಿತ್ರ ನಟ ಶ್ರೀ ಗಣೇಶ್ ರಾವ್, ಶ್ರೀ ಕೇಸರ್ ಕರ್, ಜೆಡಿಎಸ್ ನಗರ ಕಾರ್ಯಾಧ್ಯಕ್ಷ ಶ್ರೀ ತುಳಸೀರಾಮ್, ವಾಣಿಜ್ಯ ತೆರಿಗೆ ಇಲಾಖೆಯ ನಿವೃತ್ತ ಅಧಿಕಾರಿಗಳಾದ ಶ್ರೀಮತಿ ಸುಲ್ತಾನ ಬೇಗಂ, ಅಹಿಂದ ಸಂಸ್ಥೆಯ ಶ್ರೀ ಮೂರ್ತಿ ಮತ್ತಿತರರು ಭಾಗವಹಿಸಿದ್ದರು.








# 80ನೇ ಸ್ವಾತಂತ್ರ್ಯ ದಿನಾಚರಣೆ ಕಾರ್ಯಕ್ರಮ



ಆಗಸ್ಟ್ 15 ರಂದು ರಾಜ್ಯ ಕೇಂದ್ರ ಕಛೇರಿ, ಶಾಂತಿಗೃಹ ಆವರಣದಲ್ಲಿ 80ನೇ ಸ್ವಾತಂತ್ರ್ಯ ದಿನಾಚರಣೆಯನ್ನು ಆಚರಿಸಲಾಯಿತು. ನಾಡೋಜ ಡಾ॥ ಗೊ.ರು. ಚನ್ನಬಸಪ್ಪನವರು, ಸಾಹಿತಿಗಳು, ಪ್ರಕಟಣಾ ಸಮಿತಿ ಅಧ್ಯಕ್ಷರು ಇವರು 80ನೇ ಸ್ವಾತಂತ್ರ್ಯೋತ್ಸವದ ರಾಷ್ಟ್ರಧ್ವಜವನ್ನು ಆರೋಹಿಸಿ, ಸ್ವಾತಂತ್ರ್ಯೋತ್ಸವದ ಮಹತ್ವ ಹಾಗೂ ಸ್ವಾತಂತ್ರ್ಯ ಎಂದರೇನು, ಸ್ವಾತಂತ್ರ್ಯವನ್ನು ಹೇಗೆ ಆಚರಣೆ ಮಾಡಬೇಕು ಎಂಬುದರ ಬಗ್ಗೆ ಮಾತನಾಡಿ, ಜೀವನದ ಎಲ್ಲಾ ಅಂಶಗಳಿಗೂ ಸಂಬಂಧಿಸಿದಂತೆ ಹೇಗೆ ನಡೆದುಕೊಳ್ಳಬೇಕು, ಸ್ವಾತಂತ್ರ್ಯ ಹೋರಾಟಗಾರರ ತ್ಯಾಗ, ಬಲಿದಾನ, ಮಕ್ಕಳ ಜೀವನ ಶೈಲಿ, ಕರ್ತವ್ಯಗಳು ಇತ್ಯಾದಿ ಅಂಶಗಳನ್ನು ಅರ್ಥಪೂರ್ಣವಾಗಿ ತಿಳಿಸಿದರು ಹಾಗೂ ಕಬ್ಸ್, ಬುಲ್‌ಬುಲ್ಸ್, ಸ್ಕೌಟ್ಸ್, ಗೈಡ್ಸ್, ರೋವರ್ಸ್, ರೇಂಜರ್ಸ್‌ಗಳನ್ನು ಪ್ರೋತ್ಸಾಹಿಸಿದರು.

ಕಾರ್ಯಕ್ರಮದಲ್ಲಿ ರಾಜ್ಯ ಉಪಾಧ್ಯಕ್ಷರಾದ ಶ್ರೀ ಕೊಂಡಜ್ಜಿ ಬ. ಷಣ್ಮುಖಪ್ಪನವರು ಮಾತನಾಡಿ ಮಲ್ಲೇಶ್ವರಂನ ಕ್ಲೂನಿ ಕಾನ್ವೆಂಟ್ ಶಾಲೆಯ ಬುಲ್‌ಬುಲ್ಸ್‌ಗಳು ಸ್ವಾತಂತ್ರ್ಯ ಸಂಗ್ರಾಮದಲ್ಲಿ ಭಾಗವಹಿಸಿದ ರಾಜ್ಯದ ಹಾಗೂ ರಾಷ್ಟ್ರದ ಪ್ರಮುಖರ ಸಚಿತ್ರಗಳನ್ನು ಅತ್ಯಂತ ಮನೋಜ್ಞವಾಗಿ ಪ್ರದರ್ಶಿಸಿದವರನ್ನು ಹೃತ್ಪೂರ್ವಕವಾಗಿ ಅಭಿನಂದಿಸಿದರು. ಈ ಕಾರ್ಯಕ್ರಮವನ್ನು ಯಶಸ್ವಿಯಾಗಲು ಸಹಕರಿಸಿದ, ಕ್ಲೂನಿ ಕಾನ್ವೆಂಟ್ ಶಾಲೆಯ ಫ್ಲಾಕ್ ವಿಭಾಗಗಳ ನಾಯಕಿಯರುಗಳಿಗೆ ಹಾಗೂ ಮಕ್ಕಳ ಪೋಷಕರುಗಳಿಗೆ ಹೃತ್ಪೂರ್ವಕ ಅಭಿನಂದನೆಗಳನ್ನು ಸಲ್ಲಿಸಿದರು. ಕರ್ನಾಟಕದ ಸಾಕ್ಷಿ ಪ್ರಜ್ಞೆಯಂದೇ ಗುರುತಿಸಿಕೊಂಡಿರುವ ಡಾ. ಗೊ.ರು. ಚೆನ್ನಬಸಪ್ಪನವರ ಸುದೀರ್ಘವಾದ ಚಿಂತನೆಗಳನ್ನು ಕೇಳುವ ಸದಾವಕಾಶ ಒದಗಿಸಿದ ರಾಜ್ಯ ಸಂಸ್ಥೆಗೆ ಕೃತಜ್ಞತೆ ಸಲ್ಲಿಸಿದರು.

ಶ್ರೀಮತಿ ಬಿ.ವಿ. ರಾಮಲತ, ರಾಜ್ಯ ಆಯುಕ್ತರು(ಗೈ) ವಯಸ್ಕ ಸಂಪನ್ಮೂಲರವರು ಹಾಗೂ ಶ್ರೀ ಕೆ. ಗಂಗಪ್ಪಗೌಡ, ರಾಜ್ಯ ಕಾರ್ಯದರ್ಶಿಗಳು ಮುಖ್ಯ ಅತಿಥಿಗಳಾಗಿ ಭಾಗವಹಿಸಿದ್ದರು. ಈ ಸಂದರ್ಭದಲ್ಲಿ ಕ್ಲೂನಿ ಕಾನ್ವೆಂಟ್‌ನ ಬುಲ್‌ಬುಲ್ಸ್‌ಗಳು ಹಾಗೂ ಜ್ಯೋತಿ ನಿವಾಸ ಕಾಲೇಜಿನ ರೇಂಜರ್ಸ್‌ಗಳು ಭಾಗವಹಿಸಿದ್ದರು ಹಾಗೂ ಅತ್ಯುತ್ತಮವಾಗಿ ದೇಶಭಕ್ತಿ ಸಿಂಚನದ ನೃತ್ಯ, ಹಾಡು ಹಾಗೂ ರಾಣಿ ಚೆನ್ನಮ್ಮ, ಭಗತ್‌ಸಿಂಗ್, ಮಹಾತ್ಮಗಾಂಧಿ, ಸಾವಿತ್ರಿಬಾಯಿ ಫುಲೆ, ರಾಣಿ ಅಬ್ಬಕ್ಕ, ಒನಕೆ ಓಬವ್ವ, ಮದರ್ ಥೆರೆಸಾ, ನೇತಾಜಿ ಸುಭಾಷ್‌ಚಂದ್ರ ಬೋಸ್, ಅಂಬೇಡ್ಕರ್, ಇತ್ಯಾದಿ ಸ್ವಾತಂತ್ರ್ಯ ಹೋರಾಟಗಾರರ ವೇಷಭೂಷಣಗಳೊಂದಿಗೆ ಅವರ ಪರಿಚಯ ಮಾಡಿಕೊಳ್ಳುವ ಮೂಲಕ ಉತ್ತಮ ಪ್ರದರ್ಶನವನ್ನು ನೀಡಿದರು. ಕ್ಲೂನಿ ಕಾನ್ವೆಂಟ್‌ನ ಹಿರಿಯ ಉಪಧ್ಯಾಯಿಣಿ ಹಾಗೂ ಫ್ಲಾಕ್ ತರಬೇತಿ ನಾಕಿಯಾದ ಶ್ರೀಮತಿ ಮೇರಿ ಫಿಲೋಮಿನಾ, ಎಲ್.ಟಿ. (ಬುಲ್‌ಬುಲ್) ಹಾಗೂ ಸಂಸ್ಥೆಯ ಕಬ್–ಬುಲ್‌ಬುಲ್ಸ್ ವಿಭಾಗದ ಶಿಕ್ಷಕರು ಸಹಕರಿಸಿದರು.

ಶ್ರೀ ಎನ್. ಶ್ರೀನಿವಾಸನ್, ಸಹಾಯಕ ರಾಜ್ಯ ಆಯುಕ್ತರು(ಸ್ಕೌ), ಶ್ರೀಮತಿ ಅರ್ಪಿತಾ ಕೊಂಡಜ್ಜಿ, ಕೇಂದ್ರ ಸ್ಥಾನಿಕ ಆಯುಕ್ತರು(ಗೈ), ಶ್ರೀಮತಿ ಹೆಲೆನ್ ಲೋಬೋ, ಶ್ರೀಮತಿ ಮುಕ್ತಾ ಕಾಗಲಿ, ಕೇಂದ್ರ ಸ್ಥಾನಿಕ ಆಯುಕ್ತರು, ಶ್ರೀ ಗುಪ್ತಾ, ಶ್ರೀ ಎಲ್.ಟಿ. ಲೋಕೇಶ್, ಶ್ರೀ ನಾಗೇಶ್ ಶಿವಪುರ್, ಶ್ರೀ ಕೆ.ಹೆಚ್. ಜಯರಾಮಯ್ಯ, ಶ್ರೀಮತಿ ಕುಮಾರಿ ಹೊನ್ನಮ್ಮ, ರಾಜ್ಯ ಸಂಸ್ಥೆಯ ಪದಾಧಿಕಾರಿಗಳು, ಸಿಬ್ಬಂದಿ ವರ್ಗದವರು ಹಾಗೂ ಸ್ಕೌಟರ್ಸ್ & ಗೈಡರ್ಸ್ ಭಾಗವಹಿಸಿ ಕಾರ್ಯಕ್ರಮವನ್ನು ಯಶಸ್ವಿಯಾಗಿ ನೆರವೇರಿಸಲಾಯಿತು.





# ಸ್ವಾತಂತ್ರ್ಯೋತ್ಸವ ಸಾಂಸ್ಕೃತಿಕ ಸಂಜೆ




**‘ಹಕ್ಕುಗಳ ಜೊತೆಗೆ ಜವಾಬ್ದಾರಿಗಳನ್ನು ಅರಿತುಕೊಳ್ಳಬೇಕು’ –ಶ್ರೀ ಎಂ.ಎಸ್ ಸಂತೋಷ್**

ಆಗಸ್ಟ್ 15 ರಂದು ಸಂಜೆ 5 ಗಂಟೆಗೆ ಸ್ವಾತಂತ್ರ್ಯೋತ್ಸವ ಸಾಂಸ್ಕೃತಿಕ ಸಂಜೆ ಕಾರ್ಯಕ್ರಮವನ್ನು ಕೊಂಡಜ್ಜಿ ಬಸಪ್ಪ ಸಭಾಂಗಣ, ರಾಜ್ಯ ಕೇಂದ್ರ ಕಛೇರಿ, ಶಾಂತಿಗೃಹ, ಬೆಂಗಳೂರು ಇಲ್ಲಿ ಆಯೋಜಿಸಲಾಗಿತ್ತು. ಸಾಂಸ್ಕೃತಿಕ ಸಂಜೆ ಕಾರ್ಯಕ್ರಮವನ್ನು ದೀಪ ಬೆಳಗಿಸುವ ಮೂಲಕ ಉದ್ಘಾಟಿಸಿ ಮಾತನಾಡಿದ ಶ್ರೀಮತಿ ಸೌಮ್ಯ ರೆಡ್ಡಿ, ಮಾನ್ಯ ಮಾಜಿ ಶಾಸಕರು ‘ಸ್ವಾತಂತ್ರ್ಯವನ್ನು ಅನುಭವಿಸುವ ರೀತಿಯಲ್ಲಿಯೇ ದೇಶಕ್ಕೆ ಒಳಿತಾಗುವಂತಹ ಜವಾಬ್ದಾರಿಯುತ ನಡೆಗಳನ್ನು ಅನುಸರಿಸಬೇಕು. ಈ ನಿಟ್ಟಿನಲ್ಲಿ ಸ್ಕೌಟ್ಸ್ ಮತ್ತು ಗೈಡ್ಸ್ ಹಾಗೂ ಎನ್.ಸಿ.ಸಿ ಯಂತಹ ಚಟುವಟಿಕೆಗಳಲ್ಲಿ ಮಕ್ಕಳು ಸಕ್ರಿಯವಾಗಿ ತೊಡಗಿಕೊಳ್ಳುವುದರಿಂದ ಅವರಲ್ಲಿ ಸದ್ಗುಣಗಳು ಮತ್ತು ವ್ಯಕ್ತಿತ್ವ ವಿಕಸನವಾಗುತ್ತದೆ. ಅವರನ್ನು ದೇಶದ ಸದೃಢ ಪ್ರಜೆಗಳನ್ನಾಗಿ ರೂಪಿಸಲು ನೆರವಾಗುತ್ತದೆ’ ಎಂದರು.

‘ಇಲ್ಲಿ ಒಬ್ಬ ವಿದ್ಯಾರ್ಥಿನಿ ದೇಶವನ್ನು ಸ್ವಚ್ಛವಾಗಿಡಲು ಪ್ರಧಾನಿಯಾಗುವ ಆಸೆ ವ್ಯಕ್ತಪಡಿಸಿದ್ದನ್ನು ನೋಡಿ ಸಂತಸವಾಯಿತು. ಆದರೆ ದುರದೃಷ್ಟವಶಾತ್ ಅನೇಕ ಹಿರಿಯರಲ್ಲಿ ಈ ರೀತಿಯ ನಾಗರಿಕ ಕರ್ತವ್ಯ ಪ್ರಜ್ಞೆಯ ಕೊರತೆಯಿದೆ. ಸಮಾಜ ಮತ್ತು ದೇಶದ ಏಳಿಗೆಗಾಗಿ ಪ್ರತಿಯೊಬ್ಬರೂ ತಮ್ಮಲ್ಲಿ ನಾಗರಿಕ ಪ್ರಜ್ಞೆಯನ್ನು ಬೆಳೆಸಿಕೊಳ್ಳುವುದು ಅಗತ್ಯವಾಗಿದೆ ಎಂದು ಹೇಳಿದರು. ಸಂಸ್ಥೆಯ ಮುಖ್ಯ ಆಯುಕ್ತರಾದ ಡಾ. ಪಿ.ಜಿ.ಆರ್. ಸಿಂಧ್ಯ ಅವರ ನಾಯಕತ್ವದಲ್ಲಿ ಭಾರತ್ ಸ್ಕೌಟ್ಸ್ ಮತ್ತು ಗೈಡ್ಸ್ ಸಂಸ್ಥೆಯು ಲಕ್ಷಾಂತರ ಮಕ್ಕಳಿಗೆ ಶಿಸ್ತು, ಸಮಾಜ ಸೇವೆ ಹಾಗೂ ನಾಯಕತ್ವದ ಮೌಲ್ಯಗಳನ್ನು ಧಾರೆ ಎರೆಯುತ್ತಿದೆ. ಈ ಸಂಸ್ಥೆಯ ವಿಚಾರಧಾರೆಯಡಿ ಬೆಳೆಯುತ್ತಿರುವ ಮಕ್ಕಳು ದೇಶದ ಉತ್ತಮ ಪ್ರಜೆಗಳಾಗಲಿದ್ದಾರೆ’ ಎಂದು ವಿಶ್ವಾಸ ವ್ಯಕ್ತಪಡಿಸಿದರು.

‘ದೇಶಾದ್ಯಂತ ಸಂಭ್ರಮದ ಸ್ವಾತಂತ್ರ್ಯ ದಿನಾಚರಣೆಯ ವಾತಾವರಣ ನೆಲೆಸಿದ್ದು, ನಾವು 79 ವರ್ಷಗಳನ್ನು ಪೂರೈಸಿ 80ನೇ ವರ್ಷದ ಸ್ವಾತಂತ್ರ್ಯೋತ್ಸವಕ್ಕೆ ಪಾದಾರ್ಪಣೆ ಮಾಡುತ್ತಿದ್ದೇವೆ. ಈ ಶುಭ ಸಂದರ್ಭದಲ್ಲಿ ಪ್ರತಿಯೊಬ್ಬ ನಾಗರಿಕನೂ ತನ್ನ ಹಕ್ಕುಗಳ ಜೊತೆಗೆ ಜವಾಬ್ದಾರಿಗಳನ್ನು ಅರಿತುಕೊಳ್ಳುವುದು ಅತ್ಯಗತ್ಯ’ ಎಂದು ಜೈನ್ ವಿಶ್ವವಿದ್ಯಾಲಯದ ಜಂಟಿ ರಿಜಿಸ್ಟ್ರಾರ್, ಭಾರತ್ ಸ್ಕೌಟ್ಸ್ ಅಂಡ್ ಗೈಡ್ಸ್ ಕರ್ನಾಟಕದ ಸ್ಥಾನಿಕ ಆಯುಕ್ತ ಶ್ರೀ ಎಂ.ಎಸ್ ಸಂತೋಷ್ ಅಭಿಪ್ರಾಯಪಟ್ಟರು.

ಶ್ರೀಮತಿ ಗೀತಾ ಸಿಂಧ್ಯ, ಸಮಾಜ ಸೇವಕರು, ಬೆಂಗಳೂರು ಹಾಗೂ ಶ್ರೀ ಎಂ.ಎಸ್. ಸಂತೋಷ್, ರಾಜ್ಯ ಕೇಂದ್ರ ಸ್ಥಾನಿಕ ಆಯುಕ್ತರು ರವರುಗಳು ಮುಖ್ಯ ಅತಿಥಿಗಳಾಗಿ ಭಾಗವಹಿಸಿದ್ದರು. ಬೆಂಗಳೂರು ಉತ್ತರ, ಬೆಂಗಳೂರು ಪೂರ್ವ ಹಾಗೂ ರಾಮನಗರ ಜಿಲ್ಲೆಯ ಕಬ್ಸ್, ಬುಲ್‌ಬುಲ್ಸ್, ಸ್ಕೌಟ್ಸ್, ಗೈಡ್ಸ್, ರೋವರ್ಸ್, ರೇಂಜರ್ಸ್ ವಿದ್ಯಾರ್ಥಿಗಳು ಭಾಗವಹಿಸಿ ದೇಶಭಕ್ತಿ, ಜಾನಪದದಂತಹ ಪ್ರೋತ್ಸಾಹದಾಯಕವಾದ ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ನೀಡಿದರು.

ಕಾರ್ಯಕ್ರಮದಲ್ಲಿ ರಾಜ್ಯ ಸಂಸ್ಥೆಯ ಪದಾಧಿಕಾರಿಗಳು, ಸಿಬ್ಬಂದಿಗಳು, ಬೆಂಗಳೂರು ಉತ್ತರ, ಬೆಂಗಳೂರು ದಕ್ಷಿಣ, ಬೆಂಗಳೂರು ಪೂರ್ವ, ರಾಮನಗರ ಜಿಲ್ಲಾ ಪದಾಧಿಕಾರಿಗಳು, ದಳನಾಯಕರುಗಳು, ಕಬ್ಸ್, ಬುಲ್‌ಬುಲ್ಸ್, ಸ್ಕೌಟ್ಸ್, ಗೈಡ್ಸ್, ರೋವರ್ಸ್, ರೇಂಜರ್ಸ್ ವಿದ್ಯಾರ್ಥಿಗಳು, ಪೋಷಕರುಗಳು ಭಾಗವಹಿಸಿ ಕಾರ್ಯಕ್ರಮವನ್ನು ಯಶಸ್ವಿಗೊಳಿಸಿದರು.








## ಡಾ. ಗೊ.ರು. ಚೆನ್ನಬಸಪ್ಪನವರು ರಾಜ್ಯ ಕೇಂದ್ರ ಕಛೇರಿಯಲ್ಲಿ ದಿನಾಂಕ 15 ಆಗಸ್ಟ್ 2026ರಂದು

# ೮೦ನೇ ಸ್ವಾತಂತ್ರ್ಯೋತ್ಸವದ ಧ್ವಜಾರೋಹಣ ನೆರವೇರಿಸಿ ಮಾಡಿದ ಭಾಷಣ

ವಿಶೇಷ ಸಂದರ್ಭಗಳಲ್ಲಿ, ಕೆಲವರು ತಮ್ಮ ಸ್ನೇಹಿತರಿಗೆ ಶುಭಾಶಯ ಪತ್ರ ಕಳುಹಿಸುತ್ತಾರೆ. ಹಾಗೆ ನನಗೆ ಬಂದ ಒಂದು ಶುಭಾಶಯ ಪತ್ರದ ಹಿಂಭಾಗದಲ್ಲಿ ಒಂದು ಕವನ ಅಚ್ಚಾಗಿತ್ತು. ಆ ಕವನದ ನಾಲ್ಕು ಸಾಲುಗಳು ಹೀಗಿವೆ:

"ಅದೇ ದಿನ, ಅದೇ ಹಗಲು, ಅದೇ ರಾತ್ರಿ, ಆದರೂ ಹೊಸದು.
ಎಲ್ಲೆಡೆಯೂ ಅದೇ ಗಾಳಿ, ಅದೇ ನೀರು, ಆದರೂ ಹೊಸದು.
ಅದೇ ಸೂರ್ಯ, ಅದೇ ಚಂದ್ರ, ಆದರೂ ಹೊಸದು.
ಅದೇ ಬೆಟ್ಟ, ಅದೇ ಕಾಡು, ಅದೇ ಬಯಲು, ಆದರೂ ಹೊಸದು"

ಹಾಗೆಯೇ "ಅದೇ ಆಗಸ್ಟ್, ಅದೇ ಹದಿನೈದು, ಆದರೂ ಹೊಸದು.
ಅದೇ ತ್ರಿವರ್ಣ ಧ್ವಜ, ಅದೇ ಆರೋಹಣ, ಆದರೂ ಹೊಸದು.
ಅದೇ ಸ್ಕೌಟ್, ಅದೇ ಗೈಡ್ಸ್, ಆದರೂ ಹೊಸದು.
ಅದೇ ಸಮವಸ್ತ್ರ, ಅದೇ ಸಮಭಾವ, ಆದರೂ ಹೊಸತು" ಎಂದು ಹೇಳಬಹುದು.

ಕಳೆದ 78 ವರ್ಷಗಳಿಂದ ಪ್ರತಿ ವರ್ಷ ಆಗಸ್ಟ್ 15 ರಂದು ನಮ್ಮ ದೇಶದ ಹಳ್ಳಿಗಳಿಂದ ದಿಲ್ಲಿಯವರೆಗೆ ಈ ಸ್ವಾತಂತ್ರ್ಯೋತ್ಸವ ಧ್ವಜಾರೋಹಣ ನಡೆಯುತ್ತ ಬಂದಿದೆ. ಅಂತೇ, ನಮ್ಮ ಸ್ಕೌಟ್ಸ್ ಮತ್ತು ಗೈಡ್ಸ್‌ನ ಕರ್ನಾಟಕ ಸಂಸ್ಥೆಯ ಆವರಣದಲ್ಲಿ ಈಗ ರಾಷ್ಟ್ರಧ್ವಜದ ಆರೋಹಣ ನಡೆದಿದೆ. ಈ ಸಂದರ್ಭದಲ್ಲಿ ಪಾಲುಗೊಂಡಿರುವ ನಿಮಗೆಲ್ಲ ಈ ಸಲದ ಸ್ವಾತಂತ್ರ್ಯೋತ್ಸವ ಶುಭಾಶಯಗಳು.

ಇಲ್ಲಿ ನಾನು ಹಿಂದೆಯೂ ಒಂದೆರಡು ಸಲ ಧ್ವಜಾರೋಹಣ ಮಾಡಿದ ನೆನಪು. ನಮ್ಮ ಸ್ಕೌಟ್ಸ್ ಮತ್ತು ಗೈಡ್ಸ್ ಸಂಸ್ಥೆಯ ಬಂಧುಗಳು ಈ ಸಲವೂ ಕರೆದಿದ್ದಾರೆ. ಬಹುಶಃ 1947ರ ಆಗಸ್ಟ್ 15 ರಂದು, ಅಂದರೆ, ಇಲ್ಲಿಗೆ 78 ವರ್ಷಗಳ ಹಿಂದೆ ನಡೆದ ಪ್ರಥಮ ಧ್ವಜಾರೋಹಣದಲ್ಲಿ ಪಾಲುಗೊಂಡ ಒಬ್ಬರಿರಲಿ ಎಂದು ನನ್ನನ್ನು ಕರೆದಿರಬೇಕು,

ಏನೇ ಇರಲಿ, ಇದೊಂದು ಮಹತ್ವದ ರಾಷ್ಟ್ರೀಯ ಕಾರ್ಯಕ್ರಮ. ನಾವು ಆಚರಿಸುವ ಗೌರಿ-ಗಣೇಶ, ದೀಪಾವಳಿ, ಯುಗಾದಿ, ಕ್ರಿಸ್‌ಮಸ್, ಮೊಹರಂ ಇತ್ಯಾದಿ ಹಬ್ಬಗಳಂತೆ ಇದೂ ಒಂದು ಹಬ್ಬ. ನಾನು ಹೇಳಿದ ಮನೆ-ಮನೆಗಳಲ್ಲಿ ಆಚರಿಸುವ ಹಬ್ಬಗಳು ಧಾರ್ಮಿಕ ಆಚರಣೆಗಳಾದರೆ, ಆಗಸ್ಟ್ 15ರ ಸ್ವಾತಂತ್ರ್ಯೋತ್ಸವ ಮತ್ತು ಜನವರಿ 26ರ ಗಣರಾಜ್ಯೋತ್ಸವಗಳು ರಾಷ್ಟ್ರೀಯ ಆಚರಣೆಗಳು. ಧಾರ್ಮಿಕ ಹಬ್ಬಗಳಿಗೆ ಸಾವಿರಾರು ವರ್ಷಗಳ ಪರಂಪರೆ ಇದ್ದರೆ, ಈ ರಾಷ್ಟ್ರೀಯ ಹಬ್ಬಗಳು ಆಚರಣೆಗೆ ಬಂದದ್ದು ನಮ್ಮ ದೇಶದ ಸ್ವಾತಂತ್ರ್ಯ ಬಂದ ಮೇಲೆ. ಅಂದರೆ 1947 ರಿಂದ ಈಚೆಗೆ. ಈ ಆಚರಣೆಗಳು ಕೇವಲ ಸಾಂಕೇತಿಕವಾಗಬಾರದು. ಇಂತಹ ಸಂದರ್ಭಗಳಲ್ಲಿ, ಸ್ವಾತಂತ್ರ್ಯೋತ್ಸವದ ಹಿನ್ನೆಲೆ ಮತ್ತು ಮುನ್ನೆಲೆಗಳನ್ನು ಕುರಿತಂತೆ ಚಿಂತನೆ ನಡೆಸುವಂತಾಗಬೇಕು. ಸ್ವಾತಂತ್ರ್ಯ ಎಂದರೆ ಏನು? ಅದನ್ನು ನಮಗೆ ತಂದುಕೊಟ್ಟವರು ಯಾರು? ಹೇಗೆ ತಂದು ಕೊಟ್ಟರು? ಏಕೆ ತಂದುಕೊಟ್ಟರು? ಸ್ವತಂತ್ರರಾಗಿ ನಮ್ಮ ಪಾತ್ರವೇನು? ಸ್ವತಂತ್ರ ಬಂದ ಮೇಲೆ ಇದುವರೆಗಿನ ನಮ್ಮ ಅನುಭವವೇನು? ನಮ್ಮ ದೇಶದ ಭವಿಷ್ಯ ಹೇಗಿರಬೇಕು? ಎಂಬೆಲ್ಲ ವಿಷಯಗಳ ಬಗೆಗೆ, ನಮ್ಮ ಕರ್ತವ್ಯವೇನು ಎಂಬ ಬಗೆಗೆ ನಮಗೆ ನೆನಪು ಮಾಡಿಕೊಡುವುದೇ ಈ ಆಚರಣೆಯ ಆಶಯ.

ಪ್ರತಿ ವರ್ಷ ಆಗಸ್ಟ್ 15 ರಂದು ಈ ಸ್ವಾತಂತ್ರ್ಯ ದಿನವನ್ನು ಆಚರಿಸುತ್ತಿರುವ ನೀವೆಲ್ಲ ಪ್ರತಿಭಾವಂತರು, ಪ್ರಜ್ಞಾವಂತರು, ಉತ್ಸಾಹಿಗಳು, ಚೈತನ್ಯದ ಚಿಲುಮೆಗಳು. ನಿಮಗೆ ಸ್ವಾತಂತ್ರ್ಯೋತ್ಸವದ ಬಗೆಗೆ ಹೊಸದಾಗಿ ಹೇಳಬೇಕಾಗಿಲ್ಲ. ಆದರೆ, ಈ ರಾಷ್ಟ್ರೀಯ ಹಬ್ಬದ ಮಹತ್ವ ಸದಾ ನಮ್ಮ ಸ್ಮರಣೆಯಲ್ಲಿ ಇರಬೇಕಾಗಿರುವುದರಿಂದ ಮತ್ತೆ ಮತ್ತೆ ಹೇಳಬೇಕಾಗುತ್ತದೆ, ಮತ್ತೆ ಮತ್ತೆ ಕೇಳಬೇಕಾಗುತ್ತದೆ.

ಸ್ವಾತಂತ್ರ್ಯ ಎಂದರೆ ಯಾವುದೇ ನಿರ್ಬಂಧವಿಲ್ಲದಿರುವುದು. ನಮಗೆ ಎಷ್ಟೇ ಆಸ್ತಿ-ಪಾಸ್ತಿಗಳು ಇದ್ದರೂ, ಎಷ್ಟೇ ಪದವಿ-ಪ್ರಶಸ್ತಿಗಳಿದ್ದರೂ, ಅವಷ್ಟೇ ನಮಗೆ ನೆಮ್ಮದಿ ತಂದುಕೊಡಲಾರವು. ಉದಾಹರಣೆಗೆ ನಿಮ್ಮನ್ನು ಒಂದು ಕೊಠಡಿಯಲ್ಲಿ ಕೂಡಿ ಹಾಕಿ, ಬಾಗಿಲಿಗೆ ಬೀಗ ಹಾಕಿ, ಕಿಟಕಿಯ ಮೂಲಕ ನಿಮಗೆ ಬೇಕಾದ ರುಚಿ ರುಚಿಯಾದ ತಿಂಡಿ-ತಿನಿಸುಗಳನ್ನು ಕೊಟ್ಟರೂ ನೀವು "ನಮಗೆ ಆ ತಿಂಡಿ-ತಿನಿಸುಗಳು ಬೇಡ, ನೀವು ಅವುಗಳನ್ನು ಕೊಡದಿದ್ದರೂ ಚಿಂತೆಯಿಲ್ಲ. ನಮ್ಮನ್ನು ಹೊರಗೆ ಬಿಟ್ಟರೆ ಸಾಕು. ನಾವು ಅಡ್ಡಾಡಬೇಕು. ಹೊರಗೆ ಆಟವಾಡಬೇಕು. ನಾವು ಶಾಲೆಗೆ ಹೋಗಬೇಕು" ಎನ್ನುತ್ತೀರಿ.

ಆಗ ನಿಮ್ಮನ್ನು ಹೊರಗೆ ಬಿಟ್ಟರೆ, ನೀವೆಲ್ಲ ಸಂತೋಷದಿಂದ ಕೇಕೆ ಹಾಕಿಕೊಂಡು ಹೊರಗೆ ಬರುತ್ತೀರಿ. ಹಾಗೆ ಕೂಡಿ ಹಾಕಿದ್ದ ಕೊಠಡಿಯಲ್ಲಿ ಇದ್ದದ್ದೇ ಬಂಧನ; ಕೊಠಡಿಯಿಂದ ನೀವು ಹೊರಗೆ ಬಂದುದೇ ಸ್ವಾತಂತ್ರ್ಯ. ಹಾಗೆಯೇ, ನಮ್ಮ ದೇಶ ನೂರಾರು ವರ್ಷಗಳಿಂದ ಪರಕೀಯರ ಅಧೀನದಲ್ಲಿ ಇದ್ದದ್ದೇ ದಾಸ್ಯ. ಅವರಿಂದ ಬಿಡುಗಡೆ ಹೊಂದಿದ್ದೇ ಸ್ವಾತಂತ್ರ್ಯ. ಆ ಸ್ವಾತಂತ್ರ್ಯದ ಸಂತೋಷದ ಆಚರಣೆಯೇ ಈ ಸ್ವಾತಂತ್ರ್ಯೋತ್ಸವ. ನಿಮಗೆಲ್ಲ ತಿಳಿದಿರುವಂತೆ, ನಮ್ಮ

ಸ್ವತಂತ್ರ ಭಾರತಕ್ಕೆ ತನ್ನದೇ ಆದ ಸಂವಿಧಾನ, ರಾಷ್ಟ್ರಗೀತೆ, ರಾಷ್ಟ್ರಧ್ವಜ, ರಾಷ್ಟ್ರಸ್ತವ, ರಾಷ್ಟ್ರ ಲಾಂಛನಗಳಿವೆ. ನಮ್ಮ ರಾಷ್ಟ್ರಧ್ವಜ–ತ್ರಿವರ್ಣಧ್ವಜ. ರಾಷ್ಟ್ರಗೀತೆ–ಜನಗಣಮನ, ರಾಷ್ಟ್ರಸ್ತವ–ವಂದೇ ಮಾತರಂ. ರಾಷ್ಟ್ರ ಲಾಂಛನ–ಅಶೋಕ ಚಕ್ರ. ರಾಷ್ಟ್ರ ಸಂವಿಧಾನ–ಪ್ರಜಾಪ್ರಭುತ್ವ. ಈ ರಾಷ್ಟ್ರೀಯ ಚಿಹ್ನೆಗಳಿಗೆ ಅಗೌರವ ತೋರಿದರೆ ಅದು ಅಪರಾಧವಾಗುತ್ತದೆ. ಅಂತಹ ಅಪರಾಧ ಮಾಡಿದವರು ಶಿಕ್ಷೆ ಅನುಭವಿಸಬೇಕಾಗುತ್ತದೆ.

ಈಗ ನಾವು ಸ್ವಾತಂತ್ರ್ಯೋತ್ಸವದ ಅಂಗವಾಗಿ ರಾಷ್ಟ್ರಧ್ವಜ ಆರೋಹಣ ನಡೆಸಿದ್ದೇವೆ. ಈ ಧ್ವಜದಲ್ಲಿರುವ ಮೂರು ವರ್ಣಗಳಿಗೂ ಅರ್ಥವಿದೆ. ಧ್ವಜದ ಮೇಲ್ಭಾಗದ ಕೇಸರಿ ಬಣ್ಣ ಧೈರ್ಯ, ತ್ಯಾಗಗಳ ಸಂಕೇತವಾಗಿದ್ದರೆ, ಕೆಳಭಾಗದ ಹಸಿರು ಬಣ್ಣ ಶಕ್ತಿ ಮತ್ತು ಸಮೃದ್ಧಿಯ ಸಂಕೇತವಾಗಿದೆ. ಮಧ್ಯದಲ್ಲಿರುವ ಬಿಳಿ ಬಣ್ಣ ಸತ್ಯ ಮತ್ತು ಶಾಂತಿಗಳನ್ನು ಸಂಕೇತಿಸುತ್ತದೆ. "ನಮ್ಮ ದೇಶದ ಘನತೆ ಗೌರವಗಳನ್ನು ಕಾಪಾಡಿಕೊಂಡು ಹೋಗಲು ನಾವು ಬದ್ಧರಾಗಿದ್ದೇವೆ" ಎಂದು ಸಂಕಲ್ಪ ಮಾಡುವ ಸಂದರ್ಭವೇ ಈ ಧ್ವಜಾರೋಹಣ.

ನಮಗೆ ಈ ಧ್ವಜವನ್ನು ಕೊಟ್ಟ ಸ್ವಾತಂತ್ರ್ಯಕ್ಕೆ ಸುದೀರ್ಘ ಹೋರಾಟದ ಹಿನ್ನೆಲೆಯಿದೆ. ಅದು ಇದ್ದಕ್ಕಿದ್ದಂತೆ ಆಕಾಶದಿಂದ ಉದುರಿ ಬಿದ್ದುದಲ್ಲ. ಈ ನೆಲದ ಲಕ್ಷಾಂತರ ಜನರ ಹೋರಾಟ, ತ್ಯಾಗ ಮತ್ತು ಬಲಿದಾನಗಳಿಂದ ಪಡೆದದ್ದು. ನಮಗೆಲ್ಲ ತಿಳಿದಿರುವಂತೆ, ನಮ್ಮ ದೇಶ ಹಿಂದೆ ಅತ್ಯಂತ ಸಮೃದ್ಧವಾಗಿತ್ತು. ಇಲ್ಲಿಗೆ 1500 ವರ್ಷಗಳ ಹಿಂದೆ, ಮಗಧ ರಾಜ್ಯದ ದರ್ಶಕನ ಕಾಲದಲ್ಲೇ ಡೇರಿಯಸ್ ಎಂಬಾತ ದಾಳಿ ನಡೆಸಿದ. ಕ್ರಿಪೂ. 372ರಲ್ಲಿ ಗ್ರೀಸಿನ ಅಲೆಕ್ಸಾಂಡರ್ ದಂಡೆತ್ತಿ ಬಂದ. ನಂತರ ಹೂಣರು, ಕುಶಾನರು, ಯವನರು, ಶಕರು, ಪೋರ್ಚುಗೀಸರು ನಮ್ಮ ದೇಶದ ಮೇಲೆ ಧಾಳಿ ನಡೆಸಿ, ಸಾಧ್ಯವಿದ್ದಷ್ಟು ಕೊಳ್ಳೆಹೊಡೆದುಕೊಂಡು ಹೋಗಿದ್ದಾರೆ.

ಆದರೆ, ಇಲ್ಲಿಗೆ ಸುಮಾರು 300 ವರ್ಷಗಳ ಹಿಂದೆ, ವ್ಯಾಪಾರದ ನೆಪದಲ್ಲಿ ಇಲ್ಲಿಗೆ ಬಂದ ಬ್ರಿಟಿಷರು "ಈಸ್ಟ್ ಇಂಡಿಯಾ ಕಂಪನಿ"ಯನ್ನು ಸ್ಥಾಪಿಸಿ, ಆಗ ದೇಶದ ಜನರಲ್ಲಿದ್ದ ಅನಕ್ಷರತೆ, ಅಜ್ಞಾನ, ಅನೈಕ್ಯತೆ ಮೊದಲಾದ ದೌರ್ಬಲ್ಯಗಳನ್ನು ಬಳಸಿಕೊಂಡು, ಕ್ರಮೇಣ ಇಲ್ಲೇ ನೆಲೆಯೂರಿ, ನಾನಾ ಕುಟಿಲೋಪಾಯಗಳಿಂದ ಇಡೀ ದೇಶವನ್ನೇ ಆಳತೊಡಗಿದರು.

ಬ್ರಿಟಿಷರು ತಮ್ಮ ಆಳ್ವಿಕೆಯಲ್ಲಿ ಭಾರತೀಯರ ಮೇಲೆ ನಡೆಸಿದ ದಬ್ಬಾಳಿಕೆ, ನಮ್ಮ ಜನ ಅನುಭವಿಸಿದ ಅವಮಾನ ಮತ್ತು ಕಷ್ಟ–ನಷ್ಟಗಳನ್ನು ತಾಳಲಾರದೆ, ದೇಶದ ಅಲ್ಲಲ್ಲಿ ಬ್ರಿಟಿಷರ ವಿರುದ್ಧ ಸಣ್ಣ–ಪುಟ್ಟ ಪ್ರತಿಭಟನೆಗಳು ನಡೆಯತೊಡಗಿದವು. ಅಂತಹ ಮೊದಲ ಹೋರಾಟ ನಡೆದದ್ದು 19ನೆಯ ಶತಮಾನದ ಆರಂಭದಲ್ಲಿ ಕನ್ನಡದ ವೀರರಾಣಿ ಕಿತ್ತೂರು ಚೆನ್ನಮ್ಮನಿಂದ. ನಂತರ 1857ರಲ್ಲಿ ನಡೆದ ಸಿಪಾಯಿ ದಂಗೆ ಭಾರತೀಯರಲ್ಲಿ ನಿಜವಾದ ಸ್ವಾತಂತ್ರ್ಯ ಹೋರಾಟದ ಜಾಗೃತಿ ಉಂಟುಮಾಡಿತು.

ಅನಂತರ, ಮಹಾತ್ಮ ಗಾಂಧೀಜಿ ಮತ್ತು ಇತರ ನಾಯಕರು, ಬ್ರಿಟಿಷರನ್ನು ಈ ದೇಶದಿಂದ ತೊಲಗಿಸಿದ ಹೊರತು, ನಮ್ಮ ಜನಕ್ಕೆ ನೆಮ್ಮದಿ ಸಾಧ್ಯವಿಲ್ಲ ಎಂಬುದನ್ನು ಮನಗಂಡು, ಜನರಲ್ಲಿ ಜಾಗೃತಿ ಮೂಡಿಸಿ, ಇಡೀ ಭಾರತದಲ್ಲಿ ಇಡೀ ಜಗತ್ತಿಗೇ ಆಶ್ಚರ್ಯವೆನಿಸುವ ಬೃಹತ್ ಪ್ರಮಾಣದ ಸ್ವಾತಂತ್ರ್ಯ ಚಳವಳಿ ನಡೆಸಿದರು. ಸುಮಾರು 100 ವರ್ಷಗಳ ಕಾಲ ನಡೆದ ಆ ಹೋರಾಟದ ಅವಧಿಯಲ್ಲಿ ಭಾರತದ ಸಹಸ್ರಾರು ಜನ ಬ್ರಿಟಿಷರ ಗುಂಡಿನೇಟಿಗೆ ಬಲಿಯಾದರು. ಲಕ್ಷಾಂತರ ಜನ ತಮ್ಮ ಆಸ್ತಿ–ಪಾಸ್ತಿಗಳನ್ನು ಕಳೆದುಕೊಂಡರು. ಲಕ್ಷಾಂತರ ಜನ ಗಾಯಾಳುಗಳಾಗಿ ಅನಂತ ಹಿಂಸೆಗೆ ತುತ್ತಾದರು.

ಆ ಕ್ರೂರ ಹಿಂಸೆಯ ವಿರುದ್ಧವೂ, ಭಾರತೀಯರು ನಡೆಸಿದ ಅಹಿಂಸಾತ್ಮಕ ಹೋರಾಟದ ಎದುರು ನಿಲ್ಲಲು ಸಾಧ್ಯವಾಗದೆ, ಬ್ರಿಟಿಷರು 1947ರ ಆಗಸ್ಟ್ 14 ರಂದು ಮಧ್ಯರಾತ್ರಿ ಭಾರತವನ್ನು 'ಸ್ವತಂತ್ರ ರಾಷ್ಟ್ರ' ಎಂದು ಘೋಷಿಸಿ, ದೇಶದ ಆಡಳಿತವನ್ನು ನಮಗೇ ವಹಿಸಿ, ಈ ದೇಶವನ್ನು ಬಿಟ್ಟು ಹೋದರು.

ಅಂದಿನಿಂದ ಅಂದರೆ, ಆಗಸ್ಟ 15 ರಂದು ನಾವು ಪ್ರತಿವರ್ಷ ಈ ಸ್ವಾತಂತ್ರ್ಯ ದಿನವನ್ನು ಆಚರಿಸುತ್ತಿದ್ದೇವೆ. ನಮ್ಮ ಹಿರಿಯರು ಸ್ವಾತಂತ್ರ್ಯಕ್ಕಾಗಿ ಹೋರಾಡಿದ್ದು ಏಕೆ? ನಮ್ಮ ಜನರು ಆತ್ಮಗೌರವ ಮತ್ತು ಸ್ವಾಭಿಮಾನದಿಂದ ಬದುಕಲಿಕ್ಕಾಗಿ, ಪರಸ್ಪರ ಸಮಾನತೆ ಮತ್ತು ಸಹಿಷ್ಣುತೆಗಳಿಂದ ಬದುಕಲಿಕ್ಕಾಗಿ, ದೇಶದ ಪ್ರತಿಯೊಬ್ಬರಿಗೂ ದುಡಿಯುವ ಮುಕ್ತ ಅವಕಾಶಕ್ಕಾಗಿ, ನಮ್ಮದೇ ಆದ ಸರ್ಕಾರ ಆಳುವುದಕ್ಕಾಗಿ, ಒಟ್ಟಾರೆ, ನವಭಾರತದ ನಿರ್ಮಾಣಕ್ಕಾಗಿ.

ಅಂತೆಯೇ, ನಮಗೆ ಸ್ವಾತಂತ್ರ್ಯ ಬಂದ ಈ 78 ವರ್ಷಗಳ ಅವಧಿಯಲ್ಲಿ, ರಾಷ್ಟ್ರೀಯ ಹೆದ್ದಾರಿಗಳು, ದೊಡ್ಡ ದೊಡ್ಡ ಜಲಾಶಯಗಳು, ವಿದ್ಯುತ್ ಮತ್ತು ಕೈಗಾರಿಕಾ ಸ್ಥಾವರಗಳು, ಶಿಕ್ಷಣ ಮತ್ತು ರಕ್ಷಣಾ ವ್ಯವಸ್ಥೆ, ಭಾರಿ ಭಾರಿ ಕಟ್ಟಡಗಳು, ತಂತ್ರಜ್ಞಾನ, ವಿಜ್ಞಾನ ಸಂಶೋಧನೆ, ದೇಶ–ವಿದೇಶ ಸಂಬಂಧ–ಸಂಪರ್ಕ ಹೀಗೆ ನಾನಾ ರೂಪದಲ್ಲಿ ಅಭಿಮಾನ ಪಡುವಷ್ಟು ಅಭಿವೃದ್ಧಿ ಕಾರ್ಯಗಳು ನಡೆದಿವೆ.

ಇದೆಲ್ಲ ನಿಜ. ಆದರೆ, ಈ ಎಲ್ಲ ಸಾಧನೆಗಳಿಗೂ ಕಳಂಕವುಂಟುಮಾಡುವಂತಹ ಅನಿಷ್ಟಗಳೂ ಬೆಳೆದಿವೆ. ಅದಕ್ಕೆ ಕಾರಣ, ನಾವು ಸ್ವಾತಂತ್ರ್ಯವನ್ನು ಸರಿಯಾಗಿ ಅರ್ಥಮಾಡಿಕೊಂಡಿಲ್ಲದಿರುವುದು. ಸ್ವಾತಂತ್ರ್ಯವೆಂದರೆ ನಮ್ಮ ಮನಸ್ಸಿಗೆ ಬಂದಂತೆ ನಡೆದುಕೊಳ್ಳುವುದು' ಎಂದೇ ಕೆಲವರು ತಿಳಿದಿರುವಂತೆ ಕಾಣುತ್ತದೆ. ಹಾಗೆ ನಡೆಯುವುದು ಶ್ವೇಚ್ಛಾಚಾರವಾಗುತ್ತದೆ. ಆದರೆ, ನಿಜವಾದ ಸ್ವಾತಂತ್ರ್ಯವೆಂದರೆ, ಶಿಸ್ತು, ಸಭ್ಯತೆ, ಪ್ರಾಮಾಣಿಕತೆ, ಸಂವಿಧಾನಬದ್ಧ ನಡೆ–ನುಡಿ.

ಇಂದು ನಮ್ಮ ದೇಶದ ಎದುರಿಸುತ್ತಿರುವ ಆರ್ಥಿಕ, ಸಾಮಾಜಿಕ, ಶೈಕ್ಷಣಿಕ, ಔದ್ಯೋಗಿಕ ಮತ್ತಿತರ ಕ್ಷೇತ್ರಗಳ ಸಮಸ್ಯೆಗಳನ್ನು ಪರಿಹರಿಸಬೇಕಾದರೆ, ಭಾರತೀಯರಾದ ನಾವೆಲ್ಲ ಜಾಗೃತರಾಗಿ ರಾಷ್ಟ್ರಪ್ರಜ್ಞೆ ಬೆಳೆಸಿಕೊಂಡು, ಪ್ರತಿಯೊಬ್ಬರೂ ರಾಷ್ಟ್ರದ ಶಾಂತಿ, ಭದ್ರತೆ, ಸಮಗ್ರತೆ ಮತ್ತು ಪ್ರಗತಿಗಾಗಿ ಒಗ್ಗಟ್ಟಿನಿಂದ ಸಮರ್ಪಣ ಭಾವದಿಂದ ದುಡಿಯಬೇಕು.

ಕೊನೆಯದಾಗಿ ಈ ಸಂದರ್ಭದ ಸಂಕಲ್ಪ ಘೋಷಣೆ: "ಸ್ವಾತಂತ್ರ್ಯ ಸ್ವಾತಂತ್ರ್ಯ, ಭಾರತದ ಸ್ವಾತಂತ್ರ್ಯ. ಆಂಗ್ಲರನು ಓಡಿಸಿದ ಸಾಹಸದ ಸ್ವಾತಂತ್ರ್ಯ. ನಮ್ಮದೇ ಅಭಿಮಾನ, ನಮ್ಮದೇ ಸಂವಿಧಾನ, ನಮ್ಮದೇ ಹಕ್ಕು; ನಮ್ಮದೇ ಕರ್ತವ್ಯ, ಜಾತಿ–ಮತಗಳ ಬಿಟ್ಟು ಕೂಡಿ ದುಡಿಯೋಣ, ನಾವೆಲ್ಲ ಒಟ್ಟಾಗಿ ದೇಶಕಟ್ಟೋಣ!"

## ದಿ॥ ವಿ.ಪಿ. ದೀನದಯಾಳು ನಾಯ್ಡು ಅವರ ಜನ್ಮದಿನಾಚರಣೆ



ಆಗಸ್ಟ್ 16ರಂದು ರಾಜ್ಯ ಸಂಸ್ಥೆಯ ವತಿಯಿಂದ ಸ್ಕೌಟ್ ಸ್ಕಿಲೋ 67ನೇ ವಾರದ ಕಾರ್ಯಕ್ರಮ ಹಾಗೂ ಮಾಜಿ ಮುಖ್ಯ ಆಯುಕ್ತರು ಮತ್ತು ರಾಷ್ಟ್ರೀಯ ಆಯುಕ್ತರಾಗಿದ್ದ ದಿ॥ ಶ್ರೀ ವಿ.ಪಿ. ದೀನದಯಾಳು ನಾಯ್ಡು ಅವರ ಜನ್ಮದಿನಾಚರಣೆ ಕಾರ್ಯಕ್ರಮವನ್ನು ವರ್ಚುವಲ್ ಮೂಲಕ ಆಯೋಜಿಸಲಾಯಿತು.

ರಾಜ್ಯ ಮುಖ್ಯ ಆಯುಕ್ತರು ಹಾಗೂ ಮಾಜಿ ಸಚಿವರಾದ ಡಾ. ಪಿ.ಜಿ.ಆರ್. ಸಿಂಧ್ಯ ಅವರ ಅಧ್ಯಕ್ಷತೆಯಲ್ಲಿ ನಡೆದ ಕಾರ್ಯಕ್ರಮದಲ್ಲಿ ಮಾಜಿ ಸಂಸದರು ಹಾಗೂ ವಿಧಾನ ಪರಿಷತ್ತಿನ ಮಾಜಿ ವಿರೋಧ ಪಕ್ಷದ ನಾಯಕರಾದ ಶ್ರೀ ವಿ.ಎಸ್. ಉಗ್ರಪ್ಪ ಅವರು ನಾಗರೀಕ ಪ್ರಾವಿಣ್ಯತಾ ಪದಕದ ಬಗ್ಗೆ ವಿಶೇಷ ಉಪನ್ಯಾಸ ನೀಡಿದರು. ನಾಗರಿಕ ಪ್ರಾವೀಣ್ಯತಾ ಪದಕ, ಸ್ಕೌಟಿಂಗ್‌ನ ಮೌಲ್ಯಗಳು, ಸೇವಾ ಮನೋಭಾವ, ಶಿಸ್ತು ಹಾಗೂ ಜವಾಬ್ದಾರಿಯುತ ನಾಗರಿಕರಾಗಿ ರೂಪುಗೊಳ್ಳುವ ಕುರಿತು ಅವರು ಮಾತನಾಡಿದರು. ಇದೇ ಸಂದರ್ಭದಲ್ಲಿ ದಿ. ಶ್ರೀ ವಿ.ಪಿ. ದೀನದಯಾಳು ನಾಯ್ಡು ಅವರ ಸ್ಕೌಟಿಂಗ್ ಕ್ಷೇತ್ರದ ಸೇವೆಯನ್ನು ಸ್ಮರಿಸಲಾಯಿತು.

ಕಾರ್ಯಕ್ರಮದಲ್ಲಿ ರಾಜ್ಯ ಹಾಗೂ ಜಿಲ್ಲಾ ಪದಾಧಿಕಾರಿಗಳು, ಸ್ಕೌಟ್ಸ್, ಗೈಡ್ಸ್, ರೋವರ್ಸ್, ರೇಂಜರ್ಸ್, ದಳನಾಯಕರು ಹಾಗೂ ಪೋಷಕರು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಿದ್ದರು. ಇವರ ಜನ್ಮ ದಿನದ ಅಂಗವಾಗಿ ಆ ದಿನ ಬೆಂಗಳೂರಿನ ಕಿದ್ವಾಯಿ ಸ್ಮಾರಕ ಗ್ರಂಥಿ ಸಂಸ್ಥೆ, ಕ್ಯಾನ್ಸರ್ ಸಂಶೋಧನೆ ಮತ್ತು ತರಬೇತಿ ಸಂಸ್ಥೆ ಇಲ್ಲಿನ ಶ್ರೀ ವೆಂಕಟೇಶ್ವರ ಧರ್ಮಶಾಲೆಯ ಒಳ ರೋಗಿಗಳಿಗೆ ಸಿಹಿ ವಿತರಣೆ ಮಾಡಲಾಯಿತು.

---

## ಸ್ಕೌಟ್ಸ್-ಗೈಡ್ಸ್ ಗುಣಮಟ್ಟದ ಶಿಕ್ಷಣ ಉತ್ತಮಪಡಿಸುವ ಕುರಿತು ಸಮಾಲೋಚನಾ ಸಭೆ



ಆಗಸ್ಟ್ 20 ರಂದು ರಾಜ್ಯ ಸಂಸ್ಥೆಯ ವತಿಯಿಂದ ಸ್ಕೌಟ್ಸ್-ಗೈಡ್ಸ್ ಗುಣಮಟ್ಟದ ಶಿಕ್ಷಣವನ್ನು ಮತ್ತಷ್ಟು ಉತ್ತಮಪಡಿಸುವ ಕುರಿತು ಸಮಾಲೋಚನಾ ಸಭೆ ಆಯೋಜಿಸಲಾಯಿತು. ರಾಜ್ಯ ಮುಖ್ಯ ಆಯುಕ್ತರು ಹಾಗೂ ಮಾಜಿ ಸಚಿವರಾದ ಡಾ. ಪಿ.ಜಿ.ಆರ್. ಸಿಂಧ್ಯ ರವರ ಅಧ್ಯಕ್ಷತೆ ವಹಿಸಿದ್ದರು.

ಸಭೆಯಲ್ಲಿ, ಸ್ಕೌಟಿಂಗ್ ಮತ್ತು ಗೈಡಿಂಗ್ ಶಿಕ್ಷಣದ ಗುಣಮಟ್ಟವನ್ನು ಹೆಚ್ಚಿಸುವುದು, ತರಬೇತಿ ವ್ಯವಸ್ಥೆಯನ್ನು ಬಲಪಡಿಸುವುದು, ಘಟಕಗಳ ಕಾರ್ಯಚಟುವಟಿಕೆಗಳನ್ನು ಪರಿಣಾಮಕಾರಿಯಾಗಿ ಅನುಷ್ಠಾನಗೊಳಿಸುವುದು ಹಾಗೂ ಮಕ್ಕಳಲ್ಲಿ ಜೀವನ ಕೌಶಲ್ಯ ಮತ್ತು ನಾಯಕತ್ವ ಗುಣಗಳನ್ನು ಬೆಳೆಸುವ ಕುರಿತು ಮಹತ್ವದ ಚರ್ಚೆ ನಡೆಯಿತು.

ಸಭೆಯಲ್ಲಿ ರಾಜ್ಯ ಕಾರ್ಯದರ್ಶಿ ಶ್ರೀ ಕೆ. ಗಂಗಪ್ಪ ಗೌಡ ಹಾಗೂ ಪದಾಧಿಕಾರಿಗಳಾದ ಶ್ರೀಮತಿ ಬಿ.ವಿ. ರಾಮಲತಾ, ಶ್ರೀ ಎಂ. ಪ್ರಭಾಕರ್ ಭಟ್, ಶ್ರೀಮತಿ ಮಂಜುಳಾ, ಶ್ರೀಮತಿ ಶ್ಯಾಮಲ, ಶ್ರೀ ನಾಗೇಶ್ ಆರ್. ಶಿವಪೂರ್, ಶ್ರೀಮತಿ ಲತಾ ಮಂಜುನಾಥ್, ಶ್ರೀಮತಿ ಮಲ್ಲೇಶ್ವರಿ ಜೂಜಾರಿ, ಶ್ರೀಮತಿ ಎನ್.ಕೆ. ಹೊನ್ನಮ್ಮ, ಶ್ರೀ ಸತ್ಯಜಿತ್ ಚಟರ್ಜಿ, ಶ್ರೀಮತಿ ಕಾಮೇಶ್ವರಿ ಭಟ್, ಶ್ರೀಮತಿ ಜ್ಯೋತಿ ರಂಗನಾಥ್, ಶ್ರೀ ನಿತೀನ್ ಅಮೀನ್, ಶ್ರೀ ಚಂದ್ರು, ಶ್ರೀ ವಿತೇಶ್ ಕಾಂಚನ್, ಶ್ರೀ ಚಂದ್ರಾಕ್ಷ, ಶ್ರೀಮತಿ ಪಲ್ಲವಿ ನಾಡಕರ್ಣಿ, ಶ್ರೀಮತಿ ಮಮತಾ ಶೀಲವಂತ್ ಸೇರಿದಂತೆ ಹಲವು ಗಣ್ಯರು ಹಾಗೂ ಪದಾಧಿಕಾರಿಗಳು ಉಪಸ್ಥಿತರಿದ್ದರು.

ಗುಣಮಟ್ಟದ ಸ್ಕೌಟಿಂಗ್-ಗುಣಮಟ್ಟದ ಶಿಕ್ಷಣ-ಉತ್ತಮ ಭವಿಷ್ಯ

---

## ರಾಷ್ಟ್ರೀಯ ಸದ್ಭಾವನಾ ದಿನಾಚರಣೆ



ಆಗಸ್ಟ್ 20 ರಂದು ರಾಜ್ಯ ಕೇಂದ್ರ ಕಚೇರಿ, ಬೆಂಗಳೂರು ಇಲ್ಲಿ ರಾಜ್ಯ ಮುಖ್ಯ ಆಯುಕ್ತರು ಹಾಗೂ ಮಾಜಿ ಸಚಿವರಾದ ಡಾ. ಪಿ.ಜಿ.ಆರ್. ಸಿಂಧ್ಯ ಅವರ ಅಧ್ಯಕ್ಷತೆಯಲ್ಲಿ ಸದ್ಭಾವನಾ ದಿನಾಚರಣೆ ಅಂಗವಾಗಿ ಪ್ರತಿಜ್ಞಾ ವಿಧಿ ಕಾರ್ಯಕ್ರಮವನ್ನು ಆಯೋಜಿಸಲಾಯಿತು.

ಈ ಸಂದರ್ಭದಲ್ಲಿ ರಾಜ್ಯ ಸಂಸ್ಥೆಯ ಪದಾಧಿಕಾರಿಗಳು, ವಿವಿಧ ಜಿಲ್ಲೆಗಳ ಪದಾಧಿಕಾರಿಗಳು, ಅಧಿಕಾರಿಗಳು ಹಾಗೂ ಸಿಬ್ಬಂದಿ ವರ್ಗದವರು ಸದ್ಭಾವನೆ, ಏಕತೆ, ಸೌಹಾರ್ದತೆ ಮತ್ತು ರಾಷ್ಟ್ರೀಯ ಭಾವೈಕ್ಯತೆಯನ್ನು ಸಾರುವ ಪ್ರತಿಜ್ಞಾ ವಿಧಿಯನ್ನು ಸ್ವೀಕರಿಸಿದರು.

"ಸದ್ಭಾವನೆ-ಸೌಹಾರ್ದತೆ-ಏಕತೆ-ರಾಷ್ಟ್ರದ ಪ್ರಗತಿ"

## ರಾಜ್ಯ ಮಟ್ಟದ ರಾಜ್ಯ ಪುರಸ್ಕಾರ ಪರೀಕ್ಷಾ ಶಿಬಿರಗಳು

* ಜುಲೈ 20 ರಿಂದ 24ರ ವರೆಗೆ ರಾಜ್ಯಮಟ್ಟದ ರಾಜ್ಯ ಪುರಸ್ಕಾರ ಪರೀಕ್ಷೆಯು ಉಡುಪಿ ಮತ್ತು ಕಾರವಾರ ಜಿಲ್ಲೆಯ ಮಕ್ಕಳಿಗೆ ನಡೆಯಿತು. ಈ ಶಿಬಿರ ನಾಯಕರಾಗಿ ಶ್ರೀ ಶಿವಶಂಕರಪ್ಪ ಎ.ಎಲ್.ಟಿ., ಶಿವಮೊಗ್ಗ, ಗೈಡ್ ವಿಭಾಗದ ನಾಯಕಿಯಾಗಿ ಶ್ರೀಮತಿ ಶುಭ ವಿಶ್ವನಾಥ್, ಎಲ್.ಟಿ., ಕಾರ್ಯನಿರ್ವಹಿಸಿದರು. ಈ ಸಂದರ್ಭದಲ್ಲಿ ಎರಡು ದಿನವೂ ಜಿಲ್ಲಾ ಮುಖ್ಯ ಆಯುಕ್ತರಾದ ಶ್ರೀ ಇಂದ್ರಾಳಿ ಜಯಕರ್ ಶೆಟ್ಟಿ ಮತ್ತು ಸ್ಥಳೀಯ ಕಾಪು ಸ್ಥಳೀಯ ಸಂಸ್ಥೆಯ ಅಧ್ಯಕ್ಷ ಶ್ರೀ ಎನ್.ಎಂ. ಹೆಗಡೆ ಹಾಗೂ ಪದಾಧಿಕಾರಿಗಳು ಶಿಬಿರ ನಡೆಯುವ ಸ್ಥಳಕ್ಕೆ ಆಗಮಿಸಿ ಶಿಕ್ಷಕರನ್ನು ಮಕ್ಕಳನ್ನು ಪ್ರೋತ್ಸಾಹಿಸಿದ್ದರು. ಈ ಶಿಬಿರವನ್ನು ಶ್ರೀಮತಿ ಸುಮನ್ ಶೇಖರ್, ರಾಜ್ಯ ಸಹಾಯಕ ಸಂಘಟನಾ ಆಯುಕ್ತರು ಸಂಘಟಿಸಿದರು.





* ದಕ್ಷಿಣ ಕನ್ನಡ ಜಿಲ್ಲಾ ಸಂಸ್ಥೆಯ ವತಿಯಿಂದ ಜುಲೈ 24 ರಿಂದ 28ರ ವರೆಗೆ ಜಿಲ್ಲಾ ತರಬೇತಿ ಕೇಂದ್ರ, ಪಿಲಿಕುಳದಲ್ಲಿ 2026ನೇ ಸಾಲಿನ ರಾಜ್ಯ ಮಟ್ಟದ ರಾಜ್ಯ ಪುರಸ್ಕಾರ ಸ್ಕೌಟ್ಸ್ ಮತ್ತು ಗೈಡ್ಸ್ ಪರೀಕ್ಷಾ ಶಿಬಿರವು ಯಶಸ್ವಿಯಾಗಿ ನಡೆಯಿತು. ಸ್ಕೌಟ್ ವಿಭಾಗದ ನಾಯಕರಾಗಿ ಶ್ರೀ ಆನಂದ ಅಡಿಗ (ಎಲ್.ಟಿ) ಸಹಕರಿಸಿದರು. ಪರೀಕ್ಷಾ ಶಿಬಿರದಲ್ಲಿ ದಕ್ಷಿಣ ಕನ್ನಡ ಜಿಲ್ಲೆಯಿಂದ 260 ಸ್ಕೌಟ್ಸ್ ಮತ್ತು 377 ಗೈಡ್ಸ್ ಒಟ್ಟು 637 ವಿದ್ಯಾರ್ಥಿಗಳು ಹಾಗೂ 95 ದಳ ನಾಯಕರುಗಳು ಭಾಗವಹಿಸಿದ್ದರು. ಶಿಬಿರದಲ್ಲಿ ಸ್ಕೌಟ್ ಆಯುಕ್ತರಾದ ಶ್ರೀ ಬಿ.ಎಂ ತುಂಬೆ, ಜಿಲ್ಲಾ ಗೈಡ್ ಆಯುಕ್ತೆ ಶ್ರೀಮತಿ ವಿಮಲಾ ರಂಗಯ್ಯ, ರಾಜ್ಯ ಸಹಾಯಕ ಸಂಘಟನಾ ಆಯುಕ್ತರಾದ ಶ್ರೀ ಭರತ್‌ರಾಜ್ ಕೆ. ಪರೀಕ್ಷಾ ಶಿಬಿರವನ್ನು ಸಂಘಟಿಸಿದರು.





## ಸೆಪ್ಟೆಂಬರ್ 2026ರ ಕಾರ್ಯಕ್ರಮಗಳು ಮತ್ತು ತರಬೇತಿಗಳು

| ಕ್ರ.ಸಂ | ಕಾರ್ಯಕ್ರಮದ ಹೆಸರು | ದಿನಾಂಕ | ಸ್ಥಳ |
|---|---|---|---|
| 1 | ಶಿಕ್ಷಕರ ದಿನಾಚರಣೆ | 05.09.2026 | ದಳ, ಸ್ಥಳೀಯ, ಜಿಲ್ಲಾ ಹಾಗೂ ರಾಜ್ಯ ಹಂತದಲ್ಲಿ |
| 2 | ರಾಜ್ಯ ಮಟ್ಟದ ಐತಿಹಾಸಿಕ ಸ್ಥಳಗಳ ಮಾಹಿತಿ ತಿಳುವಳಿಕೆ ಶಿಬಿರ (ಹೆರಿಟೇಜ್ ಶಿಬಿರ) | 07.09.2026 ರಿಂದ 09.09.2026 | ಹಂಪಿ, ಹೊಸಪೇಟೆ ತಾಲ್ಲೂಕು, ವಿಜಯನಗರ ಜಿಲ್ಲೆ |
| 3 | ಉಚಿತ ಸಮವಸ್ತ್ರ ವಿತರಣಾ ಕಾರ್ಯಕ್ರಮ | 12.09.2026 | ರಾಜ್ಯ ಕೇಂದ್ರ, ಕಛೇರಿ, ಶಾಂತಿಗೃಹ, ಬೆಂಗಳೂರು |
| 4 | ಸರ್ ಎಂ. ವಿಶ್ವೇಶ್ವರಯ್ಯ ಜನ್ಮದಿನಾಚರಣೆ ಕಾರ್ಯಕ್ರಮ | 15.09.2026 | ದಳ, ಸ್ಥಳೀಯ, ಜಿಲ್ಲಾ ಹಾಗೂ ರಾಜ್ಯ ಹಂತದಲ್ಲಿ |
| 5 | ಕಲ್ಯಾಣ ಕರ್ನಾಟಕ ವಿಮೋಚನ ದಿನಾಚರಣೆ | 17.09.2026 | ಬೀದರ್, ಕಲಬುರ್ಗಿ, ಯಾದಗಿರಿ, ಬಳ್ಳಾರಿ, ವಿಜಯನಗರ, ಕೊಪ್ಪಳ |
| 6 | ವಿಶ್ವ ಶಾಂತಿ ದಿನಾಚರಣೆ | 21.09.2024 | ದಳ, ಸ್ಥಳೀಯ, ಜಿಲ್ಲಾ ಹಾಗೂ ರಾಜ್ಯ ಹಂತದಲ್ಲಿ |
| 7 | ಸ್ಕೌಟ್ಸ್ ಮತ್ತು ಗೈಡ್ಸ್ ವಿಭಾಗದ ಎ.ಎಲ್.ಟಿ ತರಬೇತಿ ಶಿಬಿರ | 23.09.2026 ರಿಂದ 29.09.2026 | ಸ್ಕೌಟ್ಸ್ ಮತ್ತು ಗೈಡ್ಸ್ ಜಿಲ್ಲಾ ತರಬೇತಿ ಕೇಂದ್ರ, ಪಿಲಿಕುಳ, ದಕ್ಷಿಣ ಕನ್ನಡ ಜಿಲ್ಲೆ |
| 8 | ಸ್ಕೌಟ್–ಗೈಡ್ ವಿಭಾಗಗಳ ಪುನಶ್ಚೇತನ ತರಬೇತಿ ಶಿಬಿರ | 30.09.2026 ರಿಂದ 04.10.2026 | ಸ್ಕೌಟ್ಸ್ ಮತ್ತು ಗೈಡ್ಸ್ ಜಿಲ್ಲಾ ತರಬೇತಿ ಕೇಂದ್ರ, ಪಿಲಿಕುಳ, ದಕ್ಷಿಣ ಕನ್ನಡ ಜಿಲ್ಲೆ |
| 9 | ಪ್ರೇರಣಾ ಕಾರ್ಯಕ್ರಮ | ಸೆಪ್ಟಂಬರ್ 2026 | ಜಿಲ್ಲಾ ಮಟ್ಟದಲ್ಲಿ |
| 10 | ಪರಿಸರ ಸ್ನೇಹಿ ಗಣಪತಿ ಸಿದ್ಧಪಡಿಸುವುದು ಮತ್ತು ಆಚರಿಸುವುದು | ಸೆಪ್ಟಂಬರ್ 2026 | ದಳ, ಸ್ಥಳೀಯ, ಜಿಲ್ಲಾ ಹಾಗೂ ರಾಜ್ಯ ಹಂತದಲ್ಲಿ |

## Brief Report of the National Level Scouts of the World Award Discovery Workshop

The National Level **Scouts of the World Award Discovery Workshop** commenced on **4th August 2026** and concluded at **10:00 AM on 8th August 2026**. The workshop aimed to equip Senior Scouts, Senior Guides, Rovers, and Rangers with the knowledge, skills, and values required to become active citizens and contribute meaningfully to sustainable community development. The programme focused on key global themes such as **development, peace & environmental Sustainability**, encouraging young people to identify and address issues affecting their local communities.



A total of **13 Rovers and Rangers from five BSG States** participated in the workshop, which commenced at **3:00 PM on 4th August**. The programme began with **the Flag Ceremony and BSG Prayer**, followed by participant introductions, ice-breaking activities, and an overview of camp rules and guidelines. A **Safe from Harm (SFH)** session was also conducted, after which all participants completed the **SFH1 e-learning module**.

The **Opening Ceremony** was graced by **Shri Madhusudhan Avala, Additional International Commissioner (Scouts), BSG India**, who introduced the participants to the **Scouts of the World Award (SWA)**, its objectives, and its significance in developing young people as responsible and active global citizens. The day concluded with dinner followed by an engaging **Scout Talk**, which provided participants with an opportunity for reflection, interaction, and meaningful discussions.

The five-day workshop covered a range of topics and experiential activities designed to encourage participants to **reflect on their inner selves, discover their potential, identify their passions, and understand their role in contributing to sustainable community development**. The **Sustainable Development Goals (SDGs)** were discussed in detail, and various participatory tools and activities were used to enhance understanding and encourage deeper reflection.

The key tools and activities included:

- **Playing Dialogo! – The Game for Building Common Ground**
- **Passion & Compassion Worksheet – Discover the Change You Want to Make**
- **Scouts of the World Award (SWA) Passport**
- **80-Hour Voluntary Service Canvas – From Discovery to Action**
- **Personal Action Plan**

These activities enabled participants to move from **self-discovery and awareness to identifying areas of concern and developing ideas for meaningful community action**.

A special **online quiz** was also conducted by the facilitator, **Shri Satyajit Chatterjee**, to assess the participants' understanding of the topics covered during the workshop and reinforce key learnings from the sessions conducted by the resource persons.

**Shri Satyajit Chatterjee also served as the "Listening Ear" during the workshop**, providing participants with a safe and supportive space to share their thoughts, concerns, reflections, and experiences. This role complemented the workshop's emphasis on self-reflection, personal growth, and meaningful participation.

Overall, the workshop provided participants with a meaningful learning experience, combining **self-reflection, experiential learning, teamwork, global citizenship, and community engagement**. It encouraged the participants to take ownership of their ideas and translate their learning into meaningful voluntary action for sustainable community development.







## A Throwback Picture.

A Cherished Memory of 1982, when **Sri N. DHARAM SINGH** Hon'ble Minister for Housing and Urban Development, Govt of Karnataka visited the Bangalore North District Rally held at Fort High School Grounds, Bangalore.

Also seen in the picture are Mr. G. Sivappa, Former State Treasurer, Sri Kanti Bonsle, State Headquarters Band Master, Sri Kondajji B. Shanmukhappa the then Headquarters Commissioner (S) Publication and Smt. Radha Venkatesh then a Rashtrapathi Guide explaining the Exhibits to the Hon'ble Minister Sri N. Dharam Singh and other Guests.

A treasured memory from the early days of my Scouting and Guiding Journey one that Continues to Inspire Lifelong Commitment to the Movement.

**- Radha Venkatesh**

Asst. State Commissioner (G), B.S&G, Karnataka
and Presently National Commissioner (G), National Headquarters, New Delhi.

# ನಾಯಕನ ಗುಣ ಲಕ್ಷಣಗಳು - ಪಂಚತಂತ್ರ

–ಪ್ರೊ. ಶ್ರೀಧರ್ ಮೇಲುಕೋಟೆ ಕೆ.
ಉಪಾಧ್ಯಕ್ಷರು, ಕರ್ನಾಟಕ ಸ್ಕೌಟ್–ಗೈಡ್ ಮಾಸಪತ್ರಿಕೆ, ಸಂಪಾದಕ ಮಂಡಳಿ

ವಿಷ್ಣುಶರ್ಮನು ಬರೆದ ಪಂಚತಂತ್ರವು ಭಾರತದ ನೀತಿಶಾಸ್ತ್ರ, ಆಡಳಿತ ಮತ್ತು ಪ್ರಾಯೋಗಿಕ ಬುದ್ಧಿವಂತಿಕೆಯ ಮೇಲಿನ ಅತ್ಯಂತ ಪ್ರಭಾವಶಾಲಿ ಕೃತಿಗಳಲ್ಲಿ ಒಂದಾಗಿದೆ. ನಿರೂಪಣೆಗಳು ಮತ್ತು ಧ್ಯೇಯಗಳ ಮೂಲಕ, ಇದು ನಾಯಕತ್ವವನ್ನು ಕೇವಲ ಅಧಿಕಾರಕ್ಕಿಂತ ಹೆಚ್ಚಾಗಿ ಬುದ್ಧಿವಂತಿಕೆ, ವಿವೇಕ, ನೈತಿಕ ನಡವಳಿಕೆ ಮತ್ತು ಕಾರ್ಯತಂತ್ರದ ಕ್ರಿಯೆಯ ಸಂಯೋಜನೆಯಾಗಿ ಪ್ರಸ್ತುತಪಡಿಸುತ್ತದೆ. ನಾಯಕನ ಪ್ರಮುಖ ಗುಣವೆಂದರೆ ವಿವೇಚನೆಯಿಂದ ಮಾರ್ಗದರ್ಶಿಸಲ್ಪಟ್ಟ ಬುದ್ಧಿವಂತಿಕೆ (ವಿವೇಕ). ಪಂಚತಂತ್ರವು ಹೀಗೆ ಹೇಳುತ್ತದೆ:

ವಿದ್ವತ್ತ್ವಂ ಚ ನೃಪತ್ತ್ವಂ ಚ ನೈವ ತುಲ್ಯಂ ಕದಾಚನ.
ಸ್ವದೇಶೇ ಪೂಜ್ಯತೇ ರಾಜಾ ವಿದ್ವಾನ್ ಸರ್ವತ್ರ ಪೂಜ್ಯತೇ

"ರಾಜರನ್ನು ಅವರ ಸ್ವಂತ ರಾಜ್ಯದಲ್ಲಿ ಮಾತ್ರ ಗೌರವಿಸಲಾಗುತ್ತದೆ, ಆದರೆ ವಿದ್ವಾಂಸರನ್ನು ಎಲ್ಲೆಡೆ ಗೌರವಿಸಲಾಗುತ್ತದೆ." ಇದು ಜ್ಞಾನವು ನಿರಂತರ ನಾಯಕತ್ವದ ನಿಜವಾದ ಅಡಿಪಾಯ ಎಂದು ಒತ್ತಿಹೇಳುತ್ತದೆ. ಒಬ್ಬ ನಾಯಕನು ಕ್ರಿಯೆಗೆ ಮುನ್ನ ಎಚ್ಚರಿಕೆಯಿಂದ ಯೋಚಿಸಬೇಕು:

ಸಹಸಾ ವಿದಧೀತ ನ ಕ್ರಿಯಾಮವಿವೇಕಃ ಪರಮಪದಾಂ ಪದಮ್ ।

"ಒಬ್ಬನು ಎಂದಿಗೂ ಆತುರದಿಂದ ವರ್ತಿಸಬಾರದು; ಅಜಾಗರೂಕತೆಯು ದೊಡ್ಡ ವಿಪತ್ತುಗಳಿಗೆ ಹೆಬ್ಬಾಗಿಲು." ಆದ್ದರಿಂದ ಯಶಸ್ವಿ ನಾಯಕತ್ವಕ್ಕೆ ಚಿಂತನಶೀಲ ನಿರ್ಧಾರ ತೆಗೆದುಕೊಳ್ಳುವುದು ಅತ್ಯಗತ್ಯ. ಪಂಚತಂತ್ರವು ನಾಯಕರು ಯೋಗ್ಯ ಸಹಚರರು ಮತ್ತು ಸಲಹೆಗಾರರನ್ನು ಬೆಳೆಸಿಕೊಳ್ಳಬೇಕು ಎಂದು ಮತ್ತಷ್ಟು ಕಲಿಸುತ್ತದೆ. ಏಕೆಂದರೆ ಬುದ್ಧಿವಂತ ಸಲಹೆಯು ಆಡಳಿತವನ್ನು ಬಲಪಡಿಸುತ್ತದೆ ಮತ್ತು ದುಷ್ಟರೊಂದಿಗಿನ ಸಹವಾಸವು ವಿನಾಶಕ್ಕೆ ಕಾರಣವಾಗುತ್ತದೆ. ವಿವೇಕ, ರಾಜತಾಂತ್ರಿಕತೆ ಮತ್ತು ಪರಿಣಾಮಗಳನ್ನು ಮುಂಗಾಣುವ ಸಾಮರ್ಥ್ಯವು ಆಡಳಿತಗಾರರ ಅನಿವಾರ್ಯ ಗುಣಗಳಾಗಿವೆ ಎಂದು ಅದು ಪದೇ ಪದೇ ವಿವರಿಸುತ್ತದೆ.

ಮತ್ತೊಂದು ಪ್ರಮುಖ ಸೂತ್ರವು ಪ್ರಯತ್ನ ಮತ್ತು ಪರಿಶ್ರಮದ ಮೌಲ್ಯವನ್ನು ಎತ್ತಿ ತೋರಿಸುತ್ತದೆ:

ಉದ್ಯಮೇನ ಹಿ ಸಿದ್ಧ್ಯಂತಿ ಕಾರ್ಯಾಣಿ ನ ಮನೋರಥೈಃ ।
ನ ಹಿ ಸುಪ್ತಸ್ಯ ಸಿಂಹಸ್ಯ ಪ್ರವಿಶಂತಿ ಮುಖೇ ಮೃಗಾಃ ॥

'ಕೇವಲ ಆಸೆಗಳಿಂದಲ್ಲ, ಪ್ರಯತ್ನದಿಂದ ಕೆಲಸಗಳು ನೆರವೇರುತ್ತವೆ; ಮಲಗಿರುವ ಸಿಂಹದ ಬಾಯಿಗೆ ಜಿಂಕೆಗಳು ಪ್ರವೇಶಿಸುವುದಿಲ್ಲ'. ಹೀಗಾಗಿ, ಪಂಚತಂತ್ರವು ಆದರ್ಶ ನಾಯಕನನ್ನು ಕಲಿತ, ವಿವೇಕಯುತ, ಸ್ವಯಂ ನಿಯಂತ್ರಣ ಹೊಂದಿರುವ, ಶ್ರದ್ಧೆಯುಳ್ಳ ಮತ್ತು ಬುದ್ಧಿವಂತ ಸಹಚರರನ್ನು ಆಯ್ಕೆ ಮಾಡುವ ಸಾಮರ್ಥ್ಯವಿರುವ ವ್ಯಕ್ತಿಯಾಗಿ ಚಿತ್ರಿಸುತ್ತದೆ. ಈ ಕಾಲಾತೀತ ತತ್ವಗಳು ಸಾರ್ವಜನಿಕ ಆಡಳಿತ, ಶಿಕ್ಷಣ, ವ್ಯವಹಾರ ಮತ್ತು ಸಾಂಸ್ಥಿಕ ನಿರ್ವಹಣೆಯಲ್ಲಿ ಸಮಕಾಲೀನ ನಾಯಕತ್ವಕ್ಕೆ ಹೆಚ್ಚು ಪ್ರಸ್ತುತವಾಗಿವೆ. ಹಾರ್ವರ್ಡ್ ಬಿಸಿನೆಸ್ ಸ್ಕೂಲ್ ಪ್ರಕಾರ, ಪರಿಣಾಮಕಾರಿ ನಾಯಕನು ದೃಷ್ಟಿ, ಸಮಗ್ರತೆ, ಭಾವನಾತ್ಮಕ ಬುದ್ಧಿವಂತಿಕೆ, ಹೊಂದಿಕೊಳ್ಳುವಿಕೆ, ಹೊಣೆಗಾರಿಕೆ ಮತ್ತು ಉತ್ತಮ ನಿರ್ಧಾರ ತೆಗೆದುಕೊಳ್ಳುವಿಕೆಯನ್ನು ಸಂಯೋಜಿಸುತ್ತಾನೆ. ಅಂತಹ ನಾಯಕರು ನಂಬಿಕೆಯನ್ನು ಪ್ರೇರೇಪಿಸುತ್ತಾರೆ, ಸ್ಪಷ್ಟವಾಗಿ ಸಂವಹನ ನಡೆಸುತ್ತಾರೆ, ಇತರರಿಗೆ ಅಧಿಕಾರ ನೀಡುತ್ತಾರೆ, ಸಹಯೋಗವನ್ನು ಬೆಳೆಸುತ್ತಾರೆ, ನಿರಂತರ ಕಲಿಕೆಯನ್ನು ಸ್ವೀಕರಿಸುತ್ತಾರೆ ಮತ್ತು ಮಾದರಿಯ ಮೂಲಕ ಮುನ್ನಡೆಸುತ್ತಾರೆ. ಹಂಚಿಕೆಯ ಉದ್ದೇಶ ಮತ್ತು ಪರಸ್ಪರ ಗೌರವದ ಮೂಲಕ ನಾವೀನ್ಯತೆ, ನೈತಿಕ ನಡವಳಿಕೆ ಮತ್ತು ಸಾಂಸ್ಥಿಕ ಶ್ರೇಷ್ಠತೆ ಪ್ರವರ್ಧಮಾನಕ್ಕೆ ಬರುವ ವಾತಾವರಣವನ್ನು ಅವರು ಸೃಷ್ಟಿಸುತ್ತಾರೆ.

ಉಲ್ಲೇಖ: ನೊಹ್ರಿಯಾ, ಎನ್., & ಖುರಾನಾ, ಆರ್. (ಸಂಪಾದಕರು). (2010). ನಾಯಕತ್ವದ ಕುರಿತು. ಬೋಸ್ಟನ್, ಒಂ: ಹಾರ್ವರ್ಡ್ ಬಿಸಿನೆಸ್ ರಿವ್ಯೂ ಪ್ರೆಸ್. ಕೇಲ್ ಎಂ.ಆರ್., ಪಂಚತಂತ್ರ ಆಫ್ ವಿಷ್ಣುಶರ್ಮನ್ : ಸಂಪಾದಿತ ಸಣ್ಣ ಸಂಸ್ಕೃತ ವ್ಯಾಖ್ಯಾನ ಮತ್ತು ಸಾಹಿತ್ಯಿಕ ಇಂಗ್ಲಿಷ್ ಅನುವಾದ, (ಎರಡನೇ ಆವೃತ್ತಿ, 1969), ಮೋತಿಲಾಲ್ ಬನಾರಸಿದಾಸ್ ಪಬ್ಲಿಷರ್ಸ್ (ಪ್ರೈ) ಲಿಮಿಟೆಡ್, ನವದೆಹಲಿ

# ಸ್ಕೌಟ್ ಸ್ಕಿಲೋ ಕಾರ್ಯಕ್ರಮಗಳು





















# ಜಿಲ್ಲಾ ವಾರ್ತೆಗಳು

## ಬಾಗಲಕೋಟೆ

* ಆಗಸ್ಟ್ 13 ರಂದು ಬಾಗಲಕೋಟ ಜಿಲ್ಲೆಯ ಮಾನ್ಯ ಉಪನಿರ್ದೇಶಕರು (ಆಡಳಿತ) ಶಾಲಾ ಶಿಕ್ಷಣ ಇಲಾಖೆ ಹಾಗೂ ಜಿಲ್ಲಾ ಮುಖ್ಯ ಆಯುಕ್ತರು ಶ್ರೀ ಅಜಿತ ಮನ್ನಿಕೇರಿ ಇವರು ವರ್ಗಾವಣೆಗೊಂಡ ಪ್ರಯುಕ್ತ ಜಿಲ್ಲಾ ಸಂಸ್ಥೆ ಬಾಗಲಕೋಟ ವತಿಯಿಂದ ಗೌರವಿಸಿ ಬೀಳ್ಕೊಡಲಾಯಿತು. ಸದರಿ ಸ್ಥಳಕ್ಕೆ ನೂತನ ಉಪನಿರ್ದೇಶಕರಾಗಿ ಆಗಮಿಸಿದ ಶ್ರೀ ಸೀತಾರಾಮ ಆರ್.  ರವರನ್ನು ಜಿಲ್ಲೆಗೆ ಸ್ವಾಗತಿಸಲಾಯಿತು. ಕಾರ್ಯಕ್ರಮದಲ್ಲಿ ಜಿಲ್ಲಾ ಆಯುಕ್ತರು (ಸ್ಕೌಟ್) ಶ್ರೀ ಹೆಚ್.ಜಿ. ಮಿರ್ಜಿ, ಜಿಲ್ಲಾ ಕಾರ್ಯದರ್ಶಿಗಳಾದ ಶ್ರೀ ಎಸ್.ಎಸ್. ದಳವಾಯಿ ಉಪಸ್ಥಿತರಿದ್ದರು.



* ಆಗಸ್ಟ್ 11 ರಂದು ಬಾಗಲಕೋಟ ಜಿಲ್ಲಾ ಪಂಚಾಯತ ಸಭಾ ಭವನದಲ್ಲಿ ಜಿಲ್ಲೆಯ ಸ್ಕೌಟ್, ಗೈಡ್ ಚಟುವಟಿಕೆಗಳ ಪ್ರಗತಿ ಪರಿಶೀಲನಾ ಸಭೆ ಜರುಗಿತು. ಸಭೆಯ ಅಧ್ಯಕ್ಷತೆಯನ್ನು ಮಾಜಿ ಸಚಿವರು ಕರ್ನಾಟಕ ಸನ್ಮಾನ್ಯ ಶ್ರೀ ಎಸ್.ಆರ್. ಪಾಟೀಲ ವಹಿಸಿದ್ಧರು. ರಾಜ್ಯ ಮುಖ್ಯ ಆಯುಕ್ತರಾದ ಡಾ. ಪಿ.ಜಿ.ಆರ್. ಸಿಂಧ್ಯ, ಮಾನ್ಯ ಜಿಲ್ಲಾಧಿಕಾರಿಗಳು ಹಾಗೂ ಜಿಲ್ಲಾದಂಡಾಧಿಕಾರಿಗಳಾದ ಶ್ರೀ ಸಂಗಪ್ಪ ಮುಖ್ಯ ಅತಿಥಿಗಳಾಗಿ ಆಗಮಿಸಿದ್ದರು. ಮಾನ್ಯ ಮುಖ್ಯಲೆಕ್ಕಾಧಿಕಾರಿಗಳು ಶ್ರೀ ಅಲ್ಲಪ್ಪನವರ, ಮಾನ್ಯ ಉಪನಿರ್ದೇಶಕರು ಶಾಲಾ ಶಿಕ್ಷಣ ಇಲಾಖೆ (ಪ.ಪೂ.) ಬಾಗಲಕೋಟ ಶ್ರೀ ಪುಂಡಲೀಕ ಕಾಂಬಳೆ, ಶ್ರೀಮತಿ ಸಿ. ಮಂಜುಳಾ, ರಾಜ್ಯ ಸಂಘಟನಾ ಆಯುಕ್ತರು (ಗೈಡ್) ಉಪಸ್ಥಿತರಿದ್ದರು. ಹುನಗುಂದ ಕ್ಷೇತ್ರ ಶಿಕ್ಷಣಾಧಿಕಾರಿಗಳು ಶ್ರೀಮತಿ ಜಾಸ್ಮೀನ ಕಿಲ್ಲೇದಾರ ತಾಲೂಕಿನ ಸ್ಕೌಟ್, ಗೈಡ್ ಚಟುವಟಿಕೆಗಳ ಕುರಿತು ತಮ್ಮ ವಿಚಾರಗಳನ್ನು



ವ್ಯಕ್ತಪಡಿಸಿದರು. ರಾಜ್ಯ ಮುಖ್ಯ ಆಯುಕ್ತರಾದ ಡಾ. ಪಿ.ಜಿ.ಆರ್. ಸಿಂಧ್ಯ ರವರು ಮಾತನಾಡುತ್ತ "ಜಿಲ್ಲೆಯ ಕಾರ್ಯಕ್ರಮಗಳ ವರದಿ ಮತ್ತು ಪ್ರಗತಿ ನಮಗೆ ಸಂತೋಷ ತಂದಿದೆ" ಎಂದು ಹೇಳಿದರು. ಜಿಲ್ಲಾ ಕಾರ್ಯದರ್ಶಿ ಶ್ರೀ ಎಸ್.ಎಸ್. ದಳವಾಯಿ ಕಾರ್ಯಕ್ರಮ ವರದಿ ಮತ್ತು ಗಣತಿಯ ಅಂಕಿ ಅಂಶ ಮಂಡಿಸಿದರು. ಜಿಲ್ಲಾ ಆಯುಕ್ತರು (ಸ್ಕೌಟ್) ಶ್ರೀ ಹೆಚ್.ಜಿ. ಮಿರ್ಜಿ ಎಲ್ಲರನ್ನೂ ಸ್ವಾಗತಿಸಿ ಪ್ರಾಸ್ತಾವಿಕ ಮಾತನಾಡಿದರು. ಶ್ರೀ ವಿ.ಆರ್. ಹಿರೇನಿಂಗಪ್ಪನವರ ಕಾರ್ಯಕ್ರಮ ನಿರೂಪಿಸಿದರು. 75 ಕ್ಕೂ ಹೆಚ್ಚು ಶಿಕ್ಷಣ ಇಲಾಖೆಯ ಅಧಿಕಾರಿಗಳು, ಸ್ಥಳೀಯ ಹಾಗೂ ಜಿಲ್ಲಾ ಸಂಸ್ಥೆಯ ಪದಾಧಿಕಾರಿಗಳು ಭಾಗವಹಿಸಿದ್ದರು.

* ಆಗಸ್ಟ್ 15 ರಂದು 80ನೇ ಸ್ವಾತಂತ್ರ್ಯ ದಿನಾಚರಣೆಯ ಪ್ರಯುಕ್ತ ಜಿಲ್ಲಾ ಸಂಸ್ಥೆ ಬಾಗಲಕೋಟ ಇಲ್ಲಿ ಧ್ವಜಾರೋಹಣ ಕಾರ್ಯಕ್ರಮ ನೆರವೇರಿತು. ಧ್ವಜಾರೋಹಣವನ್ನು ಜಿಲ್ಲಾ ಆಯುಕ್ತರು (ಸ್ಕೌಟ್) ಹಾಗೂ ವಿಶ್ರಾಂತ ಉಪನಿರ್ದೇಶಕರಾದ ಶ್ರೀ  ಹೆಚ್.ಜಿ. ಮಿರ್ಜಿ ನೆರವೇರಿಸಿದರು. ಕಾರ್ಯಕ್ರಮದಲ್ಲಿ ರಾಜ್ಯ ಕಾರ್ಯಕಾರಿ ಸಮಿತಿಯ ಸದಸ್ಯರಾದ ಶ್ರೀ ಸಿ.ಎ. ಸಾವಳಗಿ, ಜಿಲ್ಲಾ ಕಾರ್ಯದರ್ಶಿಗಳಾದ ಶ್ರೀ ಎಸ್.ಎಸ್. ದಳವಾಯಿ, ರೇಂಜರ್ ಲೀಡರ್ ಡಾ. ಸುಮಂಗಲಾ ಮೇಟಿ, ರೋವರ್ ಸ್ಕೌಟ್ ಲೀಡರ್ ಪ್ರೊ. ಪರಸಪ್ಪ ತಳವಾರ, ಉಪಸ್ಥಿತರಿದ್ದರು. ಕಬ್ಸ್, ಬುಲ್‌ಬುಲ್ಸ್ ಮತ್ತು ಸ್ಕೌಟ್ಸ್, ಗೈಡ್ಸ್‌ಗಳು ಭಾಗವಹಿಸಿದ್ದರು.



## ಬಳ್ಳಾರಿ

* ಆಗಸ್ಟ್ 15 ರಂದು 80ನೇ ಸ್ವಾತಂತ್ರ್ಯೋತ್ಸವ ದಿನಾಚರಣೆಯನ್ನು ಬಿ.ಎಂ.ಸಿ.ಆರ್.ಸಿ. ಕ್ರೀಡಾಂಗಣ, ಬಳ್ಳಾರಿ ಇಲ್ಲಿ ಅಯೋಜಿಲಾಗಿತ್ತು. ಕಾರ್ಯಕ್ರಮದ ಧ್ವಜಾರೋಹಣವನ್ನು ಶ್ರೀ ಬಿ. ನಾಗೇಂದ್ರ, ಮಾನ್ಯ  ಯೋಜನೆ ಮತ್ತು ಸಾಂಖ್ಯಿಕ ಸಚಿವರು, ಕರ್ನಾಟಕ ಸರ್ಕಾರ ಹಾಗೂ ಬಳ್ಳಾರಿ ಜಿಲ್ಲಾ ಉಸ್ತುವಾರಿ ಸಚಿವರು ಇವರು ನೆರವೇರಿಸಿದರು. ಪರೇಡ್‌ನಲ್ಲಿ ಸಂತ ಜೋಸೆಫರ ಬಾಲಕಿಯರ ಪ್ರೌಢ ಶಾಲೆ ಬಳ್ಳಾರಿ, ಈ ಶಾಲೆಯ ಗೈಡ್ ವಿದ್ಯಾರ್ಥಿಗಳು ತೃತೀಯ ಸ್ಥಾನ ಪಡೆದರು, ಇವರಿಗೆ ಮಾನ್ಯ ಸಚಿವರು ಪ್ರಶಸ್ತಿ ಪತ್ರವನ್ನು ವಿತರಿಸಿದರು. ಇದೇ ಸಂದರ್ಭದಲ್ಲಿ ಗೌರವಾನ್ವಿತ ಮುಖ್ಯ ಅತಿಥಿಗಳು ಶ್ರೀ ಈ. ತುಕಾರಾಮ್, ಮಾನ್ಯ ಸಂಸದರು (ಲೋಕಸಭೆ), ಬಳ್ಳಾರಿ,

ಶ್ರೀ ಕೆ. ರಾಜಶೇಖರ ಬಸವರಾಜ ಹಿಟ್ನಾಳ್, ಮಾನ್ಯ ಸಂಸದರು (ಲೋಕಸಭೆ), ಕೊಪ್ಪಳ, ಡಾ. ಸೈಯದ್ ನಾಸೀರ್ ಹುಸೇನ್, ಮಾನ್ಯ ಸಂಸದರು (ರಾಜ್ಯಸಭೆ), ಶ್ರೀ ಜೆ.ಎನ್. ಗಣೇಶ್, ಮಾನ್ಯ ಶಾಸಕರು (ವಿಧಾನಸಭೆ), ಕಂಪ್ಲಿ ಕ್ಷೇತ್ರ ಹಾಗೂ ಅಧ್ಯಕ್ಷರು, ಕರ್ನಾಟಕ ರಾಜ್ಯ ಸಹಕಾರ ಕೈಮಗ್ಗ ನೇಕಾರರ ಮಹಾಮಂಡಳಿ ನಿಯಮಿತ (ಕಾವೇರಿ ಹ್ಯಾಂಡ್ ಲ್ಯೂಮ್ಸ್), ಶ್ರೀ ಮುಂಡರಗಿ ನಾಗರಾಜ, ಮಾನ್ಯ ಅಧ್ಯಕ್ಷರು, ಡಾ. ಬಾಬು ಜಗಜೀವನರಾಂ ಚರ್ಮ ಕೈಗಾರಿಕಾ ಅಭಿವೃದ್ಧಿ ನಿಗಮ, ಬೆಂಗಳೂರು, ಶ್ರೀ ಬಿ.ಎಂ. ನಾಗರಾಜ, ಮಾನ್ಯ ಶಾಸಕರು (ವಿಧಾನಸಭೆ), ಸಿರುಗುಪ್ಪ ಕ್ಷೇತ್ರ, ಶ್ರೀ ನಾರಾ ಭರತ್ ರೆಡ್ಡಿ, ಮಾನ್ಯ ಶಾಸಕರು (ವಿಧಾನಸಭೆ), ಬಳ್ಳಾರಿ ನಗರ ಕ್ಷೇತ್ರ, ಶ್ರೀಮತಿ ಈ. ಅನ್ನಪೂರ್ಣ, ಮಾನ್ಯ ಶಾಸಕರು (ವಿಧಾನಸಭೆ), ಸಂಡೂರು ಕ್ಷೇತ್ರ, ಡಾ॥ ಚಂದ್ರಶೇಖರ ಬಿ. ಪಾಟೀಲ, ಮಾನ್ಯ ಶಾಸಕರು, ವಿಧಾನಪರಿಷತ್, ಶ್ರೀ ಶಶಿಲ್ ಜಿ. ನಮೋಶಿ, ಮಾನ್ಯ ಶಾಸಕರು, ವಿಧಾನ ಪರಿಷತ್, ಶ್ರೀ ವೈ.ಎಂ. ಸತೀಶ್, ಮಾನ್ಯ ಶಾಸಕರು, ವಿಧಾನ ಪರಿಷತ್, ಶ್ರೀ ಪಿ. ಗಾದೆಪ್ಪ ಪೂಜ್ಯ ಮಹಾಪೌರರು, ಬಳ್ಳಾರಿ ಮಹಾನಗರ ಪಾಲಿಕೆ, ಬಳ್ಳಾರಿ, ಶ್ರೀ ಜೆ.ಎಸ್. ಆಂಜನೇಯಲು ಮಾನ್ಯ ಅಧ್ಯಕ್ಷರು, ಬಳ್ಳಾರಿ ನಗರಾಭಿವೃದ್ಧಿ ಪ್ರಾಧಿಕಾರ, ಬಳ್ಳಾರಿ, ಶ್ರೀ ಹೆಚ್. ಲಕ್ಷ್ಮಣ, ಮಾನ್ಯ ಉಪಾಧ್ಯಕ್ಷರು, ಕರ್ನಾಟಕ ಸ್ಟೇಟ್ ಮಿನರಲ್ಸ್ ಕಾರ್ಪೋರೇಷನ್ ಲಿಮಿಟೆಡ್, ಬೆಂಗಳೂರು, ಶ್ರೀ ಕೆ.ಇ. ಚಿದಾನಂದಪ್ಪ, ಮಾನ್ಯ ಅಧ್ಯಕ್ಷರು, ಜಿಲ್ಲಾ ಗ್ಯಾರಂಟಿ ಯೋಜನೆಗಳ ಅನುಷ್ಠಾನ ಪ್ರಾಧಿಕಾರ, ಬಳ್ಳಾರಿ, ಡಾ. ಪಿ.ಎಸ್. ಹರ್ಷ, ಭಾ.ಪೊ.ಸೇ. ಪೊಲೀಸ್ ಮಹಾ ನಿರೀಕ್ಷಕರು, ಬಳ್ಳಾರಿ ವಲಯ ಬಳ್ಳಾರಿ, ಡಾ. ಸುಮನ್ ಡಿ.ಪಿ., ಭಾ.ಪೊ.ಸೇ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿಗಳು ಬಳ್ಳಾರಿ, ಶ್ರೀ. ನಾಗೇಂದ್ರ ಪ್ರಸಾದ್ ಕೆ., ಭಾ.ಆ.ಸೇ, ಜಿಲ್ಲಾಧಿಕಾರಿಗಳು, ಬಳ್ಳಾರಿ, ಶ್ರೀ ಮಹಮದ್ ಹಾರೀಸ್ ಸುಮೇರ್, ಭಾ.ಆ.ಸೇ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು ಜಿಲ್ಲಾ ಪಂಚಾಯತ್, ಬಳ್ಳಾರಿರವರು ಉಪಸ್ಥಿತರಿದ್ದರು.



* ಆಗಸ್ಟ್ 12 ರಿಂದ 13ರ ವರೆಗೆ ಜಿಲ್ಲಾ ಮಟ್ಟದ ಪ್ರೇರಣಾ ಶಿಬಿರವನ್ನು ಶ್ರೀಮತಿ ಸರಳಾದೇವಿ ಸತೀಶ್ಚಂದ್ರ ಸರ್ಕಾರಿ ಪ್ರಥಮ ದರ್ಜೆ ಕಾಲೇಜು ಬಳ್ಳಾರಿ ಇಲ್ಲಿ ಆಯೋಜಿಸಲಾಗಿತ್ತು. ಈ ಕಾರ್ಯಕ್ರಮವನ್ನು ರಾಜ್ಯ ಮುಖ್ಯ ಆಯುಕ್ತರು ಹಾಗೂ ಮಾಜಿ ಸಚಿವರಾದ ಡಾ. ಪಿ.ಜಿ.ಆರ್. ಸಿಂಧ್ಯರವರು ಉದ್ಘಾಟಿಸಿದರು. ಈ ಕಾರ್ಯಕ್ರಮದ ಮುಖ್ಯ ಅತಿಥಿಗಳಾಗಿ ಬಳ್ಳಾರಿ ಜಿಲ್ಲೆಯ ಮಾನ್ಯ ಪೊಲೀಸ್ ವರಿಷ್ಠಾಧಿಕಾರಿಗಳಾದ ಡಾ. ಡಿ.ಪಿ. ಸುಮನ್, ಐ.ಪಿ.ಎಸ್. ಶ್ರೀಕೃಷ್ಣದೇವರಾಯ ವಿಶ್ವವಿದ್ಯಾಲಯದ ಕುಲಪತಿಗಳಾದ ಡಾ. ವಿ. ಲೋಕೇಶ್, ಪ್ರಾಂಶುಪಾಲರಾದ ಡಾ. ಜಿ. ಪ್ರಹ್ಲಾದ್ ಚೌಧ್ರಿ, ಶ್ರೀಮತಿ ಮಲ್ಲೇಶ್ವರಿ ಜುಜಾರೆ, ಕಲ್ಯಾಣ ಕರ್ನಾಟಕ ಉಸ್ತುವಾರಿಗಳು ರೋವರಿಂಗ್ & ರೇಂಜರಿಂಗ್ incharge ಕರ್ನಾಟಕ, ಶ್ರೀ ಶಶಿಧರ್ ಕೆಲ್ಲೂರು, ರೋವರ್ ಅಂಡ್ ರೇಂಜರ್ ಉಸ್ತುವಾರಿಗಳು, Vskub



ಬಳ್ಳಾರಿರವರು ಆಗಮಿಸಿದ್ದರು. ಈ ಸಂದರ್ಭದಲ್ಲಿ ಜಿಲ್ಲಾ ಪದಾಧಿಕಾರಿಗಳು ಹಾಗೂ ಶಿಬಿರಾರ್ಥಿಗಳು ಉಪಸ್ಥಿತರಿದ್ದರು. ಈ ಶಿಬಿರದ ನಾಯಕಿಯಾಗಿ ಡಾ. ಬಿ.ಎನ್. ಮಂಗಳರವರು ಕಾರ್ಯನಿರ್ವಹಿಸಿದ್ದಾರೆ. ಸಂಪನ್ಮೂಲ ವ್ಯಕ್ತಿಗಳಾಗಿ ಡಾ. ಶ್ಯಾಮಿಲಿ, ಸ್ತ್ರೀರೋಗ ತಜ್ಞರು, ಡಾ. ರಜನಿಕುಮಾರಿ, ನಿವೃತ್ತ ಪ್ರಾಂಶುಪಾಲರು ಲಾ ಕಾಲೇಜು ಬಳ್ಳಾರಿ, ಡಾ. ಧನುಜರಣಿ, ಜಿಲ್ಲಾ ಆಯುಕ್ತರು (ಗೈಡ್ಸ್) ಡಾ. ರಾಧಿಕಾ, ಶ್ರೀಮತಿ ಎಸ್. ವಿಜಯಲಕ್ಷ್ಮಿ, ಫ್ಯಾಮಿಲಿ ಪ್ಲಾನಿಂಗ್ ಅಸೋಸಿಯೇಷನ್ ಬಳ್ಳಾರಿರವರು ಆಗಮಿಸಿ ಮಾಹಿತಿಯನ್ನು ನೀಡಿರುತ್ತಾರೆ.

* ಜೂನ್ 05 ರಂದು "ವಿಶ್ವ ಪರಿಸರ ದಿನಾಚರಣೆ"ಯನ್ನು ಸಿರುಗುಪ್ಪ ತಾಲೂಕು ಬಳ್ಳಾರಿ ಜಿಲ್ಲೆಯ ಎಲ್ಲಾ ಶಾಲಾ ಕಾಲೇಜುಗಳಲ್ಲಿ ಸಸಿ ನೆಡುವುದರ ಮೂಲಕ ಆಚರಿಸಲಾಯಿತು. ಸರ್ಕಾರಿ ಪ್ರೌಢ ಶಾಲೆ ಅರಳಿಗನೂರು ತಾಲ್ಲೂಕು ಸಿರುಗುಪ್ಪ ಜಿ. ಬಳ್ಳಾರಿ ಯಲ್ಲಿ ಶ್ರೀ ಹುಸೇನ್ ಪೀರ್ ಸಾಹೆಬ ಮುಖ್ಯ ಗುರುಗಳು, ಶ್ರೀ ನಟರಾಜ ಸ್ವಾಮಿ A.L.T.(S) ಕಾರ್ಯದರ್ಶಿಗಳು, ಶ್ರೀ ಯೋಗೀಶ .ಜಿ, ಕೋಶಾಧಿಕಾರಿ, ಸ್ಥಳೀಯ ಸಂಸ್ಥೆ ಸಿರುಗುಪ್ಪ ಜಿ. ಬಳ್ಳಾರಿ ಸಹಶಿಕ್ಷಕರು ಹಾಗೂ ಸ್ಕೌಟ್ಸ್‌ಗಳು, ಶಾಲಾ ಮಕ್ಕಳು ಭಾಗವಹಿಸಿದ್ದರು. ಮುಖ್ಯಗುರುಗಳ ಜೊತೆಗೆ ಎಲ್ಲಾ ಶಿಕ್ಷಕ ವೃಂದ ಹಾಗೂ ಮಕ್ಕಳು ಸಸಿ ನೆಡುವುದರೊಂದಿಗೆ ಕಾರ್ಯಕ್ರಮವನ್ನು ನಡೆಸಲಾಯಿತು. ಶಾಂತಿ ನಿಕೇತನ ವಿದ್ಯಾ ಮಂದಿರ ಸಿರುಗುಪ್ಪದಲ್ಲಿ ಶಾಲಾ ಆಡಳಿತ ಮಂಡಳಿಯ ಮುಖ್ಯಸ್ಥರಾದ ಶ್ರೀ ಕೆ. ಕೃಷ್ಣ, ಮುಖ್ಯ ಗುರುಗಳಾದ ಶ್ರೀಮತಿ ಲಲಿತಶಾಸ್ತ್ರಿ, ಸ್ಕೌಟ್ಸ್ ಶಿಕ್ಷಕರಾದ ಶ್ರೀ ಸುಧೀಂದ್ರ ಕೆ. ಗೈಡ್ಸ್ ಕ್ಯಾಪ್ಟನ್ ಶ್ರೀಮತಿ ಯೋಗೇಶ್ವರಿ ಹಾಗೂ ಸ್ಕೌಟ್ಸ್ ಗೈಡ್ಸ್‌ಗಳು ಹಾಗೂ ಶಿಕ್ಷಕರು ಸಸಿಗಳನ್ನು ನೆಟ್ಟು 'ವಿಶ್ವ ಪರಿಸರ ದಿನಾಚರಣೆ'ಯನ್ನು ಆಚರಿಸಿದರು. ಶ್ರೀ ಕೃಷ್ಣದೇವರಾಯ ಶಾಲೆಯ ಮುಖ್ಯಸ್ಥರಾದ ಶ್ರೀ ಯಲಿಗಾರ ವೆಂಕಟೇಶ ಮುಖ್ಯಗುರುಗಳು ಹಾಗೂ ಸೌಟ್ಸ್ ಶಿಕ್ಷಕರಾದ ಶ್ರೀ ಅಮರೇಶ ಹಾಗೂ ಮಕ್ಕಳು ಸಸಿ ನೆಡುವುದರೊಂದಿಗೆ ವಿಶ್ವ ಪರಿಸರ ದಿನಾಚರಣೆಯನ್ನು ಆಚರಿಸಿದರು. ಸರಕಾರಿ ಹಿರಿಯ ಪ್ರಾಥಮಿಕ ಶಾಲೆ (ರಾಜೀವಗಾಂಧಿ ನಗರ) ಸಿರುಗುಪ್ಪ ದಲ್ಲಿ ಶ್ರೀಮತಿ ಗೀತಾ ಜೆ. ಗೈಡ್ಸ್ ಶಿಕ್ಷಕಿ ಶ್ರೀಮತಿ ಅಶ್ವಿನಿ ಸಹ ಶಿಕ್ಷಕಿ ಹಾಗೂ ಮಕ್ಕಳೊಂದಿಗೆ ಸಸಿ ನೆಡುವುದರ ಮೂಲಕ ವಿಶ್ವ ಪರಿಸರ ದಿನಾಚರಣೆಯನ್ನು ಆಚರಿಸಿದರು. ಎಸ್.ಇ.ಎಸ್ ಆಂಗ್ಲ ಮಾಧ್ಯಮ ಶಾಲೆಯ ಮುಖ್ಯಸ್ಥರು ಹಾಗೂ ಸ್ಕೌಟ್ಸ್ & ಗೈಡ್ ಶಿಕ್ಷಕಿಯರು ಹಾಗೂ ಮಕ್ಕಳು ಸಸಿ ನೆಡುವುದರೊಂದಿಗೆ ವಿಶ್ವ ಪರಿಸರ ದಿನಾಚರಣೆಯನ್ನು ಆಚರಿಸಿದರು.



* ಜೂನ್ 21 ರಂದು 12ನೇ "ಅಂತರಾಷ್ಟ್ರೀಯ ಯೋಗ ದಿನಾಚರಣೆ" ಯನ್ನು ಬಳ್ಳಾರಿ ಜಿಲ್ಲೆ ಸಿರುಗುಪ್ಪ ತಾಲ್ಲೂಕಿನ ಎಲ್ಲಾ ಶಾಲಾ ಕಾಲೇಜುಗಳಲ್ಲಿ ಆಚರಿಸಲಾಯಿತು. ಸರ್ಕಾರಿ ಪ್ರೌಢಶಾಲೆ ಅರಳಿಗನೂರು ತಾಲ್ಲೂಕು ಸಿರುಗುಪ್ಪ ಜಿಲ್ಲೆ ಬಳ್ಳಾರಿಯಲ್ಲಿ ಸ್ಕೌಟ್ಸ್‌ಗಳು ಹಾಗೂ ವಿದ್ಯಾರ್ಥಿಗಳೊಂದಿಗೆ ಸಹ ಶಿಕ್ಷಕರು ಹಾಗೂ ಕಾರ್ಯದರ್ಶಿಗಳಾದ ಶ್ರೀ ನಟರಾಜ ಸ್ವಾಮಿಯವರು ಯೋಗದ ಬಗ್ಗೆ ಮಾಹಿತಿಯನ್ನು ತಿಳಿಸಿದರು. ಮೊದಲಿಗೆ ಸೂರ್ಯ ನಮಸ್ಕಾರದೊಂದಿಗೆ ಹಲವಾರು ಆಸನಗಳನ್ನು ಮಾಡಿ ಪ್ರತೀ ದಿನ ಯೋಗ ಮಾಡುವುದರಿಂದ ಚೈತನ್ಯ ಶೀಲರಾಗಿ ದಿನ ನಿತ್ಯದ ಕಾರ್ಯಗಳನ್ನು ಮಾಡುತ್ತಾ ದೀರ್ಘಾಯುಷ್ಯ ಹೊಂದುತ್ತಾರೆಂದು ತಿಳಿಸಿದರು. ಶಾಂತಿ ನಿಕೇತನ ವಿದ್ಯಾಮಂದಿರ ಆಂಗ್ಲ ಮಾಧ್ಯಮ ಶಾಲೆ ಸಿರುಗುಪ್ಪ ತಾಲ್ಲೂರು ಬಳ್ಳಾರಿ ಜಿಲ್ಲೆಯಲ್ಲಿ ಶಾಲಾ



ಮುಖ್ಯಸ್ಥರಾದ ಶ್ರೀ ಕೆ. ಕೃಷ್ಣ ಖಜಾಂಚಿಗಳು ಹಾಗೂ ಶಾಲಾ ಮುಖ್ಯೋಪಾಧ್ಯಾಯಿನಿ ಶ್ರೀಮತಿ ಲಲಿತಾಶಾಸ್ತ್ರಿ ಹಾಗೂ ಸ್ಕೌಟ್ಸ್ ಶಿಕ್ಷಕರಾದ ಶ್ರೀ ಸುಧೀಂದ್ರ ಕೆ. ಗೈಡ್ಸ್ ಶಿಕ್ಷಕಿಯಾದ ಶ್ರೀಮತಿ ಯೋಗೇಶ್ವರಿ ಹಾಗೂ ಸ್ಕೌಟ್ಸ್–ಗೈಡ್ಸ್‌ಗಳು ವಿಶ್ವ ಯೋಗ ದಿನಾಚರಣೆಯನ್ನು ಆಚರಿಸಿದರು. ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ (ರಾಜೀವ್ ಗಾಂಧಿ ನಗರ) ಸಿರುಗುಪ್ಪದಲ್ಲಿ ಶ್ರೀಮತಿ ಗೀತಾ ಜೆ. ಗೈಡ್ಸ್ ಶಿಕ್ಷಕಿ ಗೈಡ್ಸ್‌ಗಳಿಗೆ ಯೋಗ ಮಾಡಿಸಿದರು. ಎಸ್.ಇ.ಎಸ್. ಆಂಗ್ಲ ಮಾಧ್ಯಮ ಶಾಲೆ ಸಿರುಗುಪ್ಪ ವಿಶ್ವ ಯೋಗಾ ದಿನಾಚರಣೆಯನ್ನು ಆಚರಿಸಿದರು.

* ಜಿಲ್ಲಾ ಸಂಸ್ಥೆ ಬಳ್ಳಾರಿ ಹಾಗೂ ಬಳ್ಳಾರಿ ಜಿಲ್ಲೆ ಮಾಜಿ ಸೈನಿಕರ ಮತ್ತು ವೀರನಾರಿಯರ ಕಲ್ಯಾಣ ಸಮಿತಿ ಇವರ ಸಂಯುಕ್ತ ಆಶ್ರಯದಲ್ಲಿ 'ಕಾರ್ಗಿಲ್ ವಿಜಯ ದಿವಸ್ ದಿನಾಚರಣೆ'ಯ ವಿವಿಧ ಕಾರ್ಯಕ್ರಮಗಳನ್ನು ಆಯೋಜಿಸಲಾಗಿತ್ತು. ಜುಲೈ 25 ರಂದು ಸಂಜೆ ಮೇಣದ ಬತ್ತಿಯೊಂದಿಗೆ ಎಸ್.ಪಿ. ಸರ್ಕಲ್‌ನಿಂದ ದುರ್ಗಮ್ಮ ಗುಡಿ ಹತ್ತಿರದ ಎಸ್.ಪಿ. ಕಚೇರಿ ಮುಂಭಾಗದಲ್ಲಿರುವ ಅಮರ್ ಜವಾನ್ ಯುದ್ಧ ಸ್ಮಾರಕದವರೆಗೆ ಪಾದಯಾತ್ರೆ ನಡೆಯಿತು.

* ಜುಲೈ 26 ರಂದು ಬೆಳಿಗ್ಗೆ ಅಮರ್ ಜವಾನ್ ಯುದ್ಧ ಸ್ಮಾರಕಕ್ಕೆ ಗಣ್ಯರಿಂದ, ಮಾಜಿ ಸೈನಿಕರಿಂದ, ವೀರ ನಾರಿಯರು ಅರಸೇನಾಪಡೆ ಮತ್ತು ಸ್ಕೌಟ್ಸ್ ಮತ್ತು ಗೈಡ್ಸ್‌ಗಳಿಂದ ಪುಷ್ಪಗುಚ್ಛ ಮತ್ತು ಹೂವಿನ ಮಾಲಾರ್ಪಣೆ ಸಲ್ಲಿಸಲಾಯಿತು. ಈ ಕಾರ್ಯಕ್ರಮದ ಮುಖ್ಯ ಅತಿಥಿಗಳಾಗಿ ಶ್ರೀ ರಾಜೇಶ್ ಎನ್. ಹೊಸಮನಿ, ಸದಸ್ಯ ಕಾರ್ಯದರ್ಶಿಗಳು, ಕಾನೂನು ಸೇವೆಗಳ ಪ್ರಾಧಿಕಾರ, ಬಳ್ಳಾರಿ ಹಾಗೂ ಹಿರಿಯ ಸಿವಿಲ್ ನ್ಯಾಯಾಧೀಶರು ಬಳ್ಳಾರಿ ಜಿಲ್ಲೆ ಇವರು ಆಗಮಿಸಿದ್ದರು ಮತ್ತು ಮಹಾನಗರ ಪಾಲಿಕೆಯ ಮೇಯರ್ ಶ್ರೀ ಗಾದೇಪ್ಪರವರು ಮತ್ತು ಡಿವೈಎಸ್ಪಿ ಹೋಮ್ ಗಾರ್ಡ್ ಕಮಾಂಡೆಂಟ್ ರವರು ಹಾಗೂ ಜಿಲ್ಲೆಯ ಹಿರಿಯ ನಿವೃತ್ತ ಸೈನಿಕರು ಇವರು ಭಾಗವಹಿಸಿದ್ದರು.

## ಬೆಂಗಳೂರು ಗ್ರಾಮಾಂತರ

* ಜಿಲ್ಲಾ ಸಂಸ್ಥೆಯಿಂದ ಜೂನ್ 25 ರಂದು 2026–27ನೇ ಸಾಲಿನ ವಾರ್ಷಿಕ ಕ್ರಿಯಾ ಯೋಜನೆ ಪುಸ್ತಕ ಬಿಡುಗಡೆ ಕಾರ್ಯಕ್ರಮ ಹಮ್ಮಿಕೊಳ್ಳಲಾಯಿತು. ಮಾನ್ಯ ಜಿಲ್ಲಾಧಿಕಾರಿಗಳು ಡಾ. ಅನುರಾಧ ಕೆ.ಎನ್., ಜಿಲ್ಲಾ ಸಂಸ್ಥೆ ಯಿಂದ ಇವರನ್ನು ಜಿಲ್ಲಾ ಮುಖ್ಯ ಆಯುಕ್ತರು ಶ್ರೀ ನಾಗರಾಜು ಹಾಗು ಇತರರು ಭೇಟಿ ಮಾಡಿದರು.





* ಬೆಂಗಳೂರು ಗ್ರಾಮಾಂತರ ಜಿಲ್ಲೆ ಸರ್ಕಾರಿ ಪ್ರಥಮ ದರ್ಜೆ ಕಾಲೇಜು ದೇವನಹಳ್ಳಿ ಇಲ್ಲಿ ರೋವರ್ ಮತ್ತು ರೇಂಜರ್ ಘಟಕದ ವತಿಯಿಂದ ಶ್ರೀಮತಿ ಅನ್ನಪೂರ್ಣರವರ ನೇತೃತ್ವದಲ್ಲಿ ಜುಲೈ 25 ರಂದು ಕಾರ್ಗಿಲ್ ವಿಜಯೋತ್ಸವ ಮತ್ತು ಪೋಷಕರ ದಿನಾಚರಣೆ ಅಂಗವಾಗಿ ರೋವರ್ ಮತ್ತು ರೇಂಜರ್‌ಗಳಿಗೆ ಕಾರ್ಗಿಲ್ ವಿಜಯ ದಿವಸ್ ಮಹತ್ವ ಕುರಿತು ರೇಂಜರ್ ಲೀಡರ್ ಇವರು ಮಾಹಿತಿ ನೀಡಿದರು. ಕೆಲವು ಸ್ಪರ್ಧೆಗಳನ್ನು ಸಂಘಟಿಸಿ ವಿಜೇತ ವಿದ್ಯಾರ್ಥಿಗಳಿಗೆ ಬಹುಮಾನ ವಿತರಣೆ ಮಾಡಲಾಯಿತು. ಈ ಸಂದರ್ಭದಲ್ಲಿ ರೋವರ್ ಮತ್ತು ರೇಂಜರ್‌ಗಳು ಭಾಗವಹಿಸಿದ್ದರು.

* ಸರ್ಕಾರಿ ಸ್ವತಂತ್ರ ಪದವಿಪೂರ್ವ ಕಾಲೇಜು ಹೊಸಕೋಟೆ ಇಲ್ಲಿ ನೂತನ ರೋವರ್ ಮತ್ತು ರೇಂಜರ್ ಘಟಕ ವತಿಯಿಂದ ಕಾರ್ಗಿಲ್ ವಿಜಯೋತ್ಸವ ಆಚರಣೆಯ ಅಂಗವಾಗಿ ಜುಲೈ 27 ರಂದು ಶ್ರೀಮತಿ ಸರಳರಘು, ರೇಂಜರ್ ಲೀಡರ್ ಇವರ ನಾಯಕತ್ವದಲ್ಲಿ ದಳ ಮಟ್ಟದಲ್ಲಿ ವೀರಯೋಧರಿಗೆ ನಮನ ಸಲ್ಲಿಸಲಾಯಿತು.

* ಬೆಂಗಳೂರು ಗ್ರಾಮಾಂತರ ಜಿಲ್ಲಾ ಸಂಸ್ಥೆ ದೊಡ್ಡಬಳ್ಳಾಪುರದ ನಳಂದ ಶಾಲೆ ವತಿಯಿಂದ ಕಾರ್ಗಿಲ್ ವಿಜಯೋತ್ಸವ ಆಚರಣೆಯ ಅಂಗವಾಗಿ ಜುಲೈ 27 ರಂದು ಸದರಿ ಶಾಲೆಯಲ್ಲಿ ಕಬ್ಸ್–ಬುಲ್‌ಬುಲ್ಸ್, ಸ್ಕೌಟ್ಸ್ ಮತ್ತು ಗೈಡ್ಸ್‌ಗಳು ವೀರಯೋಧರಿಗೆ ನಮನ ಸಲ್ಲಿಸಿದರು. ಈ ಸಂದರ್ಭದಲ್ಲಿ ಸುಮಾರು 2000 ಹೆಚ್ಚು ವಿದ್ಯಾರ್ಥಿಗಳು ಭಾಗವಹಿಸಿದ್ದರು. ಕಾರ್ಯಕ್ರಮದಲ್ಲಿ ಶಾಲಾ ಆಡಳಿತ ಮಂಡಳಿ ಸದಸ್ಯರು ಹಾಗೂ ಪ್ರಾಂಶುಪಾಲರು, ಶಿಕ್ಷಕರು ಕಬ್ ಮಾಸ್ಟರ್ ಫ್ಲಾಕ್ ಲೀಡರ್ ಸ್ಕೌಟ್ಸ್ ಮಾಸ್ಟರ್ ಗೈಡ್ಸ್ ಕ್ಯಾಪ್ಟನ್ ಸಹ ಶಿಕ್ಷಕರ ಉಪಸ್ಥಿತರಿದ್ದರು.




* ಬೆಂಗಳೂರು ಗ್ರಾಮಾಂತರ ಜಿಲ್ಲಾ ಸಂಸ್ಥೆ ಹಾಗೂ ಲೀಟ್ಸ್ ಏಂಜಲ್ಸ್ ಪ್ರಾಥಮಿಕ ಶಾಲಾ ದೊಡ್ಡಬಳ್ಳಾಪುರ ಇವರ ಸಹಯೋಗದಲ್ಲಿ ಆಗಸ್ಟ್ 01 ರಂದು ಸ್ಕೌಟ್ಸ್ ಸನ್ ರೈಸ್ ಡೇ ಮತ್ತು ವಿಶ್ವ ಸ್ಕಾರ್ಫ್ ಡೇ ದಿನಾಚರಣೆಯ ಕಾರ್ಯಕ್ರಮವನ್ನು ಶಾಲಾ ಆವರಣದಲ್ಲಿ ಸಂಘಟನೆ ಮಾಡಲಾಯಿತು. ಈ ಸಂದರ್ಭದಲ್ಲಿ ಪ್ರಾಂಶುಪಾಲರು ಮತ್ತು ಶಾಲಾ ಶಿಕ್ಷಕರು, ಸಿಬ್ಬಂದಿ, ಸ್ಕೌಟರ್ ಮತ್ತು ಗೈಡರ್ ಶಿಕ್ಷಕರು ಮತ್ತು ಜಿಲ್ಲಾ ಸಂಘಟಕರು ಭಾಗವಹಿಸಿದ್ದರು. ಈ ಸಂದರ್ಭದಲ್ಲಿ ಇವರು ಸ್ಕೌಟ್ ಸನ್ ರೈಸ್ ಡೇ ಮತ್ತು ವಿಶ್ವ ಸ್ಕಾರ್ಫ್ ಡೇ ದಿನಾಚರಣೆಯ ಹಿನ್ನೆಲೆ ಮತ್ತು ಮಹತ್ವ ಕುರಿತು ಉಪನ್ಯಾಸ ನೀಡಿದರು.

* ಬೆಂಗಳೂರು ಗ್ರಾಮಾಂತರ ಜಿಲ್ಲಾ ಸಂಸ್ಥೆ ನಳಂದ ಶಾಲಾ ವತಿಯಿಂದ ಆಗಸ್ಟ್ 01 ರಂದು ದಳದ ಮಟ್ಟದಲ್ಲಿ ಸ್ಕೌಟ್ ಸನ್ ರೈಸ್ ಡೇ ಮತ್ತು ವಿಶ್ವ



ಸ್ಕಾರ್ಫ್ ಡೇ ದಿನಾಚರಣೆಯ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿತ್ತು. ಈ ಸಂದರ್ಭದಲ್ಲಿ ಕಬ್ಸ್–ಬುಲ್‌ಬುಲ್, ಸ್ಕೌಟ್ಸ್–ಗೈಡ್ಸ್‌ಗಳು ಒಬ್ಬರಿಗೊಬ್ಬರು ಸ್ಕಾರ್ಫ್ ಹಾಕುವ ಮೂಲಕ ಪ್ರಪಂಚದ ಪ್ರಜೆಗಳಾದ ನಾವೆಲ್ಲರೂ ಒಂದೇ ಎಂಬ ಸಂವಿಧಾನ ವಿಶ್ವಭ್ರಾತೃತ್ವ ಸಾರಿದರು. ಸ್ಕೌಟ್ಸ್ ಪ್ರತಿಜ್ಞೆ ಮರು ಉಚ್ಚಾರಣೆ ಮಾಡಿದರು. ನಂತರ ಮಾತನಾಡಿದ ಪ್ರಾಂಶುಪಾಲರು ಸ್ಕೌಟ್ಸ್ ಸನ್ ರೈಸ್ ಡೇ ಮತ್ತು ಸ್ಕಾರ್ಫ್ ಡೇ ದಿನಾಚರಣೆಯ ಮಹತ್ವ ಬೆಳೆದು ಬಂದ ಹಿನ್ನೆಲೆಯನ್ನು ಕುರಿತು ಉಪನ್ಯಾಸ ನೀಡಿದರು.

* ಬೆಂಗಳೂರು ಗ್ರಾಮಾಂತರ ಜಿಲ್ಲಾ ಸಂಸ್ಥೆ ಹಾಗೂ ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ದೇವನಹಳ್ಳಿ ಇವರ ಸಹಯೋಗದಲ್ಲಿ ರೇಂಜರ್ ಲೀಡರ್ ಶ್ರೀಮತಿ ಅನ್ನಪೂರ್ಣ (ಹೆಚ್.ಡಬ್ಲ್ಯೂ.ಬಿ) ಅವರ ನೇತೃತ್ವದಲ್ಲಿ 'ಸ್ಕೌಟ್ಸ್ ಸನ್ ರೈಸ್ ಡೇ ಹಾಗೂ ವಿಶ್ವ ಸ್ಕಾಫ್ ಡೇ'ಯನ್ನು ಆಚರಿಸಲಾಯಿತು. ಕಾರ್ಯಕ್ರಮದ ಅಂಗವಾಗಿ ರೋವರ್ಸ್ ಮತ್ತು ರೇಂಜರ್ಸ್‌ಗಳಿಗೆ ಸ್ಕೌಟ್ ಸ್ಕಾರ್ಫ್ ತಯಾರಿಕೆ ಸ್ಪರ್ಧೆ ಆಯೋಜಿಸಲಾಯಿತು. ನೂತನವಾಗಿ ದಳಕ್ಕೆ ಸೇರ್ಪಡೆಯಾದ ರೋವರ್ಸ್ ಮತ್ತು ರೇಂಜರ್ಸ್‌ಗಳಿಗೆ ಸ್ಕೌಟ್ ಸ್ಕಾರ್ಫ್ ಧರಿಸುವ ಮೂಲಕ ಸ್ವಾಗತಿಸಲಾಯಿತು. ಕಾರ್ಯಕ್ರಮದಲ್ಲಿ ಕಾಲೇಜಿನ ಪ್ರಾಂಶುಪಾಲರಾದ ಶ್ರೀ ಮಂಜಯ್ಯ ಡಿ., ವಿವಿಧ ವಿಭಾಗಗಳ ಮುಖ್ಯಸ್ಥರು, ಪ್ರಾಧ್ಯಾಪಕರು, ಸಿಬ್ಬಂದಿ, ಜಿಲ್ಲಾ ಸಂಘಟಕರು ಹಾಗೂ ರೋವರ್ಸ್ ಮತ್ತು ರೇಂಜರ್ಸ್‌ಗಳು ಉಪಸ್ಥಿತರಿದ್ದರು. ಆರಂಭದಲ್ಲಿ ರೇಂಜರ್ ಲೀಡರ್ ಶ್ರೀಮತಿ ಅನ್ನಪೂರ್ಣ ಅವರು ಪ್ರಾಸ್ತಾವಿಕವಾಗಿ ಮಾತನಾಡಿದರು. ನಂತರ ರೋವರ್ ಕು॥ ಆಕಾಶ್ ಭಾಷಣ ಮಾಡಿದರು. ಜಿಲ್ಲಾ ಸಂಘಟಕರಾದ ಶ್ರೀ ಮನು ಅವರು ಸ್ಕೌಟಿಂಗ್ ಮತ್ತು ಗೈಡಿಂಗ್ ಚಳುವಳಿಯ ಉದ್ದೇಶ ಹಾಗೂ ಮಹತ್ವದ ಕುರಿತು ಮಾಹಿತಿ ನೀಡಿದರು. ಅಧ್ಯಕ್ಷತೆ ವಹಿಸಿದ್ದ ಪ್ರಾಂಶುಪಾಲರಾದ ಶ್ರೀ ಮಂಜಯ್ಯ ಡಿ., ಅವರು ವಿದ್ಯಾರ್ಥಿಗಳಿಗೆ ಸೇವಾ ಮನೋಭಾವ, ನಾಯಕತ್ವ, ಶಿಸ್ತು ಮತ್ತು ಸಮಾಜವಾಜಿ ಚಟುವಟಿಕೆಗಳನ್ನು ಬೆಳೆಸುವಲ್ಲಿ ಸ್ಕೌಟಿಂಗ್ ಮತ್ತು ಗೈಡಿಂಗ್ ಮಹತ್ವದ ಪಾತ್ರ ವಹಿಸುತ್ತದೆ ಎಂದು ತಿಳಿಸಿದರು.

* ಜಿಲ್ಲಾ ಸಂಸ್ಥೆ ವಾಣಿ ವಿದ್ಯಾ ಕೇಂದ್ರ ಪ್ರೌಢಶಾಲೆ ಕೋಟೆ ದೇವನಹಳ್ಳಿ ಶಾಲೆ ಸ್ಕೌಟ್ಸ್‌ಗಳು ಆಗಸ್ಟ್ 15 ರಂದು ನಡೆದ 80ನೇ ಸ್ವಾತಂತ್ರ್ಯ ದಿನಾಚರಣೆಯ ಪಥ ಸಂಚಲನದಲ್ಲಿ ಭಾಗವಹಿಸಿ ಸಮಾಧಾನಕರ ಬಹುಮಾನ ಪಡೆದಿದ್ದಾರೆ. ಜಿಲ್ಲಾಧಿಕಾರಿಗಳು ಪ್ರಮಾಣಪತ್ರ ಹಾಗೂ ಬಹುಮಾನ ವಿತರಣೆ ಮಾಡಿದರು.



## ಬೆಂಗಳೂರು ಉತ್ತರ

* ಜಿಲ್ಲಾ ಸಂಸ್ಥೆಯ ವತಿಯಿಂದ ಆಗಸ್ಟ್ 14 ರಂದು ಸ್ವಾತಂತ್ರ್ಯ ದಿನಾಚರಣೆಯ ಅಂಗವಾಗಿ ವಿಶೇಷ ಪ್ರತಿಮೆ ಸ್ವಚ್ಛತಾ ಕಾರ್ಯಕ್ರಮವನ್ನು ಬೆಂಗಳೂರಿನ ನಗರದ ವಿವಿಧೆಡೆಗಳಲ್ಲಿ ಆಯೋಜಿಸಲಾಯಿತು. ಕಾರ್ಯಕ್ರಮದ ಅಂಗವಾಗಿ ಚಾಲುಕ್ಯ ಸರ್ಕಲ್‌ನಲ್ಲಿರುವ ಬಸವಣ್ಣನವರ ಪ್ರತಿಮೆ, ಪಂಡಿತ್ ಜವಾಹರಲಾಲ್ ನೆಹರು, ರಾಷ್ಟ್ರಕವಿ ಕುವೆಂಪು, ಮಾಜಿ ಪ್ರಧಾನಮಂತ್ರಿ ರಾಜೀವ್ ಗಾಂಧಿ ಹಾಗೂ ರಾಷ್ಟ್ರಪಿತ ಮಹಾತ್ಮ ಗಾಂಧೀಜಿಯವರ ಪ್ರತಿಮೆಗಳನ್ನು ಸ್ಕೌಟ್ಸ್, ಗೈಡ್ಸ್, ರೋವರ್ ಮತ್ತು ರೇಂಜರ್‌ಗಳ ಸಹಭಾಗಿತ್ವದಲ್ಲಿ ಸ್ವಚ್ಛಗೊಳಿಸಲಾಯಿತು. ಪ್ರತಿಮೆಗಳಿಗೆ ಗೌರವ ಸಲ್ಲಿಸುವುದರ ಜೊತೆಗೆ, ಸುತ್ತಮುತ್ತಲಿನ ಪ್ರದೇಶವನ್ನು ಸ್ವಚ್ಛಗೊಳಿಸಿ ಸ್ವಚ್ಛತೆ, ದೇಶಭಕ್ತಿ ಮತ್ತು ಸಾಮಾಜಿಕ ಜವಾಬ್ದಾರಿಯ ಸಂದೇಶವನ್ನು ಸಾರಲಾಯಿತು.



* ಬೆಂಗಳೂರು ಉತ್ತರ ಜಿಲ್ಲಾ ಸಂಸ್ಥೆಯ ವತಿಯಿಂದ ಜಿಲ್ಲಾ ಮಟ್ಟದ ಪೆಟ್ರೋಲ್ ಲೀಡರ್ಸ್ ಶಿಬಿರವನ್ನು ಆಗಸ್ಟ್ 01 ಮತ್ತು 02 ರಂದು ಡೆಲ್ಲಿ ಪಬ್ಲಿಕ್ ಸ್ಕೂಲ್, ಬೆಂಗಳೂರು ಈಸ್ಟ್‌ನಲ್ಲಿ ಆಯೋಜಿಸಲಾಯಿತು. 30ಕ್ಕೂ ಹೆಚ್ಚು ಪ್ರತಿಷ್ಠಿತ ಶಿಕ್ಷಣ ಸಂಸ್ಥೆಗಳಿಂದ 511 ಸ್ಕೌಟ್ಸ್ ಮತ್ತು ಗೈಡ್ಸ್‌ಗಳು ಭಾಗವಹಿಸಿದರು. ಶಿಬಿರದಲ್ಲಿ ಪೆಟ್ರೋಲ್ ವ್ಯವಸ್ಥೆ, ಗಂಟುಗಳು ಮತ್ತು ಲ್ಯಾಶಿಂಗ್, ಅಂದಾಜು, ಪ್ರಥಮ ಚಿಕಿತ್ಸೆ, ನಕ್ಷೆ ಓದು ಮತ್ತು ದಿಕ್ಸೂಚಿ ಕುರಿತು ಪ್ರಾಯೋಗಿಕ ತರಬೇತಿ ನೀಡಲಾಯಿತು. ರಾಜ್ಯ ಮುಖ್ಯ ಆಯುಕ್ತರಾದ ಡಾ. ಪಿ.ಜಿ.ಆರ್. ಸಿಂಧಿಯಾ, ಜಿಲ್ಲಾ ಮುಖ್ಯ ಆಯುಕ್ತರಾದ ಡಾ. ಬಿ.ಆರ್. ಪ್ರಸನ್ನ ಕುಮಾರ್ ಹಾಗೂ ಜಿಲ್ಲಾ ಕಾರ್ಯದರ್ಶಿ ಶ್ರೀ ಬಿ.ಕೆ. ಶೇಷಾದ್ರಿ ಅವರು ಉಪಸ್ಥಿತರಿದ್ದು, ಶಿಬಿರಾರ್ಥಿಗಳಿಗೆ ಮಾರ್ಗದರ್ಶನ ಮತ್ತು ತಮ್ಮ ಅಮೂಲ್ಯ ಅನುಭವಗಳನ್ನು ಹಂಚಿಕೊಂಡರು. ಕೋರ್ಸ್ ಲೀಡರ್ ಶ್ರೀಮತಿ ಜ್ಯೋತಿ ರಂಗನಾಥ್ ಅವರು ಪ್ರಮಾಣಪತ್ರಗಳನ್ನು ವಿತರಿಸಿ ಶಿಬಿರವನ್ನು ಸಮಾರೋಪಗೊಳಿಸಿದರು.



* ಜಿಲ್ಲಾ ಸಂಸ್ಥೆಯ ವತಿಯಿಂದ ಪ್ರಕೃತಿಯ ಮಡಿಲಲ್ಲಿ ಕಬ್–ಬುಲ್‌ಬುಲ್‌ಗಳ ಕಲಿಕೆಯ ಪಯಣ, ಜಿಲ್ಲಾ ಮಟ್ಟದ ಕಬ್–ಬುಲ್‌ಬುಲ್ ಪ್ರಕೃತಿ ಶಿಬಿರವು ಜುಲೈ 4 ಮತ್ತು 5 ರಂದು ಜಲಮಂಗಲ, ಮಾಗಡಿ, ರಾಮನಗರ ಜಿಲ್ಲೆಯಲ್ಲಿ ಯಶಸ್ವಿಯಾಗಿ ಆಯೋಜಿಸಲಾಯಿತು. ಮಕ್ಕಳನ್ನು ಪ್ರಕೃತಿಯೊಂದಿಗೆ ಬೆಸೆಯುವುದು, ಪರಿಸರದ ಬಗ್ಗೆ ಕಾಳಜಿ ಮೂಡಿಸುವುದು ಹಾಗೂ ಅನುಭವದ ಮೂಲಕ ಕಲಿಕೆಗೆ ಅವಕಾಶ ಕಲ್ಪಿಸುವುದು ಶಿಬಿರದ ಪ್ರಮುಖ ಉದ್ದೇಶವಾಗಿತ್ತು. ವಿವಿಧ ಶಾಲೆಗಳ ಕಬ್–ಬುಲ್‌ಬುಲ್‌ಗಳು, ಶಿಕ್ಷಕರು ಹಾಗೂ ಸೇವಾ ರೋವರ್–ರೇಂಜರ್‌ಗಳು ಶಿಬಿರದಲ್ಲಿ ಭಾಗವಹಿಸಿದರು. ಶಿಬಿರದ ವಿಶೇಷ ಆಕರ್ಷಣೆಯಾಗಿ ಕುಟ್ಕಲ್ ತಿಮ್ಮಪ್ಪ ಬೆಟ್ಟಕ್ಕೆ ಪ್ರಕೃತಿ ವೀಕ್ಷಣೆ ಮತ್ತು ಅಧ್ಯಯನ ಪ್ರವಾಸವನ್ನು ಆಯೋಜಿಸಲಾಯಿತು.



## ಬೀದರ್

* ಸ್ಥಳೀಯ ಸಂಸ್ಥೆ ಹುಮ್ನಾಬಾದ್ ವತಿಯಿಂದ ಆಗಸ್ಟ್ 22 ರಂದು ಶ್ರೀ ಶಿವಯೋಗೀಶ್ವರ ವಿದ್ಯಾಲಯದಲ್ಲಿ ದೇಶಭಕ್ತಿ ಗೀತೆ ಗಾಯನ ಕಾರ್ಯಕ್ರಮವನ್ನು ಆಯೋಜಿಸಲಾಗಿತ್ತು. ಸ್ಪರ್ಧೆಗಳಲ್ಲಿ ವಿಜೇತರಾದ ಮಕ್ಕಳಿಗೆ ಬಹುಮಾನವನ್ನು ನೀಡಲಾಯಿತು. ಕಾರ್ಯಕ್ರಮದ ಅಧ್ಯಕ್ಷತೆಯನ್ನು ಶ್ರೀಮತಿ ಜಾನಕಿ ಸ್ವಾಮಿ, ಪ್ರಾಚಾರ್ಯರು ವಹಿಸಿದ್ದರು. ಮುಖ್ಯ ಅತಿಥಿಗಳಾಗಿ ಜಿಲ್ಲಾ ಕಾರ್ಯದರ್ಶಿಗಳಾದ ಶ್ರೀ ರಮೇಶ್ ತಿಬಶೆಟ್ಟಿ ಸಹ ಕಾರ್ಯದರ್ಶಿ, ಶ್ರೀ ರಾಚಯ್ಯನಾಸಿ ಭಾಗವಹಿಸಿದ್ದರು. ಸ್ಥಳೀಯ ಸಂಸ್ಥೆಗಳ ಕಾರ್ಯದರ್ಶಿಗಳಾದ ಶ್ರೀ ಬಾಬುರಾವ್ ನಿಂಬುರೆ ಎಲ್.ಟಿ. (ಸ್ಕೌ) ಕಾರ್ಯಕ್ರಮವನ್ನು ನಿರೂಪಿಸಿದರು. ಗೈಡ್ ಕ್ಯಾಪ್ಟನ್ ಶ್ರೀಮತಿ ಮಾಲಾಶ್ರೀ ರೆಡ್ಡಿ, ಕುಮಾರಿ ಸುಹಾನಿ, ಕುಮಾರಿ ಕರಿಷ್ಮಾ, ಸ್ಕೌಟ್ ಮಾಸ್ಟರ್ ಶ್ರೀ ತಿಪ್ಪಣ್ಣ, ಶ್ರೀ ಅಣ್ಣರಾಜ್ ಹಾಗೂ ಶ್ರೀ ರಾಜು ಇತರರು ಭಾಗವಹಿಸಿದ್ದರು.





## ದಕ್ಷಿಣ ಕನ್ನಡ

* ಜುಲೈ 15 ರಂದು ಜಿಲ್ಲಾ ಪಂಚಾಯತ್ ನೇತ್ರಾವತಿ ಸಭಾಂಗಣದಲ್ಲಿ ಸ್ಟೇಟ್ ಕೋ ಆರ್ಡಿನೇಟರ್ ಶ್ರೀಮತಿ ಸುಮಂಗಲ ಅವರ ನೇತೃತ್ವದಲ್ಲಿ ದಕ್ಷಿಣ ಕನ್ನಡ ಜಿಲ್ಲೆಯ ವಿವಿಧ ಕಾಲೇಜುಗಳ ರೋವರ್–ರೇಂಜರ್‌ಗಳಿಗೆ ಎಸ್.ಐ.ಆರ್ ಬಗ್ಗೆಗಿನ ಜಾಗೃತಿ/ ಅರಿವು ಮೂಡಿಸುವ ಒಂದು ದಿನದ ಮಾಹಿತಿ ಕಾರ್ಯಾಗಾರವನ್ನು ದಕ್ಷಿಣ ಕನ್ನಡ ಜಿಲ್ಲಾ ಸಾರ್ವಜನಿಕ ಶಿಕ್ಷಣ ಇಲಾಖೆ ಹಮ್ಮಿಕೊಂಡಿತ್ತು. ಈ ಕಾರ್ಯಕ್ರಮವನ್ನು ಜಿಲ್ಲಾಧಿಕಾರಿ ಶ್ರೀ ದರ್ಶನ್, ಐ.ಎ.ಎಸ್ ಉದ್ಘಾಟಿಸಿದರು. ಇವರೊಂದಿಗೆ ರೇಂಜರ್ ಲೀಡರ್ ಶ್ರೀಮತಿ ಅಪೇಕ್ಷ, ಶ್ರೀಮತಿ ವಂದನ ಹಾಗೂ ಜಿಲ್ಲಾ ಕಾರ್ಯದರ್ಶಿ ಶ್ರೀ ಪ್ರತಿಮ್ ಕುಮಾರ್ ಕೆ.ಎಸ್. ಭಾಗವಹಿಸಿದ್ದರು.




* ಜುಲೈ 26 ರಂದು ಜಿಲ್ಲಾ ಗೈಡ್ ತರಬೇತಿ ಆಯುಕ್ತರಾದ ಶ್ರೀಮತಿ ಜಯಶ್ರೀ ಅವರು ಮುಂದುವರಿದ ತರಬೇತಿ ಹೊಂದಿದ ಗೈಡ್ ಶಿಕ್ಷಕಿಯರಿಗೆ ಹೆಚ್.ಡಬ್ಲ್ಯೂ.ಬಿ ತರಬೇತಿಗಾಗಿ ಬರೆಯುವ ಅಭ್ಯಾಸ ವೃತ್ತ ಮಾಹಿತಿ ಕಾರ್ಯಾಗಾರವನ್ನು ನಡೆಸಿದರು.

* ದಕ್ಷಿಣ ಕನ್ನಡ ಜಿಲ್ಲಾ ಸಂಸ್ಥೆಯ ವತಿಯಿಂದ ಜುಲೈ 26 ರಂದು ಕಾರ್ಗಿಲ್ ವಿಜಯ್ ದಿವಸ್ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಯಿತು. ಜಿಲ್ಲಾ ಕಾರ್ಯದರ್ಶಿ ಶ್ರೀ ಪ್ರತಿಮ್ ಕುಮಾರ್ ಕೆ.ಎಸ್., ರಾಜ್ಯ ಪುರಸ್ಕಾರ ಸ್ಕೌಟ್ ವಿಭಾಗದ ನಾಯಕರು ಹಾಗೂ ಉಡುಪಿ ಜಿಲ್ಲೆಯ ಕಾರ್ಯದರ್ಶಿ ಶ್ರೀ ಆನಂದ ಅಡಿಗ, ಗೈಡ್ ವಿಭಾಗದ ನಾಯಕಿ ಶ್ರೀಮತಿ ಪ್ರಫುಲ್ಲ ಮತ್ತು ಶಿಬಿರದ ಸಹಾಯಕರು ಉಪಸ್ಥಿತರಿದ್ದರು. ಕಾರ್ಯಕ್ರಮದಲ್ಲಿ 260 ಸ್ಕೌಟ್ಸ್, 377 ಗೈಡ್ಸ್ ಒಟ್ಟು 637 ವಿದ್ಯಾರ್ಥಿಗಳು ಮತ್ತು 75 ಶಿಕ್ಷಕರು ಭಾಗವಹಿಸಿದರು. ಈ ಸಂದರ್ಭದಲ್ಲಿ ಕ್ಯಾಪ್ಟನ್ ಎಂ.ವಿ. ಪ್ರಾಂಜಲ್‌ರವರ ದಿನದ ಮಹತ್ವದ ಬಗ್ಗೆ ನೀಡಿದ ವೀಡಿಯೋ ತುಣುಕನ್ನು ಪ್ರಸ್ತುತ ಪಡಿಸಲಾಯಿತು. ರಾಜ್ಯ ಸಹಾಯಕ ಸಂಘಟನಾ ಆಯುಕ್ತರಾದ ಶ್ರೀ ಭರತ್ ರಾಜ್ .ಕೆ ಕಾರ್ಯಕ್ರಮವನ್ನು ನಿರೂಪಿಸಿದರು.

* ದಕ್ಷಿಣ ಕನ್ನಡ ಜಿಲ್ಲಾ ಸಂಸ್ಥೆಯ ವತಿಯಿಂದ ಜುಲೈ 29 ರಂದು ಜಿಲ್ಲಾ ತರಬೇತಿ ಕೇಂದ್ರ, ಪಿಲಿಕುಳ ಇಲ್ಲಿ ಉಪಾಧ್ಯಕ್ಷರಾದ ಶ್ರೀ ಶ್ರೀನಿವಾಸ್ ಕಿಣಿಯವರ ಅಧ್ಯಕ್ಷತೆಯಲ್ಲಿ 2024–25 ಹಾಗೂ 2025–26ನೇ ಸಾಲಿನ ತೃತೀಯ ಸೋಪಾನ್, ತೃತೀಯ ಚರಣ್, ಸುವರ್ಣಗಿರಿ ಹಾಗೂ ನಿಪುಣ್ ಪ್ರಶಸ್ತಿ ಪ್ರಧಾನ ಸಮಾರಂಭವು ನಡೆಯಿತು. ಇದರೊಂದಿಗೆ ರಾಜ್ಯ ಪುರಸ್ಕಾರ ಪ್ರಮಾಣ ಪತ್ರವನ್ನು ನೀಡಲಾಯಿತು. ವೇದಿಕೆಯಲ್ಲಿ ಜಿಲ್ಲಾಧಿಕಾರಿ ಕಛೇರಿಯಿಂದ ಶ್ರೀಮತಿ ಮೀನಾಕ್ಷಿ ಆರ್ಯ, ಆಯುಕ್ತರು ಮಂಗಳೂರು ವಿಭಾಗ ಇವರು ಪ್ರಶಸ್ತಿ ಪ್ರಧಾನ ಮಾಡಿದರು. ವೇದಿಕೆಯಲ್ಲಿ ಜಿಲ್ಲಾ ಉಪನಿರ್ದೇಶಕರು ಸಾರ್ವಜನಿಕ ಶಿಕ್ಷಣ ಇಲಾಖೆಯ ಶ್ರೀ ಶಶಿಧರ್, ಮೈ ಭಾರತ್‌ನ ಸಹಾಯಕ ಆಯುಕ್ತರಾದ ಶ್ರೀ ಉಲ್ಲಾಸ್, ವಾಮಂಜೂರು ಬಂಟರ ಸಂಘದ ಅಧ್ಯಕ್ಷರಾದ ಶ್ರೀ ಸಂತೋಷ್, ಸುರತ್ಕಲ್ ಸ್ಥಳೀಯ ಸಂಸ್ಥೆಯ ಅಧ್ಯಕ್ಷರಾದ ಶ್ರೀ ದಯಾಕರ್, ಜಿಲ್ಲಾ ಸಂಸ್ಥೆ ಉಪಾಧ್ಯಕ್ಷರಾದ ಶ್ರೀ ಶ್ರೀನಿವಾಸ್ ಪೂಜಾರಿ, ಹಾಗೂ ಇತರರು ಉಪಸ್ಥಿತರಿದ್ದರು. ಜಿಲ್ಲಾ ಉಪಾಧ್ಯಕ್ಷರಾದ ಶ್ರೀ ಶ್ರೀನಿವಾಸ್ ಕಿಣಿ, ಕಾರ್ಯಕ್ರಮದ



ಅಧ್ಯಕ್ಷತೆಯನ್ನು ವಹಿಸಿದ್ದರು. ಜಿಲ್ಲಾ ಸ್ಕೌಟ್ ಆಯುಕ್ತರಾದ ಶ್ರೀ ಬಿ.ಎಂ. ತುಂಬೆ ಕಾರ್ಯಕ್ರಮದ ಪ್ರಾಸ್ತಾವಿಕ ಮಾತುಗಳನ್ನಾಡಿದರ.ಜಿಲ್ಲಾ ಗೈಡ್ ಆಯುಕ್ತರಾದ ಶ್ರೀಮತಿ ವಿಮಲಾ ರಂಗಯ್ಯ ಸ್ವಾಗತಿಸಿದರು, ಜಿಲ್ಲಾ ಕಾರ್ಯದರ್ಶಿ ಶ್ರೀ ಪ್ರತಿಮ್ ಕುಮಾರ್ ಕೆ.ಎಸ್. ಧನ್ಯವಾದ ನೀಡಿದರು. ಗೈಡರ್ ಶ್ರೀಮತಿ ನಯನ ಕಾರ್ಯಕ್ರಮ ನಿರೂಪಿಸಿದರು.

* ದಕ್ಷಿಣ ಕನ್ನಡ ಜಿಲ್ಲಾ ಸಂಸ್ಥೆಯ ವತಿಯಿಂದ ಆಗಸ್ಟ್ 02 ರಿಂದ 03ರ ವರೆಗೆ ಜಿಲ್ಲಾ ತರಬೇತಿ ಕೇಂದ್ರ, ಪಿಲಿಕುಳದಲ್ಲಿ 2026–27ನೇ ಸಾಲಿನ ಜಿಲ್ಲಾ ಮಟ್ಟದ ತೃತೀಯ ಸೋಪಾನ ಸ್ಕೌಟ್ಸ್ ಮತ್ತು ಗೈಡ್ಸ್ ಪರೀಕ್ಷಾ ಶಿಬಿರ ಯಶಸ್ವಿಯಾಗಿ ನಡೆಯಿತು. ಸ್ಕೌಟ್ಸ್ ವಿಭಾಗದ ನಾಯಕರಾಗಿ ಶ್ರೀ ಶಾಂತರಾಮ ಪ್ರಭು, ಗೈಡ್ ವಿಭಾಗದ ನಾಯಕಿಯಾಗಿ ಶ್ರೀಮತಿ ಸುಫಲ ಕಾರ್ಯನಿರ್ವಹಿಸಿದರು. ಮೊದಲ ಹಂತದ ಪರೀಕ್ಷಾ ಶಿಬಿರದಲ್ಲಿ 157 ಸ್ಕೌಟ್ಸ್ ಮತ್ತು 142 ಗೈಡ್ಸ್ ಒಟ್ಟು 299 ವಿದ್ಯಾರ್ಥಿಗಳು ಹಾಗೂ 36 ದಳ ನಾಯಕರುಗಳು ಭಾಗವಹಿಸಿದರು. ಜಿಲ್ಲಾ ಮುಖ್ಯ ಆಯುಕ್ತರಾದ ಡಾ.ಎಂ ಮೋಹನ್ ಆಳ್ವ ಶಿಬಿರಕ್ಕೆ ಭೇಟಿ ನೀಡಿದರು. ರಾಜ್ಯ ಸಹಾಯಕ ಸಂಘಟನಾ ಆಯುಕ್ತರಾದ ಶ್ರೀ ಭರತ್‌ರಾಜ್ .ಕೆ ಪರೀಕ್ಷಾ ಶಿಬಿರವನ್ನು ಸಂಘಟಿಸಿದರು.

* ದಕ್ಷಿಣ ಕನ್ನಡ ಜಿಲ್ಲಾ ಸಂಸ್ಥೆ ಹಾಗೂ ರೋಟರಿ ಆಂಗ್ಲ ಮಾಧ್ಯಮ ಶಾಲೆ, ಮೂಡಬಿದಿರೆ ಇವರ ಸಹಭಾಗಿತ್ವದಲ್ಲಿ ಆಗಸ್ಟ್ 07 ರಂದು ರೋಟರಿ ಆಂಗ್ಲ ಮಾಧ್ಯಮ ಶಾಲೆ ಮೂಡಬಿದಿರೆ ಇಲ್ಲಿ 2026–27ನೇ ಸಾಲಿನ ಜಿಲ್ಲಾ ಮಟ್ಟದ ಮೊದಲ ಹಂತದ ತೃತೀಯ ಚರಣ ಕಬ್ ಮತ್ತು ಸುವರ್ಣ ಗರಿ ಬುಲ್‌ಬುಲ್ ಹಂತದ ಪರೀಕ್ಷಾ ಶಿಬಿರವು ನಡೆಯಿತು. ಶಿಬಿರವನ್ನು ರೋ. ಅವಿಲ್ ಡಿಸೋಜ, ಸ್ಕೂಲ್ ಗವರ್ನಿಂಗ್ ಕೌನ್ಸಿಲ್ ಮೆಂಬರ್ ಇವರು ದೀಪ ಬೆಳಗಿಸಿ ಉದ್ಘಾಟಿಸಿದರು. ಅಧ್ಯಕ್ಷತೆಯನ್ನು ರೋಟರಿ ಆಂಗ್ಲ ಮಾಧ್ಯಮ ಶಾಲೆ ಮೂಡಬಿದಿರೆ ಇಲ್ಲಿನ ಸಂಚಾಲಕರಾದ ಶ್ರೀ ಪ್ರವೀಣ್ ಚಂದ್ರ ಜೈನ್ ವಹಿಸಿದ್ದರು. ಮುಖ್ಯ ಅತಿಥಿಯಾಗಿ, ರೋಟರಿ ಆಂಗ್ಲ ಮಾಧ್ಯಮ ಶಾಲೆಯ ಮುಖ್ಯ ಶಿಕ್ಷಕರು ಹಾಗೂ ಜಿಲ್ಲಾ ಸಹಾಯಕ ಆಯುಕ್ತೆ ಶ್ರೀಮತಿ ತಿಲಕ ಜೈನ್ ಇವರು ಭಾಗವಹಿಸಿದರು. ಪರೀಕ್ಷಾ ಶಿಬಿರದ ಸಂದರ್ಭದಲ್ಲಿ ರಾಜ್ಯ ಮುಖ್ಯ ಆಯುಕ್ತರಾದ ಡಾ. ಪಿ.ಜಿ.ಆರ್. ಸಿಂಧ್ಯಾ, ರಾಜ್ಯ ಸಂಘಟನಾ ಆಯುಕ್ತರಾದ ಶ್ರೀ ಎಂ. ಪ್ರಭಾಕರ್ ಭಟ್, ರೋಟರಿ ಎಜುಕೇಶನ್ ಸೊಸೈಟಿ ಮೂಡಬಿದಿರೆ ಇಲ್ಲಿನ ಅಧ್ಯಕ್ಷರಾದ ಶ್ರೀ ನಾರಾಯಣ ಪಿ.ಎನ್. ಇವರು ಭೇಟಿ ನೀಡಿ ಶುಭ ಹಾರೈಸಿದರು. ಕಬ್ ವಿಭಾಗದ ನಾಯಕರಾಗಿ ಶ್ರೀಮತಿ ಭಾರತಿ ನಾಯಕ್ (ಎಲ್.ಟಿ), ಬುಲ್‌ಬುಲ್ ವಿಭಾಗದ ನಾಯಕಿಯಾಗಿ ಶ್ರೀಮತಿ ಸಂಧ್ಯಾ (ಎಎಲ್‌ಟಿ) ಕಾರ್ಯನಿರ್ವಹಿಸಿದರು. ಒಟ್ಟು 89 ಕಬ್ಸ್ ಮತ್ತು 88 ಬುಲ್‌ಬುಲ್ ಒಟ್ಟು 177 ವಿದ್ಯಾರ್ಥಿಗಳು ಪರೀಕ್ಷಾ ಶಿಬಿರದಲ್ಲಿ ಭಾಗವಹಿಸಿದರು. ಶ್ರೀಮತಿ ವಿನಯ ಹೆಗ್ಡೆ ಕಾರ್ಯಕ್ರಮವನ್ನು ನಿರೂಪಿಸಿ, ಶ್ರೀ ಮೋಹನ್ ಧನ್ಯವಾದವಿತ್ತರು.



* ಆಗಸ್ಟ್ 09 ರಂದು ರಾಜ್ಯ ಮುಖ್ಯ ಆಯುಕ್ತರಾದ ಡಾ. ಪಿ.ಜಿ.ಆರ್. ಸಿಂಧ್ಯಾರವರು ಬಂಟ್ವಾಳ ಬಿ.ಸಿ. ರೋಡಿನ ರಾಣಿ ಅಬ್ಬಕ್ಕ ಅಧ್ಯಯನಕ್ಕೆ ಭೇಟಿ ನೀಡಿದ ಸಂದರ್ಭದಲ್ಲಿ ಬಂಟ್ವಾಳ ತಾಲೂಕಿನ ಸ್ಥಳೀಯ ಸಂಸ್ಥೆಯ ಪದಾಧಿಕಾರಿಗಳನ್ನು ಭೇಟಿಯಾಗಿ ಕಾರ್ಯ ವಿಸ್ತಾರ ಹಾಗೂ ಚಟುವಟಿಕೆಗಳ ಬಗ್ಗೆ ಮಾಹಿತಿಯನ್ನು ಪಡೆದುಕೊಂಡರು. ಈ ಸಂದರ್ಭದಲ್ಲಿ ರಾಜ್ಯ ಸಂಘಟನಾ ಆಯುಕ್ತರಾದ ಶ್ರೀ ಎಂ. ಪ್ರಭಾಕರ್ ಭಟ್, ಜಿಲ್ಲಾ ಸ್ಕೌಟ್ ಆಯುಕ್ತರಾದ ಶ್ರೀ ಬಿ.ಎಂ. ತುಂಬೆ ಉಪಸ್ಥಿತರಿದ್ದರು. ಬಂಟ್ವಾಳ ತಾಲೂಕು ಸಂಸ್ಥೆಗಳ ವತಿಯಿಂದ ಬಿ.ಎಂ ತುಂಬೆ ಯವರು ಡಾ. ಪಿ.ಜಿ.ಆರ್ ಸಿಂಧ್ಯಾ ರವರಿಗೆ ಸನ್ಮಾನಿಸಿದರು.



* ದಕ್ಷಿಣ ಕನ್ನಡ ಜಿಲ್ಲಾ ಸಂಸ್ಥೆ, ಬೆಳ್ತಂಗಡಿ ಸ್ಥಳೀಯ ಸಂಸ್ಥೆ ಹಾಗೂ ವಾಣಿ ಶಿಕ್ಷಣ ಸಂಸ್ಥೆ ಬೆಳ್ತಂಗಡಿ ಇವರ ಸಹಬಾಗಿತ್ವದಲ್ಲಿ ಆಗಸ್ಟ್ 11 ರಂದು ವಾಣಿ ಆಂಗ್ಲ ಮಾಧ್ಯಮ ಶಾಲೆ ಬೆಳ್ತಂಗಡಿ ಇಲ್ಲಿ 2026–27 ನೇ ಸಾಲಿನ ಜಿಲ್ಲಾ ಮಟ್ಟದ ಎರಡನೇ ಹಂತದ ತೃತೀಯ ಚರಣ್ ಕಬ್ ಮತ್ತು ಸುವರ್ಣ ಗರಿ ಬುಲ್‌ಬುಲ್ ಪರೀಕ್ಷಾ ಶಿಬಿರ ಯಶಸ್ವಿಯಾಗಿ ನಡೆಯಿತು. ಅಧ್ಯಕ್ಷತೆಯನ್ನು ವಾಣಿ ಶಿಕ್ಷಣ ಸಂಸ್ಥೆಯ ಅಧ್ಯಕ್ಷರಾದ ಶ್ರೀ ಪಿ.ಕುಶಾಲಪ್ಪ ಗೌಡ ವಹಿಸಿದ್ದರು. ಶಿಬಿರವನ್ನು ವಾಣಿ ಶಿಕ್ಷಣ ಸಂಸ್ಥೆಯ ನಿರ್ದೇಶಕರಾದ ಶ್ರೀ ಕೃಷ್ಣಪ್ಪ ಗೌಡ ಇವರು ದೀಪ ಬೆಳಗಿಸಿ ಉದ್ಘಾಟಿಸಿದರು. ಮುಖ್ಯ ಅತಿಥಿಗಳಾಗಿ ವಾಣಿ ಪದವಿ ಪೂರ್ವ ಕಾಲೇಜಿನ ಪ್ರಾಂಶುಪಾಲರಾದ ಶ್ರೀ ವಿಷ್ಣು ಪ್ರಕಾಶ್, ವಾಣಿ ಶಿಕ್ಷಣ ಸಂಸ್ಥೆಯ ಆಡಳಿತಾಧಿಕಾರಿ ಶ್ರೀ ಪ್ರಸಾದ್ ಕುಮಾರ್, ವಾಣಿ ಆಂಗ್ಲ ಮಾಧ್ಯಮ ಶಾಲೆಯ ಮುಖ್ಯ ಶಿಕ್ಷಕರಾದ ಶ್ರೀ ಲಕ್ಷ್ಮಿನಾರಾಯಣ ಕೆ, ವಾಣಿ ಆಂಗ್ಲ ಮಾಧ್ಯಮ ಪ್ರೌಢಶಾಲೆಯ ಮುಖ್ಯ ಶಿಕ್ಷಕರಾದ ಶ್ರೀಮತಿ ಸುಹಾಸಿನಿ ಉಪಸ್ಥಿತರಿದ್ದರು. ಈ ಸಂದರ್ಭದಲ್ಲಿ ಬೆಳ್ತಂಗಡಿ ತಾಲೂಕಿನ ದೈಹಿಕ ಶಿಕ್ಷಣ ಪರಿವೀಕ್ಷಣಾಧಿಕಾರಿ ಶ್ರೀ ಪ್ರಭಾಕರ್ ಇವರು ಭೇಟಿ ನೀಡಿ ಶಿಬಿರಕ್ಕೆ ಶುಭ ಹಾರೈಸಿದರು. ಕಬ್ ವಿಭಾಗದ ನಾಯಕರಾಗಿ ಶ್ರೀಮತಿ ಭಾರತಿ ನಾಯಕ್ (ಎಲ್.ಟಿ), ಒಟ್ಟು 70 ಕಬ್ಸ್ ಮತ್ತು 109 ಬುಲ್‌ಬುಲ್ಸ್ ಒಟ್ಟು 179 ವಿದ್ಯಾರ್ಥಿಗಳು ಪರೀಕ್ಷಾ ಶಿಬಿರದಲ್ಲಿ ಭಾಗವಹಿಸಿದ್ದರು.





## ದಾವಣಗೆರೆ

* ಆಗಸ್ಟ್ 14 ರಂದು ಧ.ರಾ.ಮ ಸ್ಕೌಟ್ ಭವನದಲ್ಲಿ ಜಿಲ್ಲಾ ಮಟ್ಟದ ರೋವರ್ ಸ್ಕೌಟ್ ಲೀಡರ್ ಮತ್ತು ರೇಂಜರ್ ಲೀಡರ್ಸ್‌ಗಳ ಸಭೆಯನ್ನು ಆಯೋಜಿಸಲಾಗಿತ್ತು. ಜಿಲ್ಲೆಯ ವಿವಿಧ ಕಾಲೇಜುಗಳ ರೋವರ್ ಸ್ಕೌಟ್ ಲೀಡರ್ ರೇಂಜರ್ ಲೀಡರ್ಸ್‌ಗಳು ಸಭೆಯಲ್ಲಿ ಭಾಗವಹಿಸಿದ್ದರು. ಶ್ರೀ ಮುರುಘ ರಾಜೇಂದ್ರ ಜೆ. ಚಿಗಟೇರಿ ಜಿಲ್ಲಾ ಮುಖ್ಯ ಆಯುಕ್ತರು ಸಭೆಯ ಅಧ್ಯಕ್ಷತೆ ವಹಿಸಿದ್ದರು.



* ಆಗಸ್ಟ್ 15 ರಂದು 80ನೇ ಸ್ವಾತಂತ್ರ್ಯ ದಿನಾಚರಣೆಯನ್ನು ಧ.ರಾ.ಮ ಸ್ಕೌಟ್ ಭವನದಲ್ಲಿ ಆಚರಿಸಲಾಯಿತು. ಜಿಲ್ಲಾ ಸಂಸ್ಥೆಯ ಪದಾಧಿಕಾರಿಗಳು ಭಾಗವಹಿಸಿದ್ದರು. ಶ್ರೀ ಮುರುಘ ರಾಜೇಂದ್ರ ಜೆ. ಚಿಗಟೇರಿ, ಜಿಲ್ಲಾ ಮುಖ್ಯ ಆಯುಕ್ತರು ಧ್ವಜಾರೋಹಣ ನೆರವೇರಿಸಿದರು.



* ಆಗಸ್ಟ್ 15 ರಂದು ಜಿಲ್ಲಾ ಕ್ರೀಡಾಂಗಣದಲ್ಲಿ ನಡೆದ 80ನೇ ಸ್ವಾತಂತ್ರ್ಯೋತ್ಸವ ದಿನಾಚರಣೆಯ ಪಥ ಸಂಚಲನದಲ್ಲಿ ಜಿಲ್ಲಾ ಸಂಸ್ಥೆ ವತಿಯಿಂದ ಕೊಂಡಜ್ಜಿ ಬಸಪ್ಪ ಸ್ಥಳೀಯ ಸಂಸ್ಥೆಯ ಸೆಂಟ್‌ಪಾಲ್ಸ್ ಕಾನ್ವೆಂಟ್ ಶಾಲೆಯ ಗೈಡ್ಸ್‌ಗಳು ಭಾಗವಹಿಸಿದ್ದರು. ಪಿ.ಎಸ್.ಎಸ್.ಇ.ಎಂ.ಆರ್. ಶಾಲೆಯ ಸ್ಕೌಟ್ ವಾದ್ಯ ವೃಂದವು ಅತ್ಯುತ್ತಮ ಪ್ರದರ್ಶನ ನೀಡಿ ಮೆಚ್ಚುಗೆ ಪಡೆದುಕೊಂಡಿತು.



* ಆಗಸ್ಟ್ 15 ರಂದು ಶ್ರೀ ಸಿದ್ದಗಂಗಾ ಸ್ಥಳೀಯ ಸಂಸ್ಥೆ ವತಿಯಿಂದ 80ನೇ ಸ್ವಾತಂತ್ರ್ಯ ದಿನಾಚರಣೆ ಪ್ರಯುಕ್ತ ಕಬ್ ಮತ್ತು ಬುಲ್‌ಬುಲ್ ಮಕ್ಕಳಿಂದ ತಿರಂಗ ಬ್ಯಾಡ್ಜ್ ತಯಾರಿಕೆ ಚಟುವಟಿಕೆಯನ್ನು ಆಯೋಜಿಸಲಾಗಿತ್ತು.

* ಜುಲೈ 26 ರಂದು ಹೊನ್ನಾಳಿ ತಾಲ್ಲೂಕಿನ ಸರ್ಕಾರಿ ಕಿರಿಯ ಪ್ರಾಥಮಿಕ ಶಾಲೆ, ಚನ್ನೇನಹಳ್ಳಿಯಲ್ಲಿ ಸ್ಕೌಟ್ಸ್ ಮತ್ತು ಗೈಡ್ಸ್‌ಗಳು ಕಾರ್ಗಿಲ್ ವಿಜಯ್ ದಿವಸ್‌ಅನ್ನು ಆಚರಿಸಿದರು. ಶಾಲೆಯ ಶಿಕ್ಷಕರು, ಪೋಷಕರು ಕಾರ್ಯಕ್ರಮದಲ್ಲಿ ಉಪಸ್ಥಿತರಿದ್ದರು.



* ಜುಲೈ 27 ರಂದು ದಾವಣಗೆರೆ ದಕ್ಷಿಣ ವಲಯದ ಜೈನ್ ವಿದ್ಯಾಲಯ ಶಾಲೆಯಲ್ಲಿ ಜೈನ್, ಟಮಟೋಲದ ಬನ್ನಿಸ್ ವಿದ್ಯಾರ್ಥಿಗಳಿಂದ ಕಾರ್ಗಿಲ್ ವಿಜಯ ದಿವಸ್ ಅನ್ನು “ಭಾರತ್ ಮಾತಾ ಕಿ ಜೈ” ಎಂದು ಜೈಕಾರವನ್ನು ಹಾಕುವ ಮೂಲಕ ಆಚರಿಸಿದರು. ಈ ಸಂದರ್ಭದಲ್ಲಿ ಶ್ರೀಮತಿ ಆರ್. ಸುಖವಾಣಿ, ಜಿಲ್ಲಾ ಸಹ ಕಾರ್ಯದರ್ಶಿಗಳು, ಶ್ರೀಮತಿ ಅಶ್ವಿನಿ ಜೆ., ಎಸ್.ಜಿ.ವಿ, ಶ್ರೀ ಆದಿತ್ಯ, ಯುವ ಸಮಿತಿ ಸದಸ್ಯರು ಭಾಗವಹಿಸಿದ್ದರು. ಶ್ರೀಮತಿ ಮಂಜುಳ ಮುಖ್ಯೋಪಾಧ್ಯಾಯರು ಮತ್ತು ಬನ್ನಿ ಶಿಕ್ಷಕಿಯರ ಸಹಕಾರದಿಂದ ಕಾರ್ಯಕ್ರಮವು ಯಶಸ್ವಿಯಾಯಿತು.




* ಜುಲೈ 27 ರಂದು ದಾವಣಗೆರೆ ವಿಶ್ವವಿದ್ಯಾಲಯದ ನೂತನ ಕುಲಪತಿಗಳಾದ ಡಾ|| ಬಿ.ಇ. ರಂಗಸ್ವಾಮಿರವರಿಗೆ ದಾವಣಗೆರೆಜಿಲ್ಲಾ ಸಂಸ್ಥೆ ಮತ್ತು ರೋಟರಿ ಕ್ಲಬ್ ಸಹಯೋಗದೊಂದಿಗೆ ಸನ್ಮಾನ ಕಾರ್ಯಕ್ರಮವನ್ನು ಆಯೋಜಿಸಲಾಗಿತ್ತು. ಈ ಸಂದರ್ಭದಲ್ಲಿ ಮಾತನಾಡಿದ ಕುಲಪತಿಗಳು “ನಾನು ಸಹ ರಾಷ್ಟ್ರಪತಿ ಸ್ಕೌಟ್ ಪುರಸ್ಕಾರವನ್ನು ಪಡೆದಿರುವೆ” ಎಂದು ಹೆಮ್ಮೆಯಿಂದ ಹೇಳಿದರು. ಈ ಸಂದರ್ಭದಲ್ಲಿ ಜಿಲ್ಲಾ ಮುಖ್ಯ ಆಯುಕ್ತರಾದ ಶ್ರೀ ಮುರುಘ ರಾಜೇಂದ್ರ ಜೆ. ಚಿಗಟೇರಿ, ರೋಟರಿಯನ್ ಶ್ರೀ ಸೋಮಶೇಖರ್, ಇನ್ನರ್‌ವೀಲ್ ಅಧ್ಯಕ್ಷೆ ಶ್ರೀಮತಿ ಸುಮಾ, ಶ್ರೀ ಎ.ಪಿ. ಷಡಾಕ್ಷರಪ್ಪ, ಜಿಲ್ಲಾ ಸ್ಕೌಟ್ ಆಯುಕ್ತರು ರೇಂಜರ್ ಲೀಡರ್ಸ್‌ಗಳು ಉಪಸ್ಥಿತರಿದ್ದರು.



* ಆಗಸ್ಟ್ 01 ರಂದು ಕೊಂಡಜ್ಜಿ ಬಸಪ್ಪ ಸ್ಥಳೀಯ ಸಂಸ್ಥೆ ಮತ್ತು ಜಿಲ್ಲಾ ಸಂಸ್ಥೆಯ ಸಹಯೋಗದೊಂದಿಗೆ ಅಂತರಾಷ್ಟ್ರೀಯ ಸ್ಕಾರ್ಫ್ ದಿನಾಚರಣೆಯನ್ನು ಸೆಂಟ್ ಪಾಲ್ಸ್‌ಕಾನ್ವೆಂಟ್ ಶಾಲೆಯಲ್ಲಿ ಆಚರಿಸಲಾಯಿತು. ಈ ಸಂದರ್ಭದಲ್ಲಿ ಸಿಸ್ಟರ್ ವೆನಿಸಾ ಮುಖ್ಯೋಪಾಧ್ಯಾಯರು ಹಾಗೂ ಜಿಲ್ಲಾ ಸಂಸ್ಥೆ ವತಿಯಿಂದ ಶ್ರೀಮತಿ ಅಶ್ವಿನಿ ಜೆ., ಎಸ್.ಜಿ.ವಿ. ಗೈಡ್ ಕ್ಯಾಪ್ಟನ್ ಶ್ರೀಮತಿ ರಜಿನಿ ಹೆಚ್.ಎಂ., ಶ್ರೀಮತಿ ಸೂಸಿಮೇರಿ, ಶ್ರೀ ರವೀಂದ್ರಸ್ವಾಮಿ ಟಿ.ಎಂ. ಸ್ಥಳೀಯ ಸಂಸ್ಥೆ ಕಾರ್ಯದರ್ಶಿಗಳು ಉಪಸ್ಥಿತರಿದ್ದರು.

* ಜುಲೈ 18 ರಂದು ಶ್ರೀ ಜಯಚಾಮರಾಜೇಂದ್ರ ಒಡೆಯರ್‌ರವರ 108ನೇ ಜನ್ಮ ದಿನಾಚರಣೆಯನ್ನು ಜಿಲ್ಲಾ ಸಂಸ್ಥೆಯಲ್ಲಿ ಆಚರಿಸಲಾಯಿತು. ಶ್ರೀ ಮುರುಘ ರಾಜೇಂದ್ರ ಜೆ. ಚಿಗಟೇರಿ ಜಿಲ್ಲಾ ಮುಖ್ಯ ಆಯುಕ್ತರು, ಶ್ರೀ ಎ.ಪಿ. ಷಡಾಕ್ಷರಪ್ಪ, ಜಿಲ್ಲಾ ಸ್ಕೌಟ್ ಆಯುಕ್ತರು, ಶ್ರೀಮತಿ ರತ್ನ ಎಂ., ಜಿಲ್ಲಾ ಕಾರ್ಯದರ್ಶಿಗಳು, ಶ್ರೀಮತಿ ಸುಖವಾಣಿ, ಜಿಲ್ಲಾ ಸಹ ಕಾರ್ಯದರ್ಶಿಗಳು, ಶ್ರೀಮತಿ ಅಶ್ವಿನಿ ಜೆ., ಎಸ್.ಜಿ.ವಿ., ಶ್ರೀ ದರ್ಶನ್ ಯುವ ಸಮಿತಿ ಸದಸ್ಯರು ಉಪಸ್ಥಿತರಿದ್ದರು.

* ಜುಲೈ 25 ರಂದು ಕೊಂಡಜ್ಜಿ ಬಸಪ್ಪ ಸ್ಥಳೀಯ ಸಂಸ್ಥೆಯ ಬಾಪೂಜಿ ಹಿರಿಯ ಪ್ರಾಥಮಿಕ ಶಾಲೆ ವತಿಯಿಂದ ಹೈಕಿಂಗ್ ಪ್ರಾವಿಣ್ಯತಾ ಪದಕ ತರಬೇತಿಗಾಗಿ ನಗರದ ಬಾತಿ ಬೆಟ್ಟಕ್ಕೆ ಭೇಟಿ ನೀಡಲಾಗಿತ್ತು. ಈ ಸಂದರ್ಭದಲ್ಲಿ ಶಾಲಾ ಪ್ರಾಂಶುಪಾಲರಾದ ಶ್ರೀಮತಿ ಜೆ.ಎಸ್. ವನಿತಾ, ಶ್ರೀ ಉಳ್ಳಾಗಡ್ಡಿ ಹನುಮಂತಪ್ಪ ಸ್ಕೌಟ್ ಮಾಸ್ಟರ್, ಶ್ರೀ ಕೊಟ್ರಯ್ಯ, ಶ್ರೀಮತಿ ಮಂಜುಳಾ ಶಿಕ್ಷಕರು ಭಾಗವಹಿಸಿ ಮಕ್ಕಳಿಗೆ ಮಾರ್ಗದರ್ಶನ ಮಾಡಿದರು.

* ಜುಲೈ 25 ರಂದು ಜೈನ್ ವಿದ್ಯಾಲಯ ಶಾಲೆಯ ಮಕ್ಕಳು ಆದರ್ಶ ಆಸ್ಪತ್ರೆಗೆ ಭೇಟಿ ನೀಡಿ ಡಾಕ್ಟರ್‌ರವರೊಂದಿಗೆ ಆರೋಗ್ಯಕ್ಕೆ ಸಂಬಂಧಿಸಿದ ವಿವಿಧ ವಿಷಯಗಳನ್ನು ಚರ್ಚಿಸಿ ಮಾಹಿತಿಯನ್ನು ತಿಳಿದುಕೊಂಡರು. ಶ್ರೀಮತಿ ಮಂಜುಳ, ಗೈಡ್ ಕ್ಯಾಪ್ಟನ್ ಹಾಗೂ ಶ್ರೀ ಕೊಟ್ರಯ್ಯ ಸ್ಕೌಟ್ ಮಾಸ್ಟರ್ ಉಪಸ್ಥಿತದ್ದರು.

* ಜುಲೈ 25 ರಂದು ಶ್ರೀ ರಾಧೇಶ್ ಜೆಂಬಗಿ, ಜಿಲ್ಲಾ ಸಹಾಯಕ ಆಯುಕ್ತರು ಸ್ಕೌಟ್ಸ್ ಇವರು ನಿಧನ ಹೊಂದಿದ ಪ್ರಯುಕ್ತ ಶ್ರದ್ಧಾಂಜಲಿ ಕಾರ್ಯಕ್ರಮವನ್ನು ಆಯೋಜಿಸಲಾಗಿತ್ತು.

* ಜುಲೈ 26 ರಂದು ಕಾರ್ಗಿಲ್ ವಿಜಯ್ ದಿವಸ್ ಅನ್ನು ಜಿಲ್ಲಾ ಸಂಸ್ಥೆ ವತಿಯಿಂದ ನಗರದ ಅಮರ್ ಜವಾನ್ ಪಾರ್ಕ್‌ನಲ್ಲಿ ಆಚರಿಸಲಾಯಿತು. ಶ್ರೀ ಮುರುಘ ರಾಜೇಂದ್ರ ಜೆ. ಚಿಗಟೇರಿ, ಜಿಲ್ಲಾ ಮುಖ್ಯ ಆಯುಕ್ತರು ಕಾರ್ಯಕ್ರಮದ ನೇತೃತ್ವ ವಹಿಸಿದ್ದರು. ಹವಾಲ್ದಾರ್ ಶ್ರೀ ಸುರೇಶ್, ಹವಾಲ್ದಾರ್ ಶ್ರೀ ಬೀರಪ್ಪ, ಶ್ರೀ ಆರ್.ಡಿ. ಬದ್ರಿನಾಥ್, ಅಧ್ಯಕ್ಷರು, ಶ್ರೀ ಎ.ಪಿ. ಷಡಾಕ್ಷರಪ್ಪ, ಜಿಲ್ಲಾ ಸ್ಕೌಟ್ ಆಯುಕ್ತರು, ಉಪಸ್ಥಿತರಿದ್ದರು. ದಾವಣಗೆರೆ ದಕ್ಷಿಣ ವಲಯ ಸ್ಥಳೀಯ ಸಂಸ್ಥೆ ಮತ್ತು ಕೊಂಡಜ್ಜಿ ಬಸಪ್ಪ ಸ್ಥಳೀಯ ಸಂಸ್ಥೆಯ ವಿವಿಧ ಶಾಲೆಗಳ ಸ್ಕೌಟ್ಸ್ ಮತ್ತು ಗೈಡ್ಸ್, ಸ್ಕೌಟರ್ಸ್–ಗೈಡರ್ಸ್‌ಗಳು ಭಾಗವಹಿಸಿದ್ದರು. ಶ್ರೀಮತಿ ಅಶ್ವಿನಿ ಜೆ., ಎಸ್.ಜಿ.ವಿ. ಕಾರ್ಯಕ್ರಮವನ್ನು ಸಂಘಟಿಸಿದರು.



* ಜುಲೈ 26 ರಂದು ಶ್ರೀ ಸಿದ್ಧಗಂಗಾ ಸ್ಥಳೀಯ ಸಂಸ್ಥೆಯಲ್ಲಿ ಕಾರ್ಗಿಲ್ ವಿಜಯ್‌ದಿವಸ್ ಅನ್ನು ಆಚರಿಸಲಾಯಿತು. ಶಾಲೆಯ ಸ್ಕೌಟ್ಸ್ ಮತ್ತು ಗೈಡ್ಸ್, ಸ್ಕೌಟರ್ಸ್–ಗೈಡರ್ಸ್‌ಗಳು ಸಂಭ್ರಮದಲ್ಲಿ ಪಾಲ್ಗೊಂಡರು.

## ಕೊಡಗು

* 80ನೇ ವರ್ಷದ ಸ್ವಾತಂತ್ರ್ಯ ದಿನಾಚರಣೆ ಪ್ರಯುಕ್ತ ಜಿಲ್ಲಾ ಸಂಸ್ಥೆಯಲ್ಲಿ ಜಿಲ್ಲಾ ಪ್ರಧಾನ ಆಯುಕ್ತರಾದ ಶ್ರೀ ಕೆ.ಟಿ. ಬೇಬಿಮ್ಯಾಥ್ಯೂರವರು ಧ್ವಜಾರೋಹಣ ಮಾಡಿ ಶುಭ ಹಾರೈಸಿದರು. ಈ ಸಂದರ್ಭದಲ್ಲಿ ಗೈಡ್ ಆಯುಕ್ತರಾದ ಶ್ರೀಮತಿ ರಾಣಿ ಮಾಚಯ್ಯ, ತರಬೇತಿ ಆಯುಕ್ತರಾದ ಶ್ರೀ ಕೆ.ಯು. ರಂಜಿತ್ ಸಹಕಾರ್ಯದರ್ಶಿ ಶ್ರೀ ಅಯ್ಯಪ್ಪ, ಮಡಿಕೇರಿ ಸ್ಥಳೀಯ ಸಂಸ್ಥೆಯ ಉಪಾಧ್ಯಕ್ಷರಾದ ಶ್ರೀ ರವಿ ಭಾಗವಹಿಸಿದ್ದರು. ಜಿಲ್ಲಾಡಳಿತ ಮತ್ತು ತಾಲ್ಲೂಕು ಆಡಳಿತದ ವತಿಯಿಂದ ನಡೆದ 80ನೇ ವರ್ಷದ ಸ್ವಾತಂತ್ರ್ಯ ದಿನಾಚರಣೆಯ ಪಥಸಂಚಲನದಲ್ಲಿ ಫಾತಿಮಾ ಪ್ರೌಢಶಾಲೆಯ ಗೈಡ್ಸ್‌ಗಳು ದ್ವಿತೀಯ ಸ್ಥಾನ ಗಳಿಸಿದರು. ಕಬ್–ಬುಲ್‌ಬುಲ್‌ಗಳು ಪಥಸಂಚಲನದಲ್ಲಿ ಭಾಗವಹಿಸಿದ್ದರು.



* ಆಗಸ್ಟ್ 16 ರಂದು ಪೊನ್ನಂಪೇಟೆ ಸ್ಥಳೀಯ ಸಂಸ್ಥೆ ವ್ಯಾಪ್ತಿಗೆ ಒಳಪಡುವ ಕೂರ್ಗ್ ಪಬ್ಲಿಕ್ ಶಾಲೆಯ ಸ್ಕೌಟ್ಸ್–ಗೈಡ್ಸ್‌ಗಳಿಂದ ಇರ್ಪುಗೆ ಚಾರಣ ಶಿಬಿರವನ್ನು ಹಮ್ಮಿಕೊಳ್ಳಲಾಯಿತು.

* ಆಗಸ್ಟ್ 17 ರಂದು ನಿರ್ಮಲಾ ವಿದ್ಯಾ ಸಂಸ್ಥೆ ಹಟ್ಟಿಹೊಳೆ ಇಲ್ಲಿ ಪೋಷಕರಿಗೆ ಮತ್ತು ವಿದ್ಯಾರ್ಥಿಗಳಿಗೆ ಜಿಲ್ಲಾ ಸ್ಕೌಟ್ ಆಯುಕ್ತರಾದ ಶ್ರೀ ಜಿಮ್ಮಿ ಸಿಕ್ವೇರಾ ಇವರು ಸ್ಕೌಟ್ಸ್–ಗೈಡ್ಸ್ ಬಗ್ಗೆ ಮಾಹಿತಿಯನ್ನು ನೀಡಿದರು. ಈ ಸಂದರ್ಭದಲ್ಲಿ ಜಿಲ್ಲಾ ಸಂಘಟಕಿ ಶ್ರೀಮತಿ ದಮಯಂತಿ, ವಿದ್ಯಾ ಸಂಸ್ಥೆಯ ಧರ್ಮಗುರುಗಳು, ಶಾಲೆಯ ಮುಖ್ಯೋಪಾಧ್ಯಾಯರು ಶಿಕ್ಷಕ ವೃಂದದವರು, ಪೋಷಕ ವೃಂದದವರು ಮತ್ತು ವಿದ್ಯಾರ್ಥಿಗಳು ಭಾಗವಹಿಸಿದರು.



* ಆಗಸ್ಟ್ 18 ರಂದು ಪೊನ್ನಂಪೇಟೆ ಸ್ಥಳೀಯ ಸಂಸ್ಥೆ ವ್ಯಾಪ್ತಿಗೆ ಒಳಪಡುವ ರೂಟ್ಸ್ ವಿದ್ಯಾ ಸಂಸ್ಥೆ ವತಿಯಿಂದ ಸ್ಕೌಟ್ಸ್–ಗೈಡ್ಸ್‌ಗಳಿಗೆ ಕೃಷಿ ನಡಿಗೆ ಕಾರ್ಯಕ್ರಮವನ್ನು ಆಯೋಜಿಸಲಾಯಿತು.

* ಜಿಲ್ಲಾ ಮಟ್ಟದ ರಾಜ್ಯ ಪುರಸ್ಕಾರ ಪೂರ್ವ ಸಿದ್ಧತಾ ಪರೀಕ್ಷೆಯು ಆಗಸ್ಟ್ 19 ರಿಂದ 21ರ ವರೆಗೆ ಎಸ್.ಎಂ.ಎಸ್. ವಿದ್ಯಾ ಸಂಸ್ಥೆ ಅರಮೇರಿ ವಿರಾಜಪೇಟೆ ಇಲ್ಲಿ ಜಿಲ್ಲಾ ಸ್ಕೌಟ್ ಆಯುಕ್ತರಾದ ಶ್ರೀ ಜಿಮ್ಮಿ ಸಿಕ್ವೇರಾ ಮತ್ತು ಗೈಡ್ ತರಬೇತಿ ಆಯುಕ್ತರಾದ ಶ್ರೀಮತಿ ಮೈಥಿಲಿ ರಾವ್ ನೇತೃತ್ವದಲ್ಲಿ ನಡೆಯಿತು.

* ಜುಲೈ 24 ರಿಂದ 30ರ ವರೆಗೆ ಕುಶಾಲನಗರದ ಕೊಡವ ಸಮಾಜದಲ್ಲಿ ಸ್ಕೌಟ್ಸ್–ಗೈಡ್ಸ್ ರೋವರ್ಸ್–ರೇಂಜರ್ಸ್‌ಗಳಿಗೆ ಮೂಲ ತರಬೇತಿ ಮತ್ತು ಸ್ಕೌಟ್ಸ್–

ಗೈಡ್ಸ್‌ಗಳಿಗೆ ಮುಂದುವರೆದ ತರಬೇತಿಯನ್ನು ಹಮ್ಮಿಕೊಳ್ಳಲಾಗಿತ್ತು. ಜಿಲ್ಲಾ ಸಂಸ್ಥೆ ಮತ್ತು ಕುಶಾಲನಗರ ಸ್ಥಳೀಯ ಸಂಸ್ಥೆಯ ವತಿಯಿಂದ ಹಮ್ಮಿಕೊಂಡಿದ್ದ ತರಬೇತಿ ಶಿಬಿರವನ್ನು ರಾಜ್ಯ ಮುಖ್ಯ ಆಯುಕ್ತರಾದ ಡಾ. ಪಿ.ಜಿ.ಆರ್. ಸಿಂಧ್ಯಾರವರು ಉದ್ಘಾಟಿಸಿ ಅಂತರಾಷ್ಟ್ರೀಯ ಸಂಸ್ಥೆಯಾದ ಸ್ಕೌಟ್ಸ್-ಗೈಡ್ಸ್ ಸಂಸ್ಥೆಯು ಬೆಳೆದು ಬಂದ ದಾರಿಯನ್ನು ವಿವರಿಸಿದರು. ಸಹಾಯಕ ರಾಜ್ಯ ಆಯುಕ್ತರಾದ ಶ್ರೀ ಬಿ.ಕೆ. ಬಸವರಾಜ್ ಮಾತನಾಡಿ "ಸ್ಕೌಟ್ ಮತ್ತು ಗೈಡ್ಸ್‌ನಲ್ಲಿ ಮಕ್ಕಳಿಗೆ ಶಿಕ್ಷಣದ ಜೊತೆಗೆ ಶಿಸ್ತು ಹಾಗೂ ಭಾವೈಕ್ಯ ಕಲಿಸುವುದೇ ಮುಖ್ಯ" ಎಂದರು. ಸೋಮವಾರಪೇಟೆ ಮತ್ತು ಕುಶಾಲನಗರ ಕ್ಷೇತ್ರ ಶಿಕ್ಷಣಾಧಿಕಾರಿಯವರಾದ ಶ್ರೀ ಎಂ. ಕೃಷ್ಣಪ್ಪ ಮಾತನಾಡಿ "ಶಾಲೆಗಳಲ್ಲಿ ಸ್ಕೌಟ್ಸ್-ಗೈಡ್ಸ್ ಘಟಕಗಳನ್ನು ಸ್ಥಾಪಿಸುವ ಮೂಲಕ ಮಕ್ಕಳಲ್ಲಿ ಶಿಸ್ತುಬದ್ಧ ಜೀವನ ಮತ್ತು ಉತ್ತಮ ಜೀವನ ಕೌಶಲ್ಯಗಳನ್ನು ಬೆಳೆಸಲು ಸಹಕಾರಿಯಾಗಿವೆ" ಎಂದರು. ಅಧ್ಯಕ್ಷತೆ ವಹಿಸಿದ್ದ ಸ್ಕೌಟ್ಸ್-ಗೈಡ್ಸ್ ಜಿಲ್ಲಾ ಪ್ರಧಾನ ಆಯುಕ್ತರಾದ ಶ್ರೀ ಕೆ.ಟಿ. ಬೇಬಿಮ್ಯಾಥ್ಯೂರವರು ಮಾತನಾಡಿ "ಸಂಸ್ಥೆಯ ವತಿಯಿಂದ ಜಿಲ್ಲೆಯಲ್ಲಿ ವಿವಿಧ ಕಾರ್ಯಕ್ರಮ, ತರಬೇತಿಗಳ ಮೂಲಕ ಸ್ಕೌಟ್ಸ್-ಗೈಡ್ಸ್ ಚಟುವಟಿಕೆಗಳನ್ನು ಹಮ್ಮಿಕೊಂಡು ವಿದ್ಯಾರ್ಥಿ ಸಮುದಾಯದಲ್ಲಿ ಉತ್ತಮ ವ್ಯಕ್ತಿತ್ವ ಮತ್ತು ನಾಯಕತ್ವ ಗುಣ ಬೆಳೆಸಲಾಗುತ್ತದೆ" ಎಂದರು. ಶಿಬಿರದ ನಾಯಕರು ಹಾಗೂ ಜಿಲ್ಲಾ ಸ್ಕೌಟ್ ಆಯುಕ್ತರು ಆಗಿರುವ ಶ್ರೀ ಜಿಮ್ಮಿ ಸಿಕ್ವೇರಾರವರು ಶಿಬಿರದ ರೂಪುರೇಷೆ ಕುರಿತು ಮಾಹಿತಿ ನೀಡಿದರು. ಕೊಡವ ಸಮಾಜದ ಅಧ್ಯಕ್ಷರಾದ ಶ್ರೀ ವಾಂಚೀರ ಮನು ನಂಜುಂಡರವರು ಮಾತನಾಡಿ "ಸ್ಕೌಟ್ಸ್-ಗೈಡ್ಸ್ ಸಂಸ್ಥೆಯು ಮಕ್ಕಳಲ್ಲಿ ಶಿಸ್ತು ಬೆಳೆಸುವಲ್ಲಿ ಮಹತ್ವದ ಪಾತ್ರವಹಿಸುತ್ತದೆ" ಎಂದರು. ಕಾರ್ಯಕ್ರಮದಲ್ಲಿ ಕುಶಾಲನಗರ ಸ್ಥಳೀಯ ಸಂಸ್ಥೆಯ ಹಾಗೂ ಜಿಲ್ಲಾ ಸಂಸ್ಥೆಯ ಪದಾಧಿಕಾರಿಗಳು ಉಪಸ್ಥಿತರಿದ್ದರು. ಶ್ರೀ ಕೆ.ಯು. ರಂಜಿತ್ ಸ್ವಾಗತಿಸಿದರು, ಶ್ರೀಮತಿ ಪಿ.ಹೆಚ್. ಅಲೀಮಾ ನಿರೂಪಿಸಿದರು. ಶ್ರೀಮತಿ ಯು.ಸಿ. ದಮಯಂತಿ ವಂದಿಸಿದರು.



## ಕೋಲಾರ

* ಜೂನ್ 17 ರಂದು ವಿಶ್ವ ಪರಿಸರ ದಿನಾಚರಣೆ ಅಂಗವಾಗಿ ಆರ್.ಎಲ್. ಜಾಲಪ್ಪ ಶಾಲೆಯ ಆವರಣದಲ್ಲಿ 350ಕ್ಕೂ ಹೆಚ್ಚು ಗಿಡಗಳನ್ನು ನೆಡಲಾಯಿತು. ಈ ಸಂದರ್ಭದಲ್ಲಿ ಶಾಲಾ ಆಡಳಿತಾಧಿಕಾರಿ ಶ್ರೀ ಹನುಮಂತ್ ರಾವ್ ರವರು ಗಿಡಗಳನ್ನು ನೆಡುವ ಮೂಲಕ ಕಾರ್ಯಕ್ರಮಕ್ಕೆ ಚಾಲನೆ ನೀಡಿ ಮಾತನಾಡುತ್ತಾ, "ವಿದ್ಯಾರ್ಥಿಗಳು ತಮ್ಮ ಹುಟ್ಟು ಹಬ್ಬದ ನೆನಪಿಗೆ ಒಂದು ಗಿಡವನ್ನು ನೆಟ್ಟು ವರ್ಷವಿಡೀ ಪೋಷಿಸಿದಾಗ ಸಿಗುವ ತೃಪ್ತಿ ಮತ್ತೆಲ್ಲೂ ಸಿಗದು, ಶಾಲಾ ಮಕ್ಕಳಿಗಾಗಿ ಆವರಣದಲ್ಲಿ ಗಿಟಗಳನ್ನು ನೆಡಲು ಜಾಗ ಮೀಸಲಾಗಿರಿಸಿದೆ"



ಎಂದು ತಿಳಿಸಿದರು. ಈ ಸಂದರ್ಭದಲ್ಲಿ ಜಿಲ್ಲಾ ಸಂಸ್ಥೆಯ ಶ್ರೀ ಕೆ.ಆರ್. ಸುರೇಶ್, ಶಾಲೆಯ ಪ್ರಾಂಶುಪಾಲರಾದ ಶ್ರೀಮತಿ ಲಕ್ಷ್ಮೀಭಟ್, ಸ್ಕೌಟ್ಸ್-ಗೈಡ್ಸ್ ಶಿಕ್ಷಕರು ಶಾಲಾ ಶಿಕ್ಷಕರು ಮತ್ತು ವಿದ್ಯಾರ್ಥಿಗಳು ಉಪಸ್ಥಿತರಿದ್ದರು.

* ಜೂನ್ 21 ರಂದು ಜಿಲ್ಲಾ ಮಟ್ಟದ ವಿಶ್ವ ಯೋಗ ದಿನವನ್ನು ನಗರದ ಮಹಿಳಾ ಸಮಾಜ ಶಾಲಾ ಆವರಣದಲ್ಲಿ ಜಿಲ್ಲಾ ಆಯುಷ್ ಇಲಾಖೆಯ ಸಹಕಾರದೊಂದಿಗೆ ಆಯೋಜನೆ ಮಾಡಲಾಯಿತು. ಜಿಲ್ಲಾ ಆಯುಷ್ ಅಧಿಕಾರಿಗಳಾದ ಶ್ರೀ ರಾಘವೇಂದ್ರ ರವರು ಮಾತನಾಡಿ "ಯೋಗ ಒಂದು ದಿನದ ಕಾರ್ಯಕ್ರಮವಲ್ಲ. ಇದು ಜೀವನದ ಭಾಗವಾಗಿ ಎಲ್ಲರೂ ಪ್ರತಿದಿನ ಅಭ್ಯಾಸ ಮಾಡಬೇಕು" ಎಂದು ತಿಳಿಸಿದರು. ಕಾರ್ಯಕ್ರಮದ ಅಧ್ಯಕ್ಷತೆಯನ್ನು ವಹಿಸಿದ್ದ ಶಾಲಾ ಕಾರ್ಯದರ್ಶಿ ಶ್ರೀಮತಿ ನಂದನರವರು ಮಾತನಾಡಿ "ಶಾಲೆಯ ಶಿಕ್ಷಕರು ತಿಳಿಸಿದ ಯೋಗಾಸನಗಳನ್ನು ವಿದ್ಯಾರ್ಥಿಗಳು ತಮ್ಮ ಪೋಷಕರಿಗೆ ಹೇಳಿಕೊಟ್ಟು ಅವರನ್ನು ಆರೋಗ್ಯವಂತರನ್ನಾಗಿ ಮಾಡಿದರೆ ಮಾತ್ರ ಉತ್ತಮ ಸಮಾಜ ನಿರ್ಮಾಣ ಸಾಧ್ಯ" ಎಂದು ತಿಳಿಸಿದರು. ಈ ಸಂದರ್ಭದಲ್ಲಿ ಜಿಲ್ಲಾ ಮತ್ತು ಸ್ಥಳೀಯ ಸಂಸ್ಥೆ ಪದಾಧಿಕಾರಿಗಳು ಉಪಸ್ಥಿತರಿದ್ದರು.



* ಜೂನ್ 28 ರಂದು ಪಲ್ಸ್ ಪೋಲಿಯೋ ದಿನದಂದು ಸರ್ಕಾರಿ ಸಮುದಾಯ ಆಸ್ಪತ್ರೆ ಕೋಲಾರ ಇಲ್ಲಿ ಡಾ॥ ಮುರಳೀಧರ್‌ರವರು ಮಕ್ಕಳಿಗೆ ಲಸಿಕೆ ನೀಡಿದರು. ಈ ಸಂಧರ್ಭದಲ್ಲಿ ಆಸ್ಪತ್ರೆಯ ವೈದ್ಯರು, ದಾದಿಯರು, ಸ್ಕೌಟ್ಸ್ ಸಂಸ್ಥೆಯ ಸ್ವಯಂ ಸೇವಕರು ಸೇವೆ ಸಲ್ಲಿಸಿದರು.

* ಜೂನ್ 29 ರಂದು ವನ ಮಹೋತ್ಸವದ ಪ್ರಯುಕ್ತ ಸರ್ಕಾರಿ ಸಮುದಾಯ ಆಸ್ಪತ್ರೆ ಕೋಲಾರ ಆವರಣದಲ್ಲಿ ಮುಳ್ಳಿನ ಗಿಡಗಳನ್ನು ತೆರವು ಮಾಡಿ, ಸುಮಾರು 50 ಗಿಡಗಳನ್ನು ನೆಡುವ ಮೂಲಕ ವನಮಹೋತ್ಸವ ಆಚರಣೆ ಮಾಡಲಾಯಿತು. ಈ ಕಾರ್ಯಕ್ರಮಕ್ಕೆ ಡಾ॥ ಮುರಳೀಧರ್‌ರವರು ಗಿಡಗಳನ್ನು ನೆಡುವ ಮೂಲಕ ಚಾಲನೆ ನೀಡಿದರು. ಈ ಸಂಧರ್ಭದಲ್ಲಿ ಆಸ್ಪತ್ರೆಯ ವೈದ್ಯರು, ದಾದಿಯರು, ಸ್ಕೌಟ್ಸ್ ಸಂಸ್ಥೆಯ ಸ್ವಯಂ ಸೇವಕರು ಸೇವೆ ಸಲ್ಲಿಸಿದರು.

* ಜುಲೈ 22 ರಂದು ಕೋಲಾರ ಜಿಲ್ಲೆಯ ಹತ್ತನೇ ತರಗತಿ ಮತ್ತು ಪದವಿ ಪೂರ್ವ ಶಿಕ್ಷಣದಲ್ಲಿ ಹೆಚ್ಚು ಅಂಕಗಳನ್ನುಗಳಿಸಿದ ವಿದ್ಯಾರ್ಥಿಗಳಿಗೆ ಪ್ರತಿಭಾ ಪುರಸ್ಕಾರವನ್ನು ಸ್ಕೌಟ್ ಭವನದಲ್ಲಿ ಆಯೋಜನೆ ಮಾಡಲಾಗಿತ್ತು, ಈ ಕಾರ್ಯಕ್ರಮದಲ್ಲಿ ವಿಶೇಷ ಅತಿಥಿಗಳಾಗಿ ಭಾಗವಹಿಸಿದ್ದ ರಾಜ್ಯ ಪ್ರಧಾನ ಆಯುಕ್ತರಾದ ಡಾ॥ ಪಿ.ಜಿ.ಆರ್. ಸಿಂದ್ಯರವರು ವಿದ್ಯಾರ್ಥಿಳಿಗೆ ಸನ್ಮಾನ ಮಾಡಿ ಮಾತನಾಡುತ್ತಾ "ಸ್ಕೌಟ್ಸ್-ಗೈಡ್ಸ್ ಶಿಕ್ಷಣ ಪಡೆದ ವಿದ್ಯಾರ್ಥಿಗಳು



ಅದೃಷ್ಟವಂತರು ಎಲ್ಲಾ  ಕ್ಷೇತ್ರಗಳಲ್ಲಿ ಸಾಧನೆ ಮಾಡಲು ಸ್ಕೌಟ್ಸ್ –ಗೈಡ್ಸ್ ಶಿಕ್ಷಣ ಸಹಕಾರಿಯಾಗಿದ್ದು, ಕೋಲಾರ ಜಿಲ್ಲೆಯಲ್ಲಿ ಶೇ. 95ಕ್ಕೂ ಹೆಚ್ಚು ಅಂಕಗಳನ್ನು ಗಳಿಸಿದ ವಿದ್ಯಾರ್ಥಿಗಳು ಹೆಚ್ಚಿನ ಸಾಧನೆ ಮಾಡಿದ್ದು, ಈ ವಿದ್ಯಾರ್ಥಿಗಳು ಇತರೆ ವಿದ್ಯಾರ್ಥಿಗಳಿಗೆ ಮಾದರಿಯಾಗಿದ್ದಾರೆ” ಎಂದು ತಿಳಿಸಿದರು. ಜಿಲ್ಲಾ ಮುಖ್ಯ ಆಯುಕ್ತರಾದ ಶ್ರೀಯುತ ಕೆ.ವಿ. ಶಂಕರಪ್ಪರವರು ಮಾತನಾಡಿ “ಎಲ್ಲಾ ಪದಾಧಿಕಾರಿಗಳು ತಮ್ಮ ವ್ಯಾಪ್ತಿಯಲ್ಲಿ ಕನಿಷ್ಠ 5 ಶಾಲಾ ಕಾಲೇಜುಗಳನ್ನು ಉಸ್ತುವಾರಿ ನೋಡಿಕೊಂಡು ಸಕಾಲಕ್ಕೆ ಆಗಬೇಕಾದ ಚಟುವಟಿಕೆಗಳ ಬಗ್ಗೆ ಮಾರ್ಗದರ್ಶನ ಹಾಗೂ ಸಹಕಾರ ನೀಡಿದರೆ ನಮ್ಮ ಜಿಲ್ಲೆಯಲ್ಲಿ ಮತ್ತಷ್ಟು ಸ್ಕೌಟ್ಸ್–ಗೈಡ್ಸ್ ಶಿಕ್ಷಣವನ್ನು ಬೆಳಸಬಹುದು” ಎಂದು ತಿಳಿಸಿದರು. ಈ ಸಂದರ್ಭದಲ್ಲಿ ರಾಜ್ಯ ಸಂಸ್ಥೆಯ ಪದಾಧಿಕಾರಿಗಳು ಜಿಲ್ಲಾ ಸಂಸ್ಥೆಯ ಪದಾದೀಕಾರಿಗಳು ಉಪಸ್ಥಿತರಿದ್ದರು.

* ಜುಲೈ 26 ರಂದು ಜಿಲ್ಲಾ ಮಟ್ಟದ ಕಾರ್ಗಿಲ್ ವಿಜಯೋತ್ಸವ ದಿನವನ್ನು ನಗರದ ಮಕ್ಕಳ ಉದ್ಯಾನವನದಲ್ಲಿ ಇರುವ ವೀರಯೋಧರ ಸ್ಮಾರಕ್ಕೆ ನಮಿಸುವ ಮೂಲಕ ಗೌರವ ನೀಡಿ, ವೀರ ಯೋಧರ ಬಗ್ಗೆ ಮತ್ತು ಕಾರ್ಗಿಲ್ ಯದ್ದದ ಬಗ್ಗೆ ವಿದ್ಯಾರ್ಥಿಗಳಿಗೆ ತಿಳಿಸಲಾಯಿತು, ಈ ಸಂದರ್ಭದಲ್ಲಿ ಜಿಲ್ಲಾ ಆಯುಕ್ತರಾದ ಶ್ರೀ ಕೆ.ಆರ್. ಸುರೇಶ್. ಸಹ ಕಾರ್ಯದರ್ಶಿ ಸ್ಕೌಟ್ ಬಾಬು, ಮಹಿಳಾ ಸಮಾಜ ಶಾಲೆಯ ನೋಡಲ್ ಅಧಿಕಾರಿ ಶ್ರೀಮತಿ ಅನುರಾಧ ಮುಂತಾದವರು ಉಪಸ್ಥಿತರಿದ್ದರು.




* ಜುಲೈ 27 ರಂದು ಕೋಲಾರ ನಗರದಲ್ಲಿ ಚುನಾವಣಾ ಆಯೋಗದ ಮತದಾರ ಪಟ್ಟಿ ಪರಿಷ್ಕರಣೆ ಬಗ್ಗೆ ನಗರದಲ್ಲಿ ಮನೆಗಳಿಗೆ ಭೇಟಿ ನೀಡಿ ಸಾರ್ವಜನಿಕರಿಗೆ ಜಾಗೃತಿ ಮಾಡಿಸಲಾಯಿತು. ಮಹಿಳಾ ಸಮಾಜ ಶಾಲೆಯ ಸ್ಕೌಟ್ಸ್–ಗೈಡ್ಸ್‌ಗಳು ಸೇವಾ ಕಾರ್ಯದಲ್ಲಿ ಭಾಗವಹಿಸಿದ್ದರು.

* ಆಗಸ್ಟ್ 01 ರಂದು ಸ್ಕೌಟ್ ಸನ್ ರೈಸ್ ಡೇ ದಿನವನ್ನು ಕೋಲಾರ ತಾಲ್ಲೂಕಿನ ಬಿ.ಜಿ.ಎಸ್. ಶಾಲೆಯ ಆವರಣದಲ್ಲಿ ಸರಳವಾಗಿ ಆಚರಣೆ ಮಾಡಿ, ಶಾಲಾ ಮಕ್ಕಳಿಗೆ ದಿನದ ಮಹತ್ವ ತಿಳಿಸಿ ಎಲ್ಲಾ ಮಕ್ಕಳು ಸ್ಕೌಟ್ಸ್–ಗೈಡ್ಸ್ ಶಿಕ್ಷಣಕ್ಕೆ ಆಗಮಿಸಬೇಕು ಎಂದು ಮನವಿ ಮಾಡಲಾಯಿತು. ಈ ಸಂದರ್ಭದಲ್ಲಿ ಶಾಲೆಯ ಮುಖ್ಯ ಶಿಕ್ಷಕರಾದ  ಶ್ರೀಯುತ  ಚಂದು ಕುಮಾರ್, ಡಾ|| ಸುನಿತಾ, ಮಂಜುಳ, ಬಾಬು, ಶಿಲ್ಪಾ ಮುಂತಾದವರು ಉಪಸ್ಥಿತರಿದ್ದರು.

* ಆಗಸ್ಟ್ 01 ರಂದು ಸರ್ಕಾರಿ ಪ್ರಥಮ ದರ್ಜೇ ಕಾಲೇಜು ವೇಮಗಲ್ ನಲ್ಲಿ ನೂತನ ರೋವರ್ಸ್ ಮತ್ತು ರೇಂಜರ್ಸ್‌ಗಳಿಗೆ ಮಾಹಿತಿ ಶಿಬಿರವನ್ನು ಆಯೋಜಿಸಿ, ಸ್ಕೌಟ್ಸ್–ಗೈಡ್ಸ್ ಸಂಸ್ಥೆಯ ಪರಿಚಯವನ್ನು ಮಾಡಿಕೊಡಲಾಯಿತು. ಈ ಸಂದರ್ಭದಲ್ಲಿ ಕಾಲೇಜಿನ ರೋವರ್ ಲೀಡರ್ ಪ್ರೊ. ಸುನಿಲ್ ಕುಮಾರ್‌ರವರು ಮಾತನಾಡಿ ಮುಂದಿನ ದಿನಗಳಲ್ಲಿ ಮಾದರಿ ರೋವರ್ ರೇಂಜರ್ ದಳವಾಗಲು ಎಲ್ಲಾ ವಿದ್ಯಾರ್ಥಿಗಳು ಭಾಗವಹಿಸಲು ಕೋರಿದರು. ಸಂಪನ್ಮೂಲ ವ್ಯಕ್ತಿಯಾಗಿ ಬಾಬು ವಿ., ಸೇವೆ ಸಲ್ಲಿಸಿದರು.

* ಆಗಸ್ಟ್ 8 ಮತ್ತು 9 ರಂದು ಸ್ಕೌಟ್ಸ್–ಗೈಡ್ಸ್ ಗಳಿಗೆ ಪದಕ ತರಬೇತಿಯನ್ನು ಶಿಬಿರವನ್ನು ಸ್ಕೌಟ್ ಭವನದಲ್ಲಿ ಆಯೋಜಿಸಲಾಗಿತ್ತು. ಸಂಪನ್ಮೂಲ ವ್ಯಕ್ತಿಗಳಾಗಿ ಶ್ರೀ ಬಾಬು, ಶ್ರೀಮತಿ ಶ್ರೀದೇವಿ, ಶ್ರೀಮತಿ ಹೇಮಾವತಿ, ಶ್ರೀಮತಿ ಮಮತ, ಶ್ರೀಮತಿ ಇಂದು ರವರು ಸೇವೆ ಸಲ್ಲಿಸಿದರು.

* ಆಗಸ್ಟ್ 8 ರಂದು ಜಿಲ್ಲೆಯ ಪದವಿಪೂರ್ವ ಕಾಲೇಜು ಉಪನ್ಯಾಸಕರಿಗೆ ಒಂದು ದಿನದ ಮಾಹಿತಿ ಶಿಬಿರವನ್ನು ಸ್ಕೌಟ್ ಭವನದಲ್ಲಿ ಆಯೋಜಿಸಲಾಗಿತ್ತು, ಈ ಶಿಬಿರದಲ್ಲಿ ಸಂಪನ್ಮೂಲ ವ್ಯಕ್ತಿಯಾಗಿ ಸುರೇಶ್, ಬಾಬು, ನಾಗೇಶ್, ಪವನ್ ಕುಮಾರ್ ಸೇವೆ ಸಲ್ಲಿಸಿದರು.

* ಆಗಸ್ಟ್ 8 ಮತ್ತು 9 ರಂದು ಕೆ.ಪಿ.ಎಸ್., ಶಾಲೆ ಸೋಮಯಾಜಲಹಳ್ಳಿ ಶಾಲಾ ಆವರಣದಲ್ಲಿ ತೃತೀಯ ಸೋಪಾನ್ ಪರೀಕ್ಷಾ ಶಿಬಿರವನ್ನು ಹಮ್ಮಿಕೊಳ್ಳಲಾಗಿತ್ತು. ಈ ಶಿಬಿರದ ಸಮಾರೋಪ ಸಮಾರಂಭದಲ್ಲಿ ಜಿಲ್ಲಾ ಮುಖ್ಯ ಆಯುಕ್ತರಾದ ಶ್ರೀ ಕೆ.ವಿ. ಶಂಕರಪ್ಪರವರು ಭಾಗವಹಿಸಿ ಮಕ್ಕಳನ್ನು ಉದ್ದೇಶಿಸಿ ಮಾತನಾಡುತ್ತಾ “ಸ್ಕೌಟ್ಸ್–ಗೈಡ್ಸ್‌ಗಳು ಕೇವಲ ಪ್ರಮಾಣಪತ್ರಕ್ಕಾಗಿ ಮೀಸಲಾಗದೇ ತಮ್ಮ ಸುತ್ತಲಿನ ಸಮಾಜಕ್ಕೆ ಮತ್ತು ತಮ್ಮ ಪೋಷಕರಿಗೆ ಸೇವೆ ಸಲ್ಲಿಸುವ ಗುಣಗಳನ್ನು ಮೈಗೂಡಿಸಿಕೊಳ್ಳಬೇಕು”.



## ಕೊಪ್ಪಳ

* ಜುಲೈ 25 ರಂದು ಸ್ಕೌಟ್ಸ್–ಗೈಡ್ಸ್, ರೋವರ್ಸ್–ರೇಂಜರ್ಸ್ ರಾಜ್ಯ ಪುರಸ್ಕಾರ ಪೂರ್ವಭಾವಿ ಪರೀಕ್ಷಾ ಶಿಬಿರದ ಉದ್ಘಾಟನೆ ನಡೆಯಿತು. ಸದರಿ ಕಾರ್ಯಕ್ರಮದ ಅಧ್ಯಕ್ಷತೆಯ ಸ್ಥಾನವನ್ನು ಕೊಪ್ಪಳ ಜಿಲ್ಲಾ ಸಂಸ್ಥೆಯ ಪ್ರಧಾನ ಆಯುಕ್ತರಾದಂತಹ ಶ್ರೀ ಹೆಚ್.ಎಂ. ಸಿದ್ದರಾಮಸ್ವಾಮಿ, ಮುಖ್ಯ ಅತಿಥಿಗಳಾಗಿ ಶ್ರೀ ಚನ್ನಮಲ್ಲಿಕಾರ್ಜುನಸ್ವಾಮಿ ಭಾಗವಹಿಸಿದ್ದರು. ಈ ಶಿಬಿರದಲ್ಲಿ 60 ಶಿಬಿರಾರ್ಥಿಗಳು ಭಾಗವಹಿಸಿದ್ದರು. ಕಾರ್ಯಕ್ರಮದ ನಿರೂಪಣೆಯನ್ನು ಗಂಗಾವತಿ ಸ್ಥಳೀಯ ಸಂಸ್ಥೆಯ ಪ್ರಧಾನ ಕಾರ್ಯದರ್ಶಿಯಾದಂತಹ ಶ್ರೀ ಹುಸೇನಸಾಬ್ ಮಕಾಂದಾರ ನೆರವೇರಿಸಿದರು.



* ಜಿಲ್ಲಾ ಸಂಸ್ಥೆ ಕೊಪ್ಪಳ ಹಾಗೂ ಸ್ಥಳೀಯ ಸಂಸ್ಥೆ ಗಂಗಾವತಿ ಇವರ ಸಂಯುಕ್ತ ಆಶ್ರಯದಲ್ಲಿ ಜುಲೈ 26 ರಂದು ಕಾರ್ಗಿಲ್ ವಿಜಯೋತ್ಸವ ಹಾಗೂ ರಾಜ್ಯ ಪುರಸ್ಕಾರ ಪೂರ್ವಭಾವಿ ಪರೀಕ್ಷಾ ಶಿಬಿರವನ್ನು ಸಂಘಟಿಸಲಾಯಿತು. ಈ ಸಭೆಯ ಅಧ್ಯಕ್ಷತೆಯನ್ನು ಜಿಲ್ಲಾ ಮುಖ್ಯ ಆಯುಕ್ತರಾದ ಶ್ರೀ ಸಿದ್ದರಾಮಯ್ಯ ಸ್ವಾಮಿಗಳು ವಹಿಸಿಕೊಂಡಿದ್ದರು. ಈ ಕಾರ್ಯಕ್ರಮದಲ್ಲಿ ಜಿಲ್ಲಾ ಪದಾಧಿಕಾರಿಗಳು ಉಪಸ್ಥಿತರಿದ್ದರು. ಈ ಕಾರ್ಯಕ್ರಮದ ಕೇಂದ್ರಬಿಂದು ಆದಂತಹ ಶ್ರೀ ಬಸವಂತಪ್ಪ, ಮಾಜಿ ಸೈನಿಕರು ಇವರನ್ನು ಜಿಲ್ಲಾ ಸಂಸ್ಥೆ ಹಾಗೂ ಸ್ಥಳೀಯ ಸಂಸ್ಥೆಯ ಗಂಗಾವತಿ ವತಿಯಿಂದ ಸನ್ಮಾನಿಸಲಾಯಿತು. ಕಾರ್ಗಿಲ್‌ನಲ್ಲಿ ನಡೆದಂತಹ ಯುದ್ಧದ ಘಟನೆಗಳನ್ನು ಹಾಗೂ ಅವರ ನಿರ್ವಹಿಸಿದ ಕರ್ತವ್ಯಗಳ ಬಗ್ಗೆ ಹಾಗೂ ವಿವಿಧ ರಾಜ್ಯಗಳಲ್ಲಿ ಸೇವೆ ಸಲ್ಲಿಸಿದ ಬಗ್ಗೆ ವಿವರವಾಗಿ ತಿಳಿಸಿದರು.



ಈ ಕಾರ್ಯಕ್ರಮವನ್ನು ಸ್ಥಳೀಯ ಸಂಸ್ಥೆ ಕಾರ್ಯದರ್ಶಿಗಳಾದ ಶ್ರೀ ಮಖಿಂದರ್ ನಡೆಸಿಕೊಟ್ಟರು. ಈ ಕಾರ್ಯಕ್ರಮದಲ್ಲಿ ಜಿಲ್ಲಾ ಸಂಸ್ಥೆಯ ಜಿಲ್ಲಾ ಸಂಘಟಕರಾದ ಶ್ರೀ ಮಲ್ಲೇಶಪ್ಪ ಕೆ.ಟಿ. ಅವರು ಸ್ಕೌಟ್ಸ್ ಮತ್ತು ಗೈಡ್ಸ್ ವಿಷಯಗಳ ಬಗ್ಗೆ ಲಾಕ್ ಪುಸ್ತಕದ ಬರೆಯುವ ಬಗ್ಗೆ ಮಕ್ಕಳಿಗೆ ತಿಳಿಸಿದರು.

* ಜುಲೈ 31 ರಂದು ಕೊಪ್ಪಳದ ಜಿಲ್ಲಾಧಿಕಾರಿಗಳ ಸಭಾಂಗಣದಲ್ಲಿ ನಮ್ಮ ಭಾರತ ನೋಂದಾವಣೆ ಕಾರ್ಯಕ್ರಮದ ಬಗ್ಗೆ ಕೊಪ್ಪಳ ಜಿಲ್ಲೆಯ ಎಲ್ಲಾ ಇಲಾಖೆಯ ಅಧಿಕಾರಿಗಳ ಸಭೆಯನ್ನು ಮಾನ್ಯ ಜಿಲ್ಲಾಧಿಕಾರಿಗಳ ಅಧ್ಯಕ್ಷತೆಯಲ್ಲಿ ಸಂಘಟಿಸಲಾಯಿತು. ಜಿಲ್ಲಾ ಸಂಸ್ಥೆಯಿಂದ ಜಿಲ್ಲಾ ಸಂಘಟಿಕರಾದ ಶ್ರೀ ಮಲ್ಲೇಶಪ್ಪ ಕೆ.ಟಿ. ಭಾಗವಹಿಸಿದ್ದರು. ಹಾಗೆ ನೋಂದಣಿ ಕಾರ್ಯಕ್ರಮದ ಬಗ್ಗೆ ತಿಳಿಸಿದರು. ಸಭೆಯಲ್ಲಿ ಭಾಗವಹಿಸಿದ ಎಲ್ಲಾ ಅಧಿಕಾರಿಗಳಿಗೆ ಮಾನ್ಯ ಜಿಲ್ಲಾಧಿಕಾರಿಗಳು ಕಡ್ಡಾಯವಾಗಿ ಎಲ್ಲ ಮಕ್ಕಳನ್ನು ನಮ್ಮ ಭಾರತ ಕಾರ್ಯಕ್ರಮದಲ್ಲಿ ನೋಂದಣಿ ಮಾಡಿಕೊಳ್ಳಲು ತಿಳಿಸಿದರು.



* ಆಗಸ್ಟ್ 10 ರಿಂದ 12ರ ವರಿಗೆ ಸರಕಾರಿ ಪ್ರಥಮದರ್ಜೆ ಕಾಲೇಜು ಕೊಪ್ಪಳದಲ್ಲಿ ರೋವರ್ಸ್ ಮತ್ತು ರೇಂಜರ್ಸ್‌ಗಳಿಗೆ ರಾಜ್ಯ ಪುರಸ್ಕಾರ ಹಾಗೂ ನಿಪುಣ ಪರೀಕ್ಷೆಯ ಪುನಶ್ಚೇತನ ಶಿಬಿರವನ್ನು ಹಮ್ಮಿಕೊಳ್ಳಲಾಯಿತು.

* ಜಿಲ್ಲಾ ಸಂಸ್ಥೆ ಕೊಪ್ಪಳ ಹಾಗೂ ಜಿಲ್ಲಾ ಆಡಳಿತ ಕೊಪ್ಪಳ ಜಿಲ್ಲಾ ಕ್ರೀಡಾಂಗಣದಲ್ಲಿ ನಡೆದ 80ನೇ ಸ್ವಾತಂತ್ರ್ಯೋತ್ಸವ ದಿನಾಚರಣೆ ಕಾರ್ಯಕ್ರಮದ ಧ್ವಜಾರೋಹಣವನ್ನು ಶ್ರೀಯುತ ತಂಗಡಗಿ ಶಿವರಾಜ್ ಸಂಗಪ್ಪ, ಮಾನ್ಯ ಮಂತ್ರಿಗಳು ಹಿಂದುಳಿದ ವರ್ಗ ಕಲ್ಯಾಣ ಇಲಾಖೆ ಹಾಗೂ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಕರ್ನಾಟಕ ಸರ್ಕಾರ ಇವರು ನೆರವೇರಿಸಿ ಪಥಸಂಚಲನದಲ್ಲಿ ಭಾಗವಹಿಸಿದ ಮಕ್ಕಳಿಗೆ ಶುಭಾಶಯಗಳು ಕೋರಿ ವಿವಿಧ ಶಾಲೆಗಳಿಂದ ಆಗಮಿಸಿದ ಸ್ಕೌಟ್ಸ್–ಗೈಡ್ಸ್‌ಗಳಿಗೆ ಪಾರಿತೋಷಕ ಮತ್ತು ಪ್ರಶಸ್ತಿ ಪತ್ರಗಳನ್ನು ನೀಡಿದರು. ಈ



ಸಮಾರಂಭದಲ್ಲಿ ಡಾಕ್ಟರ್ ಸುರೇಶ್ ಬಿ. ಹಿಟ್ನಾಳ್, ಜಿಲ್ಲಾಧಿಕಾರಿಗಳು ಕೊಪ್ಪಳ ಹಾಗೂ ಶ್ರೀ ವರ್ಣಿತ ನೇಗಿ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳ ಜಿಲ್ಲಾ ಪಂಚಾಯತ್ ಕೊಪ್ಪಳ ಡಾ. ರಾಮ ಎಲ್. ಅರಸಿದ್ಧಿ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿಗಳು ಕೊಪ್ಪಳ ಶ್ರೀ ಎ.ಎಸ್. ಅನಂತ್ ಕುಮಾರ್, ಉಪನಿರ್ದೇಶಕರು ಆಡಳಿತ, ಶ್ರೀ ಹೊರಪೇಟೆ, ಕ್ಷೇತ್ರ ಶಿಕ್ಷಣಾಧಿಕಾರಿಗಳು ಕೊಪ್ಪಳ, ಶ್ರೀ ಬಸವರಾಜ್, ಜಿಲ್ಲಾ ದೈಹಿಕ ಶಿಕ್ಷಣ ಪರೀಕ್ಷಕರು ಉಪಸ್ಥಿತರಿದ್ದರು.

* ಸರ್ಕಾರಿ ಪ್ರಥಮ ದರ್ಜೆ ಕಾಲೇಜು ಕೊಪ್ಪಳ. ಇಲ್ಲಿ 80ನೇ ಸ್ವಾತಂತ್ರ್ಯ ದಿನಾಚರಣೆಯನ್ನು ಆಚರಿಸಲಾಯಿತು. ಧ್ವಜಾರೋಹಣವನ್ನು ಕಾಲೇಜಿನ ಪ್ರಾಂಶುಪಾಲರು ನಡೆಸಿಕೊಟ್ಟರು. ಜಿಲ್ಲಾ ಸಂಘಟಿಕರಾದ ಶ್ರೀ ಮಲ್ಲೇಶಪ್ಪ ಕೆ.ಟಿ.ಯವರು ನಿಪುಣ್ ಪರೀಕ್ಷಾ ಶಿಬಿರದ ಬಗ್ಗೆ ರಾಜ್ಯ ಪುರಸ್ಕಾರ ಮತ್ತು ರಾಷ್ಟ್ರಪತಿ ಪುರಸ್ಕಾರದ ಬಗ್ಗೆ ಹಾಗೂ ರಾಜ್ಯ ಸಂಸ್ಥೆಯಿಂದ ಸಂಘಟಿಸುವ ಶಿಬಿರಗಳಲ್ಲಿ ಭಾಗವಹಿಸಲು ತಿಳಿಸಿದರು. ಸ್ವಾಗತವನ್ನು ಕಾಲೇಜಿನ ಆರ್.ಎಸ್.ಎಲ್. ಲೀಡರ್‌ರಾದಂತಹ ಡಾಕ್ಟರ್ ಶ್ರೀ ಮಂಜುನಾಥ್‌ರವರು ನಡೆಸಿಕೊಟ್ಟರು.. ವಂದನೆಯನ್ನು ಶ್ರೀಮತಿ ವಿಜಯಲಕ್ಷ್ಮಿ ರೇಂಜರ್ ಲೀಡರ್ ಇವರು ನಡೆಸಿಕೊಟ್ಟರು. ಸಮಾರಂಭದಲ್ಲಿ ಕಾಲೇಜಿನ ಉಪನ್ಯಾಸಕರು ಹಾಗೂ ರೋವರ್ಸ್–ರೇಂಜರ್ಸ್‌ಗಳು ಭಾಗವಹಿಸಿದ್ದರು.

## ಮಧುಗಿರಿ

* ಜುಲೈ 19 ರಂದು ಟಿ.ನರಸೀಪುರ ತಾಲೂಕಿನ ವತಿಯಿಂದ ಬೆಳಕು ಸೇವಾ ಫೌಂಡೇಶನ್ ಇದರ ಮೂರನೇ ವಾರ್ಷಿಕೋತ್ಸವದ ಅಂಗವಾಗಿ ವಿವಿಧ ಕ್ಷೇತ್ರಗಳಲ್ಲಿ ಸಾಧನೆಗೈದ ಕರ್ನಾಟಕದ ಎಲ್ಲಾ ಜಿಲ್ಲೆಗಳಿಂದ ಪ್ರತಿಭಾನ್ವಿತರನ್ನು ಗುರುತಿಸಿ. ಕರ್ನಾಟಕ ಶ್ರೇಷ್ಠತಾ ಪ್ರಶಸ್ತಿ 2026 ನೀಡಿ ಗೌರವಿಸಲಾಯಿತು. ಈ ಸಂದರ್ಭದಲ್ಲಿ ಶ್ರೀಮತಿ ಲತಾ ನಾರಾಯಣ್ ಗೈಡ್ ಆಯುಕ್ತರು ಜಿಲ್ಲಾ ಸಂಸ್ಥೆ, ಮಧುಗಿರಿ ಇವರನ್ನು ಸಮಾಜ ಸೇವೆಯ ಕ್ಷೇತ್ರದಲ್ಲಿ ಆಯ್ಕೆ ಮಾಡಿ ಗೌರವ ಅಭಿನಂದನೆಯನ್ನು ಸಲ್ಲಿಸಿರುತ್ತಾರೆ.



* ಜುಲೈ 23 ರಂದು ನಗರದ ಪ್ರವಾಸಿ ಮಂದಿರದಲ್ಲಿ ಮಧುಗಿರಿ ಜಿಲ್ಲೆಯ ಪ್ರಗತಿ ಪರಿಶೀಲನಾ ಸಭೆಯನ್ನು ಆಯೋಜಿಸಲಾಗಿತ್ತು. ಈ ಸಭೆಗೆ ರಾಜ್ಯ ಮುಖ್ಯ ಆಯುಕ್ತರು ಡಾ. ಪಿ.ಜಿ.ಆರ್. ಸಿಂಧ್ಯ ಇವರನ್ನು ಗೌರವ ಪೂರ್ವಕವಾಗಿ ಪೊಲೀಸ್ ಇಲಾಖೆ ವತಿಯಿಂದ ಮಧುಗಿರಿ ಗಡಿ ಭಾಗದಿಂದ ಪ್ರವಾಸಿ ಮಂದಿರಕ್ಕೆ ಕರೆತರಲಾಯಿತು. ಅವರಿಗೆ ಜಿಲ್ಲಾ ಪದಾಧಿಕಾರಿಗಳು ಪ್ರವಾಸಿ





ಮಂದಿರ ದ್ವಾರದಲ್ಲಿ ಪುಷ್ಪಗುಚ್ಛ ನೀಡಿ ಜಿಲ್ಲಾ ಪದಾಧಿಕಾರಿಗಳ ಸಮ್ಮುಖದಲ್ಲಿ ಸಭಾಂಗಣಕ್ಕೆ ಕರೆತರಲಾಯಿತು. ಜಿಲ್ಲಾ ಅಧ್ಯಕ್ಷರು ಹಾಗೂ ಮಾನ್ಯ ಉಪ ವಿಭಾಗಾಧಿಕಾರಿಗಳಾದ ಶ್ರೀ ಗೋಟೂರು ಶಿವಪ್ಪ ಇವರನ್ನು ಹೂಗುಚ್ಛ ನೀಡಿ ಸಭೆಗೆ ಕರೆತರಲಾಯಿತು. ಈ ಸಭೆಯಲ್ಲಿ ಸನ್ಮಾನ್ಯ ಮಾಜಿ ಸಹಕಾರ ಸಚಿವರು, ಶಾಸಕರು, ಶ್ರೀ ಕೆ.ಎನ್. ರಾಜಣ್ಣ ಜಿಲ್ಲಾ ಗೌರವಾಧ್ಯಕ್ಷರು. ಮತ್ತು ಜಿಲ್ಲಾ ಮುಖ್ಯ ಆಯುಕ್ತರಾದ ಮಾನ್ಯ ರಾಜೇಂದ್ರ ರಾಜಣ್ಣ ರವರು ವಿಧಾನ ಪರಿಷತ್ ಸದಸ್ಯರು ಕರ್ನಾಟಕ ಸರ್ಕಾರ ಇವರು ಸಭೆಗೆ ಎಲ್ಲರೂ ಆಗಮಿಸಲು ಸೂಚನೆ ನೀಡಿದರು. ಮಾನ್ಯ ಉಪ ವಿಭಾಗಾಧಿಕಾರಿಗಳು ಶ್ರೀ ಗೊಟೂರು ಶಿವಪ್ಪ ಕಾರ್ಯಕ್ರಮವನ್ನು ಉದ್ಘಾಟಿಸಿ ಸ್ಕೌಟ್-ಗೈಡ್ ವಿಷಯವಾಗಿ ಮಾತನಾಡಿದರು. ಜಿಲ್ಲಾ ಸಂಸ್ಥೆ ವತಿಯಿಂದ ರಾಜ್ಯ ಮುಖ್ಯ ಆಯುಕ್ತರಿಗೆ ನೆನಪಿನ ಕಾಣಿಕೆಯೊಂದಿಗೆ ಗೌರವ ಸಮರ್ಪಣೆಯನ್ನು ಮಾಡಲಾಯಿತು. ನಂತರ ಕಾರ್ಯಕ್ರಮಕ್ಕೆ ಆಗಮಿಸಿದ ಗಣ್ಯರಿಗೆ ಮತ್ತು ಮುಖ್ಯ ಅತಿಥಿಗಳಿಗೆ ರಾಜ್ಯ ಸಂಸ್ಥೆ ಪದಾಧಿಕಾರಿಗಳಿಗೆ ನೆನಪಿನ ಕಾಣಿಕೆಯೊಂದಿಗೆ ಗೌರವ ಸಮರ್ಪಣೆ ಮಾಡಲಾಯಿತು. ಡಾ. ಪಿ.ಜಿ.ಆರ್. ಸಿಂಧ್ಯರವರು ಅಧ್ಯಕ್ಷೀಯ ನುಡಿಗಳನ್ನು ನುಡಿದರು.

* ಜುಲೈ 26 ರಂದು ಕಾರ್ಗಿಲ್ ವಿಜಯೋತ್ಸವದ ದಿನದ ಅಂಗವಾಗಿ ಮಕ್ಕಳು ನಗರದಲ್ಲಿ ಜಾಥಾ ಮಾಡಿ ಮಾನವ ಸರಪಳಿಯನ್ನು ಮಾಡಿ ವಿಜಯ ಘೋಷಣೆ ಕೂಗಿದರು.



* ಜುಲೈ 29 ರಂದು ಮದುಗಿರಿ ಸ್ಕೌಟ್ ಮತ್ತು ಗೈಡ್‌ಗಳು ಅವರವರ ಮನೆಗಳಲ್ಲಿ ಅವರ ತಂದೆ ತಾಯಿಗೆ ಹಿರಿಯರಿಗೆ ನಮಸ್ಕಾರ ಮಾಡಿ ಪೋಷಕರ ದಿನಾಚರಣೆಯನ್ನು ಆಚರಿಸಿರುತ್ತಾರೆ.

* ಜುಲೈ 29 ರಂದು ಮದುಗಿರಿಯ ಕಾರ್ಡಿಯಲ್ ಶಾಲೆಯಲ್ಲಿ ಗುರುಪೂರ್ಣಿಮೆಯ ಅಂಗವಾಗಿ ಕಬ್-ಬುಲ್‌ಬುಲ್‌ಗಳು, ಸ್ಕೌಟ್-ಗೈಡ್ ಶಾಲಾ ಆಡಳಿತ ಮಂಡಳಿ, ಮುಖ್ಯೋಪಾಧ್ಯಾಯರು ಮತ್ತು ಸ್ಕೌಟ್-ಗೈಡ್ ಶಿಕ್ಷಕರಿಗೆ ಹಾಗೂ ಸಿಬ್ಬಂದಿ ವೃಂದದವರಿಗೂ ಸಂಸ್ಥೆಯ ಪರವಾಗಿ ತುಂಬು ಹೃದಯದ ಅಭಿನಂದನೆಯನ್ನು ಸಲ್ಲಿಸಿದರು.

* ಆಗಸ್ಟ್ 01 ರಂದು ಮಧುಗಿರಿಯಲ್ಲಿ ವಿಶ್ವ ಸ್ಕಾರ್ಫ್ ಡೇ ಮತ್ತು ಸ್ಕೌಟಿಂಗ್ ಸೂರ್ಯೋದಯ ದಿನದ ಅಂಗವಾಗಿ ಮಕ್ಕಳಿಗೆ ಸ್ಕಾರ್ಫ್ ಧಾರಣೆ ಮಾಡುವ ಮುಖಾಂತರ ಪ್ರಾಂಶುಪಾಲರಾದ ಶ್ರೀ ಈಶ್ವರಯ್ಯ ಅವರ ನೇತೃತ್ವದಲ್ಲಿ ಹೊಸ ರೇಂಜರ್ ಘಟಕ ಪ್ರಾರಂಭಿಸಲಾಯಿತು. ಸರ್ಕಾರಿ ಜೂನಿಯರ್ ಕಾಲೇಜು ಪ್ರೌಢಶಾಲಾ ವಿಭಾಗ ಸ್ಕೌಟ್-ಗೈಡ್‌ಗಳಿಗೆ ಕಂಠ ವಸ್ತ್ರಧಾರಣೆ ಮಾಡುವ ಮುಖಾಂತರ ಮುಖ್ಯ ಶಿಕ್ಷಕರು ಪ್ರಾಂಶುಪಾಲರಾದ ಶ್ರೀ ರಾಜಣ್ಣ ಇವರ ಮುಖಾಂತರ ಸ್ಕೌಟ್ ಮತ್ತು ಗೈಡ್ ದಳ ರಚನೆ ಮಾಡಲಾಯಿತು.

* ಶ್ರೀ ಮಂಜುನಾಥ ಮತ್ತು ಲಲಿತಮ್ಮ ಇವರ ಮುಖೇನ ಜಿಲ್ಲಾ ಸಂಸ್ಥೆಯ ಕಚೇರಿಯ ಆವರಣದಲ್ಲಿ ಹೊಸದಾಗಿ ಸೇರ್ಪಡೆಗೊಂಡ ವಿದ್ಯಾರ್ಥಿನಿಯರಿಗೆ ಸ್ಕಾರ್ಫ್ ಧಾರಣೆ ಮಾಡುವ ಮುಖಾಂತರ ಸ್ಕೌಟಿಂಗ್ ಸನ್ ರೈಸ್ ಡೇ ಹಾಗೂ ಸ್ಕಾರ್ಫ್ ಡೇ ಆಚರಣೆ ಮಾಡಲಾಯಿತು.

* ಸರ್ಕಾರಿ ಪ್ರಥಮ ದರ್ಜೆ ಕಾಲೇಜು ಮದುಗಿರಿ ಇಲ್ಲಿನ ಪ್ರಾಂಶುಪಾಲರಾದ ಪ್ರೊಫೆಸರ್ ಕುಮಾರ್ ಹಾಗೂ ರೇಂಜರ್ ಶ್ರೀಮತಿ ವೇದಲಕ್ಷ್ಮೀ ಶ್ರೀ ದರ್ಶನ್ ಇವರು ಇವರಿಗೆ ಕಂಠ ವಸ್ತ್ರಧಾರಣೆ ಮಾಡುವ ಮುಖಾಂತರ ಸನ್ ರೈಸ್ ಡೇ ಹಾಗೂ ಸ್ಕಾರ್ಫ್ ಡೇ ಆಚರಣೆ ಮಾಡಲಾಯಿತು.

* ಆಗಸ್ಟ್ 07 ರಂದು ಶಿರಾ ಪ್ರೆಸಿಡೆನ್ಸಿ ಶಾಲಾ ಸ್ಕೌಟ್ ಗೈಡ್‌ಗಳಿಂದ ವಾರಡಿ ರಂಗನಾಥಸ್ವಾಮಿ ಬೆಟ್ಟಕ್ಕೆ ಒಂದು ದಿನದ ಹೈಕ್ ಕಾರ್ಯಕ್ರಮವನ್ನು ನಡೆಸಲಾಯಿತು. ಅಲ್ಲಿ ವನ ವಿದ್ಯಾ ಸಂಕೇತಗಳ ಮೂಲಕ ಕೇಂದ್ರ ಸ್ಥಾನವನ್ನು ತಲುಪಿದ ಸ್ಕೌಟ್-ಗೈಡ್‌ಗಳು ಧ್ವಜಾರೋಹಣವನ್ನು ನೆರವೇರಿಸಿ ದಳಸಭೆ ಚಟುವಟಿಕೆ ಕಾರ್ಯಕ್ರಮಗಳನ್ನು ಪೂರೈಸಿಕೊಂಡು ಸಂಜೆ 6:30ಕ್ಕೆ ಹಿಂದಿರುಗಲಾಯಿತು.

* ಆಗಸ್ಟ್ 08 ರಂದು ಮಧುಗಿರಿ ಶ್ರೀ ರಾಘವೇಂದ್ರ ಇಂಟರ್ನ್ಯಾಷನಲ್ ಸ್ಕೂಲ್ ಕಾಲೇಜ್ ಆವರಣ ಇಲ್ಲಿ ಪ್ರೇರಣ ಕಾರ್ಯಕ್ರಮವನ್ನು ಆಯೋಜಿಸಲಾಗಿತ್ತು. ಕಾರ್ಯಕ್ರಮದ ಅಧ್ಯಕ್ಷತೆಯನ್ನು ಶ್ರೀಮತಿ ಲಕ್ಷ್ಮೀ ಭಟ್ ಪ್ರಾಂಶುಪಾಲರು ರಾಘವೇಂದ್ರ ಇಂಟರ್ ನ್ಯಾಷನಲ್ ಸ್ಕೂಲ್ ಕಾಲೇಜ್ ಇವರು ವಹಿಸಿದ್ದರು. ಶ್ರೀಮತಿ ಲತಾ ನಾರಾಯಣ್, ಜಿಲ್ಲಾ ಆಯುಕ್ತರು (ಗೈಡ್) ಇವರು ಕಾರ್ಯಕ್ರಮವನ್ನು ಉದ್ಘಾಟನೆ ಮಾಡಿ ಆರೋಗ್ಯ ವಿಷಯವಾಗಿ ಹೆಣ್ಣು ಮಕ್ಕಳಿಗೆ ಮಾರ್ಗದರ್ಶನ ನೀಡಿದರು. ಶ್ರೀಮತಿ ಸ್ವರ್ಣಾಂಬಿಕ ಅಡ್ವೋಕೇಟ್, ಮಧುಗಿರಿ ಇವರು ಕಾನೂನು ಸಲಹೆ ಸೂಚನೆಗಳನ್ನು ಮಕ್ಕಳ ಹಕ್ಕು ಮತ್ತು ಪೋಕ್ಸೋ ಕಾಯ್ದೆಯ ನಿಯಮಗಳನ್ನು ಪಾಲಿಸುವ ಬಗ್ಗೆ ಮತ್ತು ಜಾಗರೂಕತೆಯಿಂದ ಇರುವ ಬಗ್ಗೆ ತಿಳಿಸಿದರು. ಶ್ರೀಮತಿ ಸ್ಪಂದನರವರು ಪೊಲೀಸ್ ಇಲಾಖೆಗೆ ಸಂಬಂಧಿಸಿದ ಮತ್ತು ಹೆಣ್ಣು ಮಕ್ಕಳ ಜವಾಬ್ದಾರಿ ಹಾಗೂ ತುರ್ತು ಕರೆಗಳು ಮತ್ತು ಹೆಣ್ಣು ಮಕ್ಕಳಿಗೆ ಸಂಬಂಧಿಸಿದ ಕಾನೂನುಗಳ ಪಾಲನೆ ಮತ್ತು ವೈಯಕ್ತಿಕ ಜಾಗೃತಿ ಜವಾಬ್ದಾರಿಗಳ ಬಗ್ಗೆ ತಿಳಿಸಿದರು.ಮಧ್ಯಾಹ್ನದ ಅವಧಿಯಲ್ಲಿ ಈ ಮಕ್ಕಳಿಗೆ ಗೈಡ್ಸ್ ಚಟುವಟಿಕೆ ಮತ್ತು ರೇಂಜರಿಂಗ್ ಚಟುವಟಿಕೆಗಳ ವಿಷಯಗಳನ್ನು ಹಾಗೂ ರಾಜ್ಯ ಪುರಸ್ಕಾರ ರಾಷ್ಟ್ರಪತಿ ಪದಕ ಪಡೆಯುವ ಮತ್ತು ಕಾರ್ಯ ಚಟುವಟಿಗಳ ಬಗ್ಗೆ ಮಾಹಿತಿ ನೀಡಲಾಯಿತು. ನಂತರ ಕಾರ್ಯಕ್ರಮ ನಡೆಸಿಕೊಟ್ಟಂತ ಗಣ್ಯರಿಗೆ ಗೌರವ ಸನ್ಮಾನವನ್ನು ನೆನಪಿನ ಕಾಣಿಕೆಯೊಂದಿಗೆ ಜಿಲ್ಲಾ ಸಂಸ್ಥೆಯ ವತಿಯಿಂದ ಮಾಡಲಾಯಿತು. ಶ್ರೀ ಮುರುಳಿ ಕಾರ್ಯಕ್ರಮ ನಿರೂಪಿಸಿದರು. ಶ್ರೀ ಕರಿಸಿದ್ದಪ್ಪ ಟಿ. ಎ.ಎಸ್.ಓ.ಸಿ. ಕಾರ್ಯಕ್ರಮ ಸಂಘಟಿಸಿದರು.



* ಆಗಸ್ಟ್ 10 ರಂದು ಹೊಳವನಹಳ್ಳಿ ಕೊರಟಗೆರೆ ತಾಲೂಕಿನ ಕೆಪಿಎಸ್. ಹಿರಿಯ ಪ್ರಾಥಮಿಕ ಶಾಲೆ ಹಾಗೂ ಪದವಿ ಪೂರ್ವ ಕಾಲೇಜ್ ಇಲ್ಲಿ ರಾಷ್ಟ್ರೀಯ ನಶೆ ಮುಕ್ತ ಕಾರ್ಯಕ್ರಮದ ಅಂಗವಾಗಿ ಈ ದುಶ್ಚಟಗಳಿಂದ ದೂರ ಇರುವ ಬಗ್ಗೆ ಇಂಥ ಮಾದಕ ವಸ್ತುಗಳನ್ನು ಬಳಸದೆ ಇರುವ ಬಗ್ಗೆ ಪ್ರಾಂಶುಪಾಲರಾದ ಶ್ರೀಯುತ ಲಾಲಾ ನಾಯಕ್ ಮಾತನಾಡಿದರು ಶ್ರೀಯುತ ನಾಗರಾಜ್ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದರು ಸಂಪನ್ಮೂಲ ವ್ಯಕ್ತಿಗಳಾಗಿ ಶ್ರೀಮತಿ ಲಲಿತಮ್ಮ ಹಿರಿಯ ಗೈಡ್ ಕ್ಯಾಪ್ಟನ್ ಶ್ರೀ ಕರಿಸಿದ್ದಪ್ಪ ಎ.ಎಸ್.ಓ.ಸಿ. ಹಾಗೂ ಶ್ರೀಮತಿ ಶಾಂತಕುಮಾರಿ ಶ್ರೀಮತಿ ಆಶಾ ರಾಣಿ ಶ್ರೀ ದೊಡ್ಡಯ್ಯ ಇತರೆ ಅಧಿಕಾರಿಗಳು ಉಪಸ್ಥಿತರಿದ್ದರು. ಈ ಕಾರ್ಯಕ್ರಮದಲ್ಲಿ 380 ಶಾಲಾ ವಿದ್ಯಾರ್ಥಿಗಳು ಹಾಗೂ 40 ಸ್ಕೌಟ್-ಗೈಡ್ಸ್‌ಗಳು ಪಾಲ್ಗೊಂಡಿದ್ದರು.

## ಮೈಸೂರು

ಮೈಸೂರು ಜಿಲ್ಲಾ ಸಂಸ್ಥೆ ವತಿಯಿಂದ ಸ್ಕೌಟ್ ಮಾಸ್ಟರ್ / ಗೈಡ್ ಕ್ಯಾಪ್ಟನ್ / ಫ್ಲಾಕ್ ಲೀಡರ್ / ಕಬ್ ಮಾಸ್ಟರ್‌ರವರ ಮೂಲ ತರಬೇತಿ ಶಿಬಿರವನ್ನು ಜುಲೈ 20 ರಿಂದ 26ರ ವರಗೆ (7 ದಿನಗಳು) ಶ್ರೀ ಕಾವೇರಿ ಬೋರೇದೇವರ ದೇವಸ್ಥಾನ, ಮಂಡ್ಯ ಕೊಪ್ಪಲು, ಶ್ರೀರಂಗಪಟ್ಟಣ ತಾ. ಮಂಡ್ಯ ಜಿಲ್ಲೆ ಇಲ್ಲಿ ಆಯೋಜಿಸಲಾಗಿತ್ತು. ಈ ಶಿಬಿರದಲ್ಲಿ 53 ಮಂದಿ ಶಿಕ್ಷಕ ಶಿಕ್ಷಕಿಯರು ಭಾಗವಹಿಸಿದ್ದರು. ಸ್ಕೌಟ್ ವಿಭಾಗಕ್ಕೆ 22, ಕಬ್ ವಿಭಾಗಕ್ಕೆ 09, ಬುಲ್‌ಬುಲ್ ವಿಭಾಗಕ್ಕೆ 10 ಮತ್ತು ಗೈಡ್ ವಿಭಾಗಕ್ಕೆ 13 ಮಂದಿ ಶಿಕ್ಷಕರು ಭಾಗವಹಿಸಿದ್ದರು. ಶ್ರೀಮತಿ ಅಮೃತಮ್ಮ ಕಬ್ ವಿಭಾಗಕ್ಕೆ, ಶ್ರೀಮತಿ ಶಶಿಕಲಾ ಬುಲ್‌ಬುಲ್ ವಿಭಾಗಕ್ಕೆ, ಶ್ರೀಮತಿ ರಾಧಿಕಾ ಗೈಡ್ ವಿಭಾಗಕ್ಕೆ ಮತ್ತು ಶ್ರೀ ಎಂ.ಆರ್. ಶ್ರೀರಾಮ್ ಸ್ಕೌಟ್ ವಿಭಾಗಕ್ಕೆ ನಾಯಕರುಗಳಾಗಿದ್ದರು. ಶ್ರೀ ಗಜೇಂದ್ರಬಾಬು HWB, ಕಬ್ ವಿಭಾಗಕ್ಕೆ, ಶ್ರೀಮತಿ ಭಾಗ್ಯಲಕ್ಷ್ಮಿ ಬುಲ್‌ಬುಲ್ ವಿಭಾಗಕ್ಕೆ, ಶ್ರೀಮತಿ ಚಪ್ಪರಮನಿ ALT(G), ಶ್ರೀಮತಿ ರಾಜೇಶ್ವರಿ HWB(G), ಶ್ರೀಮತಿ ಆಶಾ HWB(G), ಗೈಡ್ ವಿಭಾಗಕ್ಕೆ. ಶ್ರೀ ಟಿ.ಎಸ್. ಮೋಹನ್ ಕುಮಾರ್ ALT(S) ಶ್ರೀ ಶಶಿಧರ್ HWB(S) ಶ್ರೀ ರಾಘವೇಂದ್ರಂ LT(R) ಶ್ರೀ ಅಜಯ್ ಕುಮಾರ್ ಜೈನ್‌ಂ LT(S)ರವರು ಸ್ಕೌಟ್ ವಿಭಾಗಕ್ಕೆ ಸಹಾಯಕರಾಗಿ ಕಾರ್ಯನಿರ್ವಹಿಸಿದರು. ಶ್ರೀ ಕೆ.ಜಿ. ಗೋಪಾಲ ಕೃಷ್ಣ ಜಿಲ್ಲಾ ತರಬೇತಿ ಆಯುಕ್ತರು (ಸ್ಕೌಟ್),ಶ್ರೀ ಎಂ ವಿ ಅಮರ್ ನಾಥ್ ಜಿಲ್ಲಾ ಸ್ಥಾನಿಕ ಆಯುಕ್ತರು ಸಂಪನ್ಮೂಲ ವ್ಯಕ್ತಿಗಳಾಗಿ ಆಗಮಿಸಿದ್ದರು.



* ಜುಲೈ 20 ರಂದು ಸಂಜೆ 04.00 ಗಂಟೆಗೆ ಶ್ರೀ ಪಿ.ವಿಶ್ವನಾಥ್, ಜಿಲ್ಲಾ ಮುಖ್ಯ ಆಯುಕ್ತರು ಶಿಬಿರವನ್ನು ಉದ್ಘಾಟಿಸಿದರು. ಡಾ. ಕೆ.ಬಿ. ಗುರುಮೂರ್ತಿ, ಜಿಲ್ಲಾ ಖಜಾಂಚಿಗಳು ಮುಖ್ಯ ಅತಿಥಿಗಳಾಗಿದ್ದರು. ಕಾರ್ಯಕ್ರಮದಲ್ಲಿ, ಶ್ರೀ ರಾಜು ಎಂ., ಜಿಲ್ಲಾ ಸ್ಕೌಟ್ ಆಯುಕ್ತರು, ಶ್ರೀ ಎಸ್. ಶಿವಲಿಂಗಯ್ಯ, ಜಿಲ್ಲಾ ಕಾರ್ಯದರ್ಶಿಗಳು ಹಾಗೂ ಜಿಲ್ಲಾ ಸಂಸ್ಥೆ ಪದಾಧಿಕಾರಿಗಳು ಉಪಸ್ಥಿತರಿದ್ದರು. ಶಿಬಿರದ ಸಮಾರೋಪ ಸಮಾರಂಭವು ದಿನಾಂಕ 24 ಜುಲೈ 2026ರಂದು ಸಂಜೆ 4 ಗಂಟೆಗೆ ನಡೆಯಿತು. ಶ್ರೀ ಪಿ.ಜಿ.ಆರ್. ಸಿಂಧ್ಯಾ, ರಾಜ್ಯ ಮುಖ್ಯ ಆಯುಕ್ತರು. ಶ್ರೀಮತಿ ವಿಜಯಲಕ್ಷ್ಮೀ ಬಂಡಿಸಿದ್ದೇಗೌಡ ಮಾಜಿ ಶಾಸಕರು, ಶ್ರೀರಂಗಪಟ್ಟಣ ಕ್ಷೇತ್ರರವರು, ಡಾ. ಕೆ.ಬಿ. ಗುರುಮೂರ್ತಿ, ಜಿಲ್ಲಾ ಖಜಾಂಚಿಗಳು ಮುಖ್ಯ ಅತಿಥಿಗಳಾಗಿ ಆಗಮಿಸಿದ್ದರು ಶ್ರೀ ಪಿ. ವಿಶ್ವನಾಥ್, ಜಿಲ್ಲಾ ಮುಖ್ಯ ಆಯುಕ್ತರು ಕಾರ್ಯಕ್ರಮದ ಅಧ್ಯಕ್ಷತೆಯನ್ನು ವಹಿಸಿದ್ದರು. ಶ್ರೀ ವರಪ್ರಸಾದ್, ಮಂಡ್ಯ ಜಿಲ್ಲೆಯ ಹಿಂದಿನ ಜಿಲ್ಲಾ ಮುಖ್ಯ ಆಯುಕ್ತರು, ಶ್ರೀ ರಾಜು ಎಂ., ಜಿಲ್ಲಾ ಸ್ಕೌಟ್ ಆಯುಕ್ತರು, ಶ್ರೀ ಎಸ್. ಶಿವಲಿಂಗಯ್ಯ, ಜಿಲ್ಲಾ ಕಾರ್ಯದರ್ಶಿಗಳು ಹಾಗೂ ಜಿಲ್ಲಾ ಸಂಸ್ಥೆ ಪದಾಧಿಕಾರಿಗಳು ಕಾರ್ಯಕ್ರಮದಲ್ಲಿ ಉಪಸ್ಥಿತರಿದ್ದರು.

* ವಿಶ್ವ ಸ್ಕಾರ್ಫ್ ದಿನಾಚರಣೆಯನ್ನು ಮೈಸೂರು ಉತ್ತರ ವಲಯದ ಕೆ.ಪಿ. ಶಾಲೆಯಲ್ಲಿ ಆಚರಿಸಲಾಯಿತು. ಶ್ರೀ ಅಜಯ್ ಕುಮಾರ್ ಜೈನ್ ಸ್ಕಾರ್ಫ್ ದಿನಾಚರಣೆಯ ಮಹತ್ವವನ್ನು ತಿಳಿಸಿದರು. ಶ್ರೀ ಪಿ. ವಿಶ್ವನಾಥ್, ಜಿಲ್ಲಾ ಮುಖ್ಯ ಆಯುಕ್ತರು ಸ್ಕೌಟ್ ಮತ್ತು ಗೈಡ್ ಪ್ರತಿಜ್ಞೆಯನ್ನು ಬೋಧಿಸಿದರು. ಕಾರ್ಯಕ್ರಮದಲ್ಲಿ ಮೈಸೂರು ಉತ್ತರ ವಲಯದ ಕ್ಷೇತ್ರ ಶಿಕ್ಷಣಾಧಿಕಾರಿ ಶ್ರೀ ಸುರೇಶ್, ಜಿಲ್ಲಾ ಸ್ಕೌಟ್ ಆಯುಕ್ತರಾದ ಶ್ರೀ ರಾಜು, ಜಿಲ್ಲಾ ಕಾರ್ಯದರ್ಶಿಗಳಾದ ಶ್ರೀ ಎಸ್. ಶಿವಲಿಂಗಯ್ಯ, ಮೈಸೂರು ಉತ್ತರ ವಲಯದ ಅಧ್ಯಕ್ಷರಾದ ಶ್ರೀ ಶ್ರೀಶೈಲ ರಾಮಣ್ಣನವರು ಉತ್ತರ ವಲಯ ಸ್ಥಳೀಯ ಸಂಸ್ಥೆಯ ಪದಾಧಿಕಾರಿಗಳು, ಮೈಸೂರು ಜಿಲ್ಲಾ ಸಂಸ್ಥೆಯ ಪದಾಧಿಕಾರಿಗಳು ಹಾಗು ಸ್ಕೌಟರ್ ಮತ್ತು ಗೈಡರ್‌ಗಳು ಭಾಗವಹಿಸಿದ್ದರು. ಶ್ರೀಮತಿ ರತ್ನ, ಉತ್ತರ ವಲಯದ ಕಾರ್ಯದರ್ಶಿಗಳು ಹಾಗೂ ಶ್ರೀ ರಾಮಪ್ರಸಾದ್, ಜಿಲ್ಲಾ ಸಂಘಟಕರು ಕಾರ್ಯಕ್ರಮದ ನಿರೂಪಣೆಯನ್ನು ಮಾಡಿದರು.



* ಜುಲೈ 13 ರಂದು ಮೈಸೂರು ಜಿಲ್ಲಾ ಸಂಸ್ಥೆಯಲ್ಲಿ HWB, ALT ಮತ್ತು LTಗಳ ಸಭೆ ನಡೆಯಿತು. ಶ್ರೀ ಶಿವಲಿಂಗಯ್ಯ, ಜಿಲ್ಲಾ ಕಾರ್ಯದರ್ಶಿಗಳು ಸಭೆಯ ಅಧ್ಯಕ್ಷತೆಯನ್ನು ವಹಿಸಿದ್ದರು. ಜಿಲ್ಲಾ ಸ್ಕೌಟ್, ಕಬ್-ಬುಲ್‌ಬುಲ್, ವಯಸ್ಕ ಸಂಪನ್ಮೂಲ ಆಯುಕ್ತರುಗಳು ಜಿಲ್ಲಾ ಗೈಡ್ ತರಬೇತಿ ಆಯುಕ್ತರು ಜಿಲ್ಲಾ ಜಂಟಿ ಕಾರ್ಯದರ್ಶಿಗಳು ಹಾಗೂ ಜಿಲ್ಲಾ ಪದಾಧಿಕಾರಿಗಳು ಈ ಸಭೆಯಲ್ಲಿ ಉಪಸ್ಥಿತರಿದ್ದರು. ಸಭೆಯಲ್ಲಿ ದಿನಾಂಕ 20 ರಿಂದ 26 ಜುಲೈ 2026 ರ ವರೆಗೆ ನಡೆಯಲಿರುವ ಮೂಲ ತರಬೇತಿ ಶಿಬಿರದ ಬಗ್ಗೆ ಚರ್ಚೆ ಮಾಡಲಾಯಿತು. ಸುಮಾರು 35 ಮಂದಿ HWB ಹಾಗೂ ALT ಮತ್ತು LT ನಾಯಕರುಗಳು ಭಾಗವಹಿಸಿದ್ದರು.




* ಜಿಲ್ಲಾ ಸಂಸ್ಥೆ ವತಿಯಿಂದ ಪ್ರಥಮ ದರ್ಜೆ ಕಾಲೇಜುಗಳ ರೇಂಜರ್ ವಿದ್ಯಾರ್ಥಿನಿಯರಿಗಾಗಿ ವಿದ್ಯಾವರ್ಧಕ ಪ್ರಥಮ ದರ್ಜೆ ಕಾಲೇಜಿನಲ್ಲಿ ಪ್ರೇರಣಾ ಶಿಬಿರವನ್ನು ಆಯೋಜಿಸಲಾಗಿತ್ತು. ಈ ಶಿಬಿರದಲ್ಲಿ 121 ರೇಂಜರ್ಸ್ ಭಾಗವಹಿಸಿದ್ದರು. ಶ್ರೀಮತಿ ರಾಧಿಕಾ LT(G)ರವರು ನಾಯಕಿಯಾಗಿ

ಕಾರ್ಯನಿರ್ವಹಿಸಿದರು ಶ್ರೀಮತಿ ಶಶಿರೇಖಾ **ALT(RA)**, ಶ್ರೀಮತಿ ಮೀನಾಕ್ಷಿ **HWB(RA)** ರವರು ಸಂಪನ್ಮೂಲ ವ್ಯಕ್ತಿಗಳಾಗಿ ಕಾರ್ಯ ನಿರ್ವಹಿಸಿದರು.

* ಆಗಸ್ಟ್ 18 ರಂದು ಬೆಳಗ್ಗೆ 11 ಗಂಟೆಗೆ ಪ್ರೇರಣಾ ಶಿಬಿರದ ಉಧ್ಘಾಟನಾ ಕಾರ್ಯಕ್ರಮ ನಡೆಯಿತು. ಶ್ರೀಮತಿ ಆರ್. ಪುಷ್ಪವಲ್ಲಿ, ಜಿಲ್ಲಾ ಗೈಡ್ ಆಯುಕ್ತರು ಸ್ವಾಗತ ಭಾಷಣ ಮಾಡಿ ಪ್ರೇರಣಾ ಕಾರ್ಯಕ್ರಮದ ಉದ್ದೇಶ ಮತ್ತು ವಿವರಗಳನ್ನು ತಿಳಿಸಿದರು. ಡಾ. ಪಿ.ಜಿ.ಆರ್. ಸಿಂಧ್ಯಾ, ರಾಜ್ಯ ಮುಖ್ಯ ಆಯುಕ್ತರು, ರಾಜ್ಯ ಸಂಸ್ಥೆ, ಕರ್ನಾಟಕ ಇವರು ಕಾರ್ಯಕ್ರಮವನ್ನು ಉದ್ಘಾಟಿಸಿ ಪ್ರೇರಣಾ ಕಾರ್ಯಕ್ರಮದ ಬಗ್ಗೆ ತಿಳಿಸಿ ಸ್ಕೌಟಿಂಗ್ ಮತ್ತು ಗೈಡಿಂಗ್ ಇತಿಹಾಸದ ಬಗ್ಗೆ ಮಕ್ಕಳಿಗೆ ಮಾಹಿತಿ ನೀಡಿದರು. ಮುಖ್ಯ ಅತಿಥಿಗಳಾಗಿ ಆಗಮಿಸಿದ್ದ ಶ್ರೀ ಬಿ.ಕೆ. ಬಸವರಾಜ, ಸಹಾಯಕ ರಾಜ್ಯ ಆಯುಕ್ತರು ಪ್ರೇರಣಾ ಶಿಬಿರದ ಬಗ್ಗೆ ಮಾತನಾಡುತ್ತ ಮಕ್ಕಳು ಉತ್ಸಾಹದಿಂದ ಭಾಗವಹಿಸಬೇಕು ಎಂದು ತಿಳಿಸಿದರು. ಮತ್ತೊಬ್ಬ ಮುಖ್ಯ ಅತಿಥಿಗಳಾದ ಡಾ. ಭಾಮಿಶಣೈ ಗ್ರಾಹಕರ ಪರಿಷತ್, ಮೈಸೂರು ಇವರು ಮಾತನಾಡಿ ಮಕ್ಕಳಿಗೆ ಸ್ವಚ್ಛತೆಯ ಬಗ್ಗೆ ತಿಳುವಳಿಕೆಯನ್ನು ನೀಡಿ ಮೈಸೂರು ನಗರವನ್ನು ಸ್ವಚ್ಛ ನಗರವನ್ನಾಗಿ ಮಾಡುವ ಬಗ್ಗೆ ಮಾಹಿತಿಯನ್ನು ನೀಡಿದರು. ಸಭೆಯ ಅಧ್ಯಕ್ಷತೆ ವಹಿಸಿದ್ದ ಶ್ರೀ ಪಿ. ವಿಶ್ವನಾಥ್, ಜಿಲ್ಲಾ ಮುಖ್ಯ ಆಯುಕ್ತರು ಪ್ರೇರಣಾ ಕಾರ್ಯಕ್ರಮದಲ್ಲಿ ಚರ್ಚಿಸುವ ವಿಷಯಗಳು ಮತ್ತು ಸಂಪನ್ಮೂಲ ವ್ಯಕ್ತಿಗಳ ಬಗ್ಗೆ ತಿಳಿಸಿ ಈ ಕಾರ್ಯಕ್ರಮದಲ್ಲಿ ಮಕ್ಕಳು ಭಾಗವಹಿಸಿ ಸಂಪನ್ಮೂಲ ವ್ಯಕ್ತಿಗಳು ನೀಡುವ ಮಾಹಿತಿಯನ್ನು ಪಡೆದುಕೊಳ್ಳಬೇಕಾಗಿ ತಿಳಿಸಿದರು. ಕಾರ್ಯಕ್ರಮದಲ್ಲಿ ಶ್ರೀ ಎಸ್. ಶಿವಲಿಂಗಯ್ಯ, ಜಿಲ್ಲಾ ಕಾರ್ಯದರ್ಶಿಗಳು ಡಾ. ಕೆ.ಬಿ. ಗುರುಮೂರ್ತಿ, ಜಿಲ್ಲಾ ಖಜಾಂಚಿಗಳು, ಶ್ರೀ ಎಂ. ರಾಜು, ಜಿಲ್ಲಾ ಸ್ಕೌಟ್ ಆಯುಕ್ತರು ಶ್ರೀ ಎಂ.ಎನ್. ಸುರೇಶ್ ಕುಮಾರ್, ಜಿಲ್ಲಾ ರೋವರ್ ಆಯುಕ್ತರು, ಶ್ರೀ ಬಿ.ಕೆ. ಅಜಯ್ ಕುಮಾರ್ ಜೈನ್, ಜಿಲ್ಲಾ ಆಯುಕ್ತರು (ವ.ಸಂ), ಶ್ರೀಮತಿ ಶಶಿಕಲಾ, ಜಿಲ್ಲಾ ಆಯುಕ್ತರು (ಬುಲ್‌ಬುಲ್), ಶ್ರೀ ಹೆಚ್.ಎನ್. ಉಮೇಶ್, ಜಿಲ್ಲಾ ಸ್ಥಾನಿಕ ಆಯುಕ್ತರು (ಸ್ಕೌಟ್) ಶ್ರೀಮತಿ ಮನೋಹರ ಪ್ರಭ, ಜಿಲ್ಲಾ ತರಬೇತಿ ಆಯುಕ್ತರು (ಗೈಡ್), ಶ್ರೀ ಮರಿಗೌಡ, ಪ್ರಾಂಶುಪಾಲರು, ವಿದ್ಯಾವರ್ಧಕ ಪ್ರಥಮ ದರ್ಜೆ ಕಾಲೇಜು, ಮೈಸೂರು ಹಾಗೂ ಜಿಲ್ಲಾ ಸಂಸ್ಥೆ ಪದಾಧಿಕಾರಿಗಳು ಉಪಸ್ಥಿತರಿದ್ದರು. ಶ್ರೀಮತಿ ಉಮಾಮಣಿ, ಜಂಟಿ ಕಾರ್ಯದರ್ಶಿಗಳು ವಂದನಾರ್ಪಣೆ ಮಾಡಿದರು.

ಈ ಪ್ರೇರಣಾ ಕಾರ್ಯಕ್ರಮದಲ್ಲಿ ಪ್ರೇಮ ವಿವಾಹ ಮತ್ತು ನಿಶ್ಚಿತ ವಿವಾಹಗಳು ಹಾಗೂ ಕಾನೂನು ಸೌಲಭ್ಯಗಳು ಈ ವಿಷಯದ ಬಗ್ಗೆ ಡಾ. ಶ್ರೀದೇವಿ ಕೃಷ್ಣ, ವಿದ್ಯಾವರ್ಧಕ ಕಾನೂನು ಕಾಲೇಜು, ಮೈಸೂರು ಇವರು ಮಕ್ಕಳಿಗೆ ತಿಳಿಸಿದರು. ಸಾಧಕ ಮಹಿಳೆ ವಿಷಯದ ಬಗ್ಗೆ ಶ್ರೀಮತಿ ಶಾಲಿನಿ ನಲ್ವಾಡ್ ಇವರು **Founder & Chairperson ICATT Air Ambulance Services** ರವರು ತಮ್ಮ ಸಾಧನೆಗಳ ಬಗ್ಗೆ ಮಕ್ಕಳಿಗೆ ತಿಳಿಸಿದರು ಹಾಗೂ **CPR** ಮಾಡುವ ವಿಧಾನವನ್ನು ಮಕ್ಕಳಿಗೆ ತಿಳುವಳಿಕೆ ನೀಡಿದರು. ಆಪ್ತ ಸಲಹೆ ಕಾರ್ಯಕ್ರಮದಲ್ಲಿ ಡಾ. ಗೌರಿ, ಡಾ. ಗೌರಿ, ಸ್ತ್ರೀರೋಗ ತಜ್ಞರು, ಆಶ್ವಿನಿ ನರ್ಸಿಂಗ್ ಹೋಂ, ಮೈಸೂರು ಇವರು ಮಕ್ಕಳಿಗೆ 1) ಹೆಣ್ಣು ಮಕ್ಕಳ ಋತು ಚಕ್ರದ ಸಮಸ್ಯೆಗಳ ಬಗ್ಗೆ ಮಾಹಿತಿ 2) ಸಾಮಾನ್ಯ ರೋಗಗಳು ಮತ್ತು ನ್ಯೂನತೆಗಳು, 3) ಮಾನಸಿಕ ಅಸ್ವಸ್ಥತೆ 4) ಯೋಗ, ಆಯುರ್ವೇದ, ಪ್ರಕೃತಿ ಚಿಕಿತ್ಸೆಯ ಬಗ್ಗೆ ಮಾಹಿತಿಯನ್ನು ನೀಡಿದರು ಹಾಗೂ ಮಕ್ಕಳೊಂದಿಗೆ ಪ್ರಶ್ನೋತ್ತರ ಕಾರ್ಯಕ್ರಮದಲ್ಲಿ ಭಾಗವಹಿಸಿದ್ದರು.

ಯುವ ಧ್ವನಿ ಕಾರ್ಯಕ್ರಮದಲ್ಲಿ ಡಾ. ರವೀಶ್, ಮನೋಶಾಸ್ತ್ರ ತಜ್ಞರು, ಕೆ.ಆರ್. ಆಸ್ಪತ್ರೆ, ಮೈಸೂರು ಇವರು (1) ಮೊಬೈಲ್ ಬೇಕು! ಅವಶ್ಯಕ ಸಂಪರ್ಕಕ್ಕೆ ಬೇಕು ಅದರಲ್ಲಿ ಸದಾ ಹರಟೆ ಹೊಡೆಯುವುದು, ಗೇಮ್ ಆಡುವುದು ಒಳ್ಳೆಯದಲ್ಲ. (2) ಕೆಟ್ಟ ಆಕರ್ಷಣೆಗಳಾದ ಲಿಂಗ, ಧೂಮಪಾನ, ಮಾದಕ ದ್ರವ್ಯ ಸೇವನೆ, ವಿಡಿಯೋ ಗೇಮ್ಸ್ ಇತ್ಯಾದಿ ವ್ಯಸನಗಳಿಗೆ ಒಳಗಾಗಬಾರದು. ಏಕೆ? ನಿರ್ವಹಣಾ ಕ್ರಮಗಳೇನು? (3) ಅವರು ದೇಶದ ಸೇವೆ ಮಾಡುತ್ತಿದ್ದಾರಾ? ಯಾವ ಯಾವ ರೀತಿಯಲ್ಲಿ ಮಾಡುತ್ತಿದ್ದಾರೆ? ಚರ್ಚಿಸಿ ತೀರ್ಮಾನಿಸುವುದು. (4) “ನಮ್ಮ ಆರೋಗ್ಯಕ್ಕೆ ನಾವೇ ಜವಾಬ್ದಾರರು” ಒಪ್ಪುತ್ತಾರಾ? ಚರ್ಚಿಸಿ ದೃಡೀಕರಿಸುವುದು. (5) ಕೋಪ, ಹಠ, ದ್ವೇಷ, ಹೊಟ್ಟೆಕಿಚ್ಚು ಚಿಕ್ಕ ವಯಸ್ಸಿನಿಂದಲೇ ತಿದ್ದುಕೊಳ್ಳಬೇಕು? ಮುಂದೆ ಬದುಕು ಚನ್ನಾಗಿರುತ್ತದೆ, ಚರ್ಚೆ ಮತ್ತು ತೀರ್ಮಾನ (6) ಶಿಕ್ಷಣ ಎಲ್ಲರಿಗೂ ಬೇಕು. ಏಕೆ ಬೇಕು? ಚರ್ಚಿಸಿ, ಸಾದಿಸುವ ಕ್ರಮದ ಬಗ್ಗೆ ಮಕ್ಕಳೊಂದಿಗೆ ಸಂವಾದವನ್ನು ಮಾಡಿ ಮಕ್ಕಳಿಗೆ ಈ ವಿಷಯದ ಬಗ್ಗೆ ಮಾಹಿತಿಯನ್ನು ನೀಡಿದರು.

ಶ್ರೀಮತಿ ಮಲ್ಲೇಶ್ವರಿ ಜುಜಾರೆ, ರೇಂಜರ್ ವಿಭಾಗದ ಮುಖ್ಯಸ್ಥರು ಇವರು ಶಿಬಿರದಲ್ಲಿ ರೇಂಜರ್ಸ್‌ಗಳಿಗೆ ರೇಂಜರ್ ಪ್ರತಿಜ್ಞೆ ಮತ್ತು ನಿಯಮ ಬಗ್ಗೆ ತಿಳುವಳಿಕೆ ನೀಡಿದರು. ಮಕ್ಕಳಿಗೆ ರಸಪ್ರಶ್ನೆ ಕಾರ್ಯಕ್ರಮವನ್ನು ನಡೆಸಿಕೊಟ್ಟರು. ಶಿಬಿರದ ಸಮಾರೋಪ ಸಮಾರಂಭ ಆಗಸ್ಟ್ 19 ರಂದು ಸಂಜೆ 5 ಗಂಟೆಗೆ ನಡೆಯಿತು ಸಮಾರೋಪ ಸಮಾರಂಭಕ್ಕೆ ಮುಖ್ಯ ಅತಿಥಿಗಳಾಗಿ ಆಗಮಿಸಿದ್ದ ಡಾ. ಪ್ರತಿಮಾ ಡಿ.ಎಸ್.,, ಜಂಟಿ ನಿರ್ದೇಶಕರು ಕಾಲೇಜು ಶಿಕ್ಷಣ ಇಲಾಖೆ ಪ್ರಾದೇಶಿಕ ಕಚೇರಿ ಮೈಸೂರು ಇವರು ಹೆಣ್ಣು ಮಕ್ಕಳಲ್ಲಿ ಆತ್ಮಸ್ಥೈರ್ಯ ಹೆಚ್ಚಿಸುವಂತಹ ಈ ಕಾರ್ಯಕ್ರಮಗಳು ಅತಿ ಅವಶ್ಯಕವಾಗಿದ್ದು, ತಾವುಗಳು ಈ ಕಾರ್ಯಕ್ರಮದಲ್ಲಿ ಕಲಿತ ಅನೇಕ ಉಪಯುಕ್ತ ಮಾಹಿತಿಗಳನ್ನು ತಮ್ಮ ಜೀವನದಲ್ಲಿ ಅಳವಡಿಸಿಕೊಳ್ಳಬೇಕೆಂದು ತಿಳಿಸಿದರು. ಈ ಸಂದರ್ಭದಲ್ಲಿ ಮಾತನಾಡಿದ ಶ್ರೀಮತಿ ಮಲ್ಲೇಶ್ವರಿ ಜುಜಾರೆ, ರಾಜ್ಯ ರೆಂಜರ್ ವಿಭಾಗದ ಮುಖ್ಯಸ್ಥರು, ಭಾರತ ಸ್ಕೌಟ್ಸ್ ಮತ್ತು ಗೈಡ್ಸ್ ಕರ್ನಾಟಕ ಇವರು ಮೈಸೂರು ಜಿಲ್ಲೆಯಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ಪ್ರಥಮ ದರ್ಜೆ ಕಾಲೇಜುಗಳು ಕಾರ್ಯನಿರ್ವಹಿಸುತ್ತಿದ್ದು. ಈ ಕಾಲೇಜುಗಳಲ್ಲಿ ರೋವರ್ಸ್ ಮತ್ತು ರೇಂಜಸ್ ಘಟಕಗಳನ್ನು ಪ್ರಾರಂಭಿಸಲು ಕಾಲೇಜಿನ ಉಪನ್ಯಾಸಕರುಗಳಿಗೆ ತರಬೇತಿಯ ಅವಶ್ಯಕತೆ ಇರುತ್ತದೆ. ರಾಜ್ಯ ಸಂಸ್ಥೆಯಿಂದ ಉಪನ್ಯಾಸಕರುಗಳಿಗೆ ಮೂಲ ತರಬೇತಿ ಶಿಬಿರವನ್ನು ಆಯೋಜಿಸಲಿದ್ದು, ಈ ತರಬೇತಿ ಶಿಬಿರಕ್ಕೆ ಉಪನ್ಯಾಸಕರುಗಳನ್ನು ನಿಯೋಜಿಸಿಕೊಡಬೇಕಾಗಿ ಜಂಟಿ ನಿರ್ದೇಶಕರನ್ನು ಕೋರಿದರು. ಶ್ರೀ ಎಸ್. ಶಿವಲಿಂಗಯ್ಯ, ಜಿಲ್ಲಾ ಕಾರ್ಯದರ್ಶಿಗಳು ಸ್ವಾಗತ ಕೋರಿದರು. ಶ್ರೀ ಎಂ. ರಾಜು, ಜಿಲ್ಲಾ ಸ್ಕೌಟ್ ಆಯುಕ್ತರು ವಂದನಾರ್ಪಣೆ ಮಾಡಿದರು. ಶ್ರೀಮತಿ ರಾಧಿಕಾ, ಕಾರ್ಯಕ್ರಮದ ನಿರೂಪಣೆಯನ್ನು ನೆರವೇರಿಸಿದರು ಪ್ರೇರಣಾ ಕಾರ್ಯಕ್ರಮದಲ್ಲಿ ರಸ ಪ್ರಶ್ನೆ ಕಾರ್ಯಕ್ರಮವನ್ನು ಆಯೋಜಿಸಲಾಗಿದ್ದು ಪ್ರಥಮ ಸ್ಥಾನವನ್ನು ಶ್ರೀ ಕೆ. ಪುಟ್ಟಸ್ವಾಮಿ ಪ್ರಥಮ ದರ್ಜೆ ಕಾಲೇಜು ಹಾಗೂ ದ್ವಿತೀಯ ಬಹುಮಾನವನ್ನು ವಿದ್ಯಾವರ್ಧಕ ಪ್ರಥಮ ದರ್ಜೆ ಕಾಲೇಜು ರೇಂಜರ್ ವಿದ್ಯಾರ್ಥಿನಿಯರು ಪಡೆದುಕೊಂಡ ರೇಂಜರ್‌ಗಳಿಗೆ ಡಾ. ಪ್ರತಿಮಾ ಡಿ.ಎಸ್. ಜಂಟಿ ನಿರ್ದೇಶಕರು ಬಹುಮಾನವನ್ನು ವಿತರಿಸಿದರು. ಜಿಲ್ಲಾ ಸಂಸ್ಥೆ ಪದಾಧಿಕಾರಿಗಳು ಕಾರ್ಯಕ್ರಮದಲ್ಲಿ ಭಾಗವಹಿಸಿದ್ದರು.





## ರಾಯಚೂರು

* ಜೂನ್ 18 ರಂದು ಜಿಲ್ಲಾ ಸಂಸ್ಥೆ ರಾಯಚೂರು ವತಿಯಿಂದ. ರಾಯಚೂರು, ಮಾನ್ವಿ, ದೇವದುರ್ಗ ತಾಲೂಕಿನ ಸ್ಕೌಟ್ಸ್ ಮತ್ತು ಗೈಡ್ಸ್ ಮಕ್ಕಳಿಗೆ ರಾಜ್ಯ ಪುರಸ್ಕಾರ ಪರೀಕ್ಷಾ ಪೂರ್ವ ಸಿದ್ಧತಾ ಪರೀಕ್ಷೆ ಹಾಗೂ ತೃತೀಯ ಸೋಪಾನ್ ಪರೀಕ್ಷಾ ಶಿಬಿರವನ್ನು ಜಿಲ್ಲಾ ಸ್ಕೌಟ್ ಭವನ, ರಾಯಚೂರು ಇಲ್ಲಿ ಶ್ರೀ ಬಸವರಾಜ ಬೋರೆಡ್ಡಿ ಜಿಲ್ಲಾ ಮುಖ್ಯ ಆಯುಕ್ತರು ಇವರ ನೇತೃತ್ವದಲ್ಲಿ ಆಯೋಜನೆ ಮಾಡಲಾಯಿತು. ರಾಜ್ಯ ಪುರಸ್ಕಾರ ಪೂರ್ವ ಸಿದ್ಧತಾ ಪರೀಕ್ಷಾ ಶಿಬಿರದ ನಾಯಕರಾಗಿ ಶ್ರೀ ನಾಗಭೂಷಣ ಎಲ್‌ಟಿ (ಎಸ್), ಶ್ರೀಮತಿ ರಾಜಶ್ರೀ ಸಜ್ಜನ ALT(G) ಜಂಟಿ ಕಾರ್ಯದರ್ಶಿಗಳು ಹಾಗೂ ತೃತೀಯ ಸೋಪಾನ್ ಪರೀಕ್ಷಾ ಶಿಬಿರದ ನಾಯಕರಾಗಿ ಶ್ರೀ ಮೋಹಿದ್ದಿನ್ ಶರೀಫ್ ಸಾಬ್ ಎಎಲ್‌ಟಿ(ಎಸ್), ಶ್ರೀಮತಿ ಶಕುಂತಲಾ ಎಎಲ್‌ಟಿ(ಜಿ) ಜಿಲ್ಲಾ ತರಬೇತಿ ಆಯುಕ್ತರು ಇವರು ಕಾರ್ಯವನ್ನು ನಿರ್ವಹಿಸಿದರು. ರಾಜ್ಯ ಪುರಸ್ಕಾರ ಪೂರ್ವ ಸಿದ್ಧತಾ ಪರೀಕ್ಷೆಯಲ್ಲಿ ಸ್ಕೌಟ್ಸ್–46, ಗೈಡ್ಸ್: 54 ಒಟ್ಟು 100 ಹಾಗೂ ತೃತೀಯ ಸೋಪಾನ್ ಪರೀಕ್ಷಾ ಶಿಬಿರದಲ್ಲಿ ಸ್ಕೌಟ್ಸ್–76, ಗೈಡ್ಸ್–118 ಒಟ್ಟು–194 ಮಕ್ಕಳು ಭಾಗವಹಿಸಿದ್ದರು. ಇದೇ ಸಂದರ್ಭದಲ್ಲಿ ಜಿಲ್ಲಾ ಸಂಸ್ಥೆಯ ಸರ್ವ ಪದಾಧಿಕಾರಿಗಳು, ಸ್ಕೌಟ್ ಮಾಸ್ಟರ್, ಗೈಡ್ ಕ್ಯಾಪ್ಟನ್, ರೋವರ್ಸ್, ಸ್ಕೌಟ್ಸ್, ಗೈಡ್ಸ್‌ಗಳು ಉಪಸ್ಥಿತರಿದ್ದರು. ಶ್ರೀ ಅಂಬಣ್ಣ ನಾಯಕ ಜಿಲ್ಲಾ ಸಂಘಟಕರು ಇವರು ಶಿಬಿರವನ್ನು ಸಂಘಟಿಸಿದರು.



* ಜುಲೈ 25 ರಂದು ಜಿಲ್ಲಾ ಸಂಸ್ಥೆ ರಾಯಚೂರು ಹಾಗೂ ಸ್ಥಳೀಯ ಸಂಸ್ಥೆ ಮಾನ್ವಿ ಮತ್ತು ಮಾನ್ವಿ ಪಬ್ಲಿಕ್ ಶಾಲೆ ಮಾನ್ವಿ ಇವರುಗಳ ಸಂಯುಕ್ತಾಶ್ರಯದಲ್ಲಿ ಕಾರ್ಗಿಲ್ ವಿಜಯ ದಿವಸ ಅಂಗವಾಗಿ ಡಾ. ಬಿ.ಆರ್ ಅಂಬೇಡ್ಕರ್ ವೃತ್ತದ ಹತ್ತಿರವಿರುವ ವೀರ ಸೈನಿಕ ಮಂಜುನಾಥ್ ನಾಯಕ ಅವರ ಪುತ್ಥಳಿಯ ಸುತ್ತಮುತ್ತಲಿನ ಸ್ಥಳದ ಸ್ವಚ್ಛತಾ ಕಾರ್ಯಕ್ರಮವನ್ನು ಶಾಲೆಯ ಸ್ಕೌಟ್ಸ್‌ಗಳು ಮಾಡಿದರು.

* ಜುಲೈ 25ರಂದು ಜಿಲ್ಲಾ ಸಂಸ್ಥೆ ರಾಯಚೂರು ಹಾಗೂ ಸ್ಥಳೀಯ ಸಂಸ್ಥೆ ಸಿಂಧನೂರು ವತಿಯಿಂದ ಶ್ರೀ ಎಸ್.ಶರಣೇಗೌಡ ಅಧ್ಯಕ್ಷರು ಇವರ ಅಧ್ಯಕ್ಷತೆಯಲ್ಲಿ ತಾಲೂಕ ಮಟ್ಟದ ದೇಶಭಕ್ತಿ ಗೀತಗಾಯನ ಸ್ಪರ್ಧೆಯನ್ನು ಸರ್ಕಾರಿ ನೌಕರರ ಭವನ, ಸಿಂಧನೂರು ಇಲ್ಲಿ ಆಯೋಜನೆ ಮಾಡಲಾಯಿತು.

* ಆಗಸ್ಟ್ 06 ರಂದು ಜಿಲ್ಲಾ ಸಂಸ್ಥೆ ರಾಯಚೂರು ಹಾಗೂ ಸ್ಥಳೀಯ ಸಂಸ್ಥೆ ಮಾನ್ವಿ ಮತ್ತು ಸ್ಟೆಪ್ಪಿಂಗ್ ಸ್ಟೋನ್ ಶಾಲೆ ಮಾನ್ವಿ ಇವರುಗಳ ಸಂಯುಕ್ತಾಶ್ರಯದಲ್ಲಿ ಶಾಲೆಯಲ್ಲಿ ಶ್ರೀ ಕೃಷ್ಣ ರೆಡ್ಡಿ ಶಾಲೆಯ ಅಧ್ಯಕ್ಷರು ಇವರ ಅಧ್ಯಕ್ಷತೆಯಲ್ಲಿ ನೂತನ ಕಬ್–ಬುಲ್‌ಬುಲ್ ಹಾಗೂ ಸ್ಕೌಟ್–ಗೈಡ್ ಘಟಕಗಳು ಉದ್ಘಾಟನಾ ಸಮಾರಂಭವನ್ನು ಆಯೋಜನೆ ಮಾಡಲಾಯಿತು. ಶ್ರೀ ಬಿ. ಬಲರಾಮ ಕೃಷ್ಣ ಅಧ್ಯಕ್ಷರು ಇವರು ಸಸಿಗೆ ನೀರು ಹಾಕುವ ಮೂಲಕ ಘಟಕಗಳನ್ನು ಉದ್ಘಾಟಿಸಿದರು. ಮುಖ್ಯ ಅತಿಥಿಗಳಾಗಿ ಶ್ರೀ ಎಮ್. ರಾಮಲಿಂಗಪ್ಪ, ಕಾರ್ಯದರ್ಶಿಗಳು, ಶ್ರೀ ನರಸಿಂಹಮೂರ್ತಿ ದೇಸಾಯಿ, ಜಂಟಿ ಕಾರ್ಯದರ್ಶಿಗಳು, ಶ್ರೀ ಅಂಬಣ್ಣ ನಾಯಕ, ಜಿಲ್ಲಾ ಸಂಘಟಕರು ಇವರು ಆಗಮಿಸಿದ್ದರು. ಇದೇ ಸಂದರ್ಭದಲ್ಲಿ ಶ್ರೀಮತಿ ಅಮರಾವಾಣಿ ಶಾಲೆಯ



ಕಾರ್ಯದರ್ಶಿಗಳು ಹಾಗೂ ಶಾಲೆಯ ಸಿಬ್ಬಂದಿ ವರ್ಗದವರು, ಕಬ್ಸ್–ಬುಲ್‌ಬುಲ್ಸ್, ಸ್ಕೌಟ್ಸ್–ಗೈಡ್ಸ್‌ಗಳು ಭಾಗವಹಿಸಿದ್ದರು.

* ಆಗಸ್ಟ್ 08 ರಂದು ಜಿಲ್ಲಾ ಸಂಸ್ಥೆ ರಾಯಚೂರು ಹಾಗೂ ಸ್ಥಳೀಯ ಸಂಸ್ಥೆ ಮಾನ್ವಿ ಶ್ರೀ ವಾಸವಿ ಆಂಗ್ಲ ಮಾಧ್ಯಮ ಶಾಲೆ ಕವಿತಾಳ ಇವರುಗಳ ಸಂಯುಕ್ತಾಶ್ರಯದಲ್ಲಿ ಶಾಲೆಯಲ್ಲಿ ಪೋಷಕರಿಗೆ ಒಂದು ದಿನದ ಸ್ಕೌಟಿಂಗ್–ಗೈಡಿಂಗ್ ಮಾಹಿತಿ ಕಾರ್ಯಾಗಾರವನ್ನು ಆಯೋಜನೆ ಮಾಡಲಾಯಿತು. ಶ್ರೀ ಅಂಬಣ್ಣ ನಾಯಕ ಜಿಲ್ಲಾ ಸಂಘಟಕರು ಇವರು ಸ್ಕೌಟಿಂಗ್–ಗೈಡಿಂಗ್ ಕುರಿತು ಮಾಹಿತಿಯನ್ನು ನೀಡಿದರು. ಈ ಕಾರ್ಯಾಗಾರದಲ್ಲಿ 80ಕ್ಕೂ ಹೆಚ್ಚು ಪೋಷಕರು ಭಾಗವಹಿಸಿದ್ದರು.ಇದೇ ಸಂದರ್ಭದಲ್ಲಿ ಶ್ರೀಮತಿ ಸುಮಾ ಶಾಲೆಯ ಕಾರ್ಯದರ್ಶಿಗಳು ಹಾಗೂ ಶ್ರೀ ಶರಣ ಬಸವ, ಸ್ಕೌಟ್ ಮಾಸ್ಟರ್ ಹಾಗೂ ಶಾಲೆಯ ಸಿಬ್ಬಂದಿ ವರ್ಗದವರು ಹಾಗೂ ಮಕ್ಕಳು ಉಪಸ್ಥಿತರಿದ್ದರು.




* ಆಗಸ್ಟ್ 09 ರಂದು ಜಿಲ್ಲಾ ಸಂಸ್ಥೆ ರಾಯಚೂರು ಹಾಗೂ ಸ್ಥಳೀಯ ಸಂಸ್ಥೆ ಸಿಂಧನೂರು, ಲಿಂಗಸುಗೂರು, ಮಸ್ಕಿ ಪಿ.ಎಮ್ ಶ್ರೀ ಆದರ್ಶ ಶಾಲೆ ಸಿಂಧನೂರು ಇಲ್ಲಿ ನಶಾಮುಕ್ತ ಪ್ರತಿಜ್ಞೆ ಸ್ವೀಕಾರ ಕಾರ್ಯಕ್ರಮವನ್ನು ಆಯೋಜನೆ ಮಾಡಲಾಯಿತು.

* ಆಗಸ್ಟ್ 09 ರಂದು ಜಿಲ್ಲಾ ಸಂಸ್ಥೆ ರಾಯಚೂರು ಹಾಗೂ ಸ್ಥಳೀಯ ಸಂಸ್ಥೆ ಸಿಂಧನೂರು, ಲಿಂಗಸುಗೂರು, ಮಸ್ಕಿ ಪಿ.ಎಮ್ ಶ್ರೀ ಆದರ್ಶ ಶಾಲೆ ಸಿಂಧನೂರು ಇಲ್ಲಿ ರಾಷ್ಟ್ರೀಯ ಬುಡಕಟ್ಟು ಜನಾಂಗದ ದಿನಾಚರಣೆಯನ್ನು ಆಚರಿಸಲಾಯಿತು.

* ಆಗಸ್ಟ್ 09 ರಂದು ಜಿಲ್ಲಾ ಸಂಸ್ಥೆ ರಾಯಚೂರು ಹಾಗೂ ಸ್ಥಳೀಯ ಸಂಸ್ಥೆ ಸಿಂಧನೂರು ವತಿಯಿಂದ ಶ್ರೀ ಎಸ್. ಶರಣೇಗೌಡ ಅಧ್ಯಕ್ಷರು, ಶ್ರೀ ಬೀರಪ್ಪ ಶಂಭೋಜಿ ಕಾರ್ಯದರ್ಶಿಗಳು ಇವರ ನೇತೃತ್ವದಲ್ಲಿ ಸಿಂಧನೂರು,



ಲಿಂಗಸುಗೂರು, ಮಸ್ಕಿ, ದೇವದುರ್ಗ ತಾಲೂಕಿನ ಸ್ಕೌಟ್ಸ್ ಮತ್ತು ಗೈಡ್ಸ್ ರಾಜ್ಯ ಪುರಸ್ಕಾರ ಪೂರ್ವ ಸಿದ್ಧತಾ ಪರೀಕ್ಷಾ ಶಿಬಿರ ಹಾಗೂ ತೃತೀಯ ಸೋಪಾನ್ ಪರೀಕ್ಷಾ ಶಿಬಿರವನ್ನು ಪಿ.ಎಮ್. ಶ್ರೀ ಆದರ್ಶ ವಿದ್ಯಾಲಯ ಸಿಂಧನೂರು ಇಲ್ಲಿ ಆಯೋಜನೆ ಮಾಡಲಾಯಿತು. ರಾಜ್ಯ ಪುರಸ್ಕಾರ ಪೂರ್ವ ಸಿದ್ಧತಾ ಪರೀಕ್ಷಾ ಶಿಬಿರದ ನಾಯಕರಾಗಿ ಶ್ರೀ ಶಶಿಕಾಂತ್ ದೇಸಾಯಿ ರಾಜ್ಯ ಪರಿಷತ್ ಸದಸ್ಯರು (ಸ್ಕೌ), ಶ್ರೀಮತಿ ಬಸ್ಸಮ್ಮ ಹಿರೇಮಠ, ಶ್ರೀಮತಿ ಶ್ವೇತಾ ಗೈಡ್ ಕ್ಯಾಪ್ಟನ್ ಹಾಗೂ ತೃತೀಯ ಸೋಪಾನ್ ಪರೀಕ್ಷಾ ಶಿಬಿರದ ನಾಯಕರಾಗಿ ಶ್ರೀ ಮೋಹಿದ್ದಿನ್ ಶರೀಫ್ ಸಾಬ್, ಶ್ರೀಮತಿ ಕಲ್ಪಾಶ್ರೀ ಗೈಡ್ ಕ್ಯಾಪ್ಟನ್ ಇವರು ಕಾರ್ಯವನ್ನು ನಿರ್ವಹಿಸಿದರು.

* ಆಗಸ್ಟ್ 15 ರಂದು ಜಿಲ್ಲಾ ಸಂಸ್ಥೆ ರಾಯಚೂರು ವತಿಯಿಂದ ಜಿಲ್ಲಾ ಸ್ಕೌಟ್ ಭವನ ರಾಯಚೂರು ಇಲ್ಲಿ 80ನೇ ಸ್ವಾತಂತ್ರ್ಯ ದಿನಾಚರಣೆಯ ಅಂಗವಾಗಿ ಶ್ರೀ ಬಸವರಾಜ ಬೋರೆಡ್ಡಿ ಜಿಲ್ಲಾ ಮುಖ್ಯ ಆಯುಕ್ತರು ಇವರು ರಾಷ್ಟ್ರ ಧ್ವಜಾರೋಹಣ ನೆರವೇರಿಸಿದರು. ಇದೇ ಸಂದರ್ಭದಲ್ಲಿ ಶ್ರೀ ಹನುಮಂತಪ್ಪ ಗವಾಯಿ ಪೋಷಕರು, ಶ್ರೀ ಡಾ. ಪ್ರಾಣೇಶ ಕುಲಕರ್ಣಿ ಜಿಲ್ಲಾ ಆಯುಕ್ತರು (ರೋ), ಶ್ರೀ ಗದ್ದಿ ಬಸಪ್ಪ ಜಿಲ್ಲಾ ಕಾರ್ಯದರ್ಶಿಗಳು, ಪದಾಧಿಕಾರಿಗಳು, ರೋವರ್ಸ್ ಮತ್ತು ರೇಂಜರ್ಸ್ ವಿದ್ಯಾರ್ಥಿಗಳು ಭಾಗವಹಿಸಿದ್ದರು.



* ಆಗಸ್ಟ್ 15 ರಂದು ಶ್ರೀ ಈಶ್ವರ ಕುಮಾರ್ ಕಾಂದೂ ಐ.ಎ.ಎಸ್ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು ಜಿಲ್ಲಾ ಪಂಚಾಯತ್ ರಾಯಚೂರು ತಮ್ಮ ವಸತಿ ಗೃಹದಲ್ಲಿ 80ನೇ ಸ್ವಾತಂತ್ರ್ಯ ದಿನಾಚರಣೆಯ ಅಂಗವಾಗಿ ರಾಷ್ಟ್ರ ಧ್ವಜಾರೋಹಣ ನೆರವೇರಿಸಿದರು. ಇದೇ ಸಂದರ್ಭದಲ್ಲಿ ಶ್ರೀ ಬಸವರಾಜ ಬೋರೆಡ್ಡಿ ಜಿಲ್ಲಾ ಮುಖ್ಯ ಆಯುಕ್ತರು, ಶ್ರೀ ಅಂಬಣ್ಣ ನಾಯಕ ಜಿಲ್ಲಾ ಸಂಘಟಕರು ಹಾಗೂ ರೋವರ್ಸ್ ಮತ್ತು ರೇಂಜರ್ಸ್‌ಗಳು ಭಾಗವಹಿಸಿದ್ದರು.

* ಜುಲೈ 30 ರಂದು ಜಿಲ್ಲಾ ಸಂಸ್ಥೆ ರಾಯಚೂರು ವತಿಯಿಂದ ಶ್ರೀ ಬಸವರಾಜ ಬೋರೆಡ್ಡಿ ಜಿಲ್ಲಾ ಮುಖ್ಯ ಆಯುಕ್ತರು ಇವರ ಅಧ್ಯಕ್ಷತೆಯಲ್ಲಿ ಪದವಿಪೂರ್ವ ಹಾಗೂ ಪದವಿ ಕಾಲೇಜುಗಳ ಉಪನ್ಯಾಸಕರಿಗೆ ರೋವರಿಂಗ್–ರೇಜರಿಂಗ್ ಬಗ್ಗೆ ಒಂದು ದಿನದ ಕಾರ್ಯಾಗಾರವನ್ನು ಸರ್ಕಾರಿ ಪ್ರಥಮ ದರ್ಜೆ ಕಾಲೇಜು ರಾಯಚೂರು ಇಲ್ಲಿ ಆಯೋಜನೆ ಮಾಡಲಾಯಿತು. ಶ್ರೀ ನರಸಪ್ಪ ಭಂಡಾರಿ, ಅಧ್ಯಕ್ಷರು, ಉಪನ್ಯಾಸಕರ ಸಂಘ ರಾಯಚೂರು ಪ.ಪೂ. ಕಾಲೇಜು ರಾಯಚೂರು ಇವರು ಸಸಿಗೆ ನೀರು ಹಾಕುವ ಕಾರ್ಯಾಗಾರವನ್ನು ಉದ್ಘಾಟಿಸಿದರು. ಸಂಪನ್ಮೂಲ ವ್ಯಕ್ತಿಯಾಗಿ ಶ್ರೀಮತಿ ಮಲ್ಲೇಶ್ವರಿ ಜುಜಾರೆ



ಎ.ಎಸ್.ಓ.ಸಿ. ಇವರು ಉಪನ್ಯಾಸಕರಿಗೆ ರೋವರಿಂಗ್–ರೇಂಜರಿಂಗ್ ಕುರಿತು ಮಾಹಿತಿಯನ್ನು ನೀಡಿದರು. ಮುಖ್ಯ ಅತಿಥಿಗಳಾಗಿ ಡಾ. ಯಂಕಣ್ಣ, ಪ್ರಾಂಶುಪಾಲರು, ಸರ್ಕಾರಿ ಪ್ರಥಮ ದರ್ಜೆ ಕಾಲೇಜು ರಾಯಚೂರು, ಶ್ರೀಮತಿ ಸುಗುಣಾ, ಪ್ರಾಂಶುಪಾಲರು, ಸರ್ಕಾರಿ ಮಹಿಳಾ ಪ್ರಥಮಮ ದರ್ಜೆ ಕಾಲೇಜು ರಾಯಚೂರು, ಡಾ. ಪ್ರಾಣೇಶ್ ಕುಲಕರ್ಣಿ, ಜಿಲ್ಲಾ ಆಯುಕ್ತರು (ರೋ), ಡಾ. ಶಿವಯ್ಯ ಹಿರೇಮಠ ರೋವರ್ ಸ್ಕೌಟ್ ಲೀಡರ್ ಹಾಗೂ ಉಪನ್ಯಾಸಕರು ಭಾಗವಹಿಸಿದ್ದರು. ಶ್ರೀಮತಿ ರೂಪ ಸಹಾಯಕ ಜಿಲ್ಲಾ ಆಯುಕ್ತರು ಇವರು ನಿರೂಪಣೆ ಮಾಡಿದರು. ರೋವರ್ ಸ್ಕೌಟ್ ಲೀಡರ್ಸ್, ರೇಂಜರ್ಸ್ ಲೀಡರ್ಸ್ ಮತ್ತು ಉಪನ್ಯಾಸಕರ – ಉಪನ್ಯಾಸಕಿಯರುಗಳು 46 ಜನ ಭಾಗವಹಿಸಿದ್ದರು. ಶ್ರೀ ಅಂಬಣ್ಣ ನಾಯಕ, ಎಸ್.ಜಿ.ವಿ. ಕಾರ್ಯಾಗಾರವನ್ನು ಸಂಘಟಿಸಿದರು.

## ಶಿವಮೊಗ್ಗ

* ಜುಲೈ 18 ರಂದು ಜಿಲ್ಲಾ ಸ್ಕೌಟ್ ಭವನ, ಶಿವಮೊಗ್ಗದಲ್ಲಿ "ಜಿಲ್ಲಾ ಮಟ್ಟದ ರೋವರ್–ರೇಂಜರ್ ಮೇಟ್‌ಗಳಿಗೆ ಒಂದು ದಿನದ ಮಾಹಿತಿ ಶಿಬಿರ"ವನ್ನು ಆಯೋಜನೆ ಮಾಡಲಾಗಿತ್ತು. ಶಿಬಿರದ ಅಧ್ಯಕ್ಷತೆಯನ್ನು ಶ್ರೀಮತಿ ಶಕುಂತಲ ಚಂದ್ರಶೇಖರ್, ಜಿಲ್ಲಾ ಮುಖ್ಯ ಆಯುಕ್ತರು ವಹಿಸಿದ್ದರು. ಶ್ರೀ ಎಮ್.ಕೆ. ಕೃಷ್ಣಸ್ವಾಮಿ., ಕೇಂ.ಸ್ಥಾ.ಆ.(ವ.ಶಿ.)ರವರು ಸ್ವಾಗತಿಸಿದರು. ಶ್ರೀಮತಿ ಎಸ್.ಕೆ. ಲಕ್ಷ್ಮೀ, ಜಿಲ್ಲಾ ಆಯುಕ್ತರು (ಗೈಡ್)ರವರು ಉದ್ಘಾಟಿಸಿ, ಮಾತನಾಡುತ್ತಾ "ವಿದ್ಯಾರ್ಥಿಗಳು ಸ್ಕೌಟ್ಸ್ ಮತ್ತು ಗೈಡ್ಸ್‌ನ ಚಟುವಟಿಕೆಗಳಲ್ಲಿ ಭಾಗವಹಿಸುವ ಮೂಲಕ ತಮ್ಮ ಪ್ರತಿಭೆಯನ್ನು ಅನಾವರಣ ಗೊಳಿಸಿಕೊಳ್ಳಬಹುದು" ಎಂದರು. ಶ್ರೀ ಕೆ. ರವಿ, ಜಿಲ್ಲಾ ಆಯುಕ್ತರು (ರೋ), ಪ್ರಸ್ತಾವನೆ ನುಡಿ ನುಡಿದರು. ಶಿಬಿರದಲ್ಲಿ 20–ರೋವರ್ಸ್, 29–ರೇಂಜರ್ಸ್ ಒಟ್ಟು 49 ವಿದ್ಯಾರ್ಥಿಗಳು ಭಾಗವಹಿಸಿದ್ದರು. ಶಿಬಿರದಲ್ಲಿ ಜಿಲ್ಲಾ ಪದಾಧಿಕಾರಿಗಳು ಉಪಸ್ಥಿತರಿದ್ದರು. ಶ್ರೀ ಚಂದ್ರಶೇಖರಯ್ಯ ಕೆ.ವಿ., ಜಿಲ್ಲಾ ಕಾರ್ಯದರ್ಶಿ, ವಂದನಾರ್ಪಣೆ ಮಾಡಿದರು.



* ಜುಲೈ 18, 19 ರಂದು ಜಿಲ್ಲಾ ಸ್ಕೌಟ್ ಭವನ, ಶಿವಮೊಗ್ಗದಲ್ಲಿ "ಸ್ಕೌಟ್ಸ್–ಗೈಡ್ಸ್, ರೋವರ್ಸ್–ರೇಂಜರ್ಸ್‌ಗಳ ರಾಜ್ಯ ಪುರಸ್ಕಾರ ಪೂರ್ವಸಿದ್ಧತಾ ತರಬೇತಿ ಶಿಬಿರ"ವನ್ನು ಏರ್ಪಡಿಸಲಾಗಿತ್ತು. ಶಿಬಿರದ ಉದ್ಘಾಟನಾ ಸಮಾರಂಭದ ಅಧ್ಯಕ್ಷತೆಯನ್ನು ಶ್ರೀಮತಿ ಶಕುಂತಲ ಚಂದ್ರಶೇಖರ್, ಜಿಲ್ಲಾ ಮುಖ್ಯ ಆಯುಕ್ತರುರವರು ವಹಿಸಿದ್ದರು. ಶ್ರೀ ಎಸ್.ಜಿ. ಆನಂದ್, ಜಿಲ್ಲಾ ಆಯುಕ್ತರು (ಸ್ಕೌಟ್)ರವರು ಸ್ವಾಗತಿಸಿದರು. ಶ್ರೀ ಜಿ. ವಿಜಯ್‌ಕುಮಾರ್, ಕೇಂದ್ರ ಸ್ಥಾನಿಕ



ಆಯುಕ್ತರು, ಪಿ.ಆರ್.ಒ.ರವರು ಶಿಬಿರವನ್ನು ಉದ್ಘಾಟಿಸಿದರು. ಶಿಬಿರದಲ್ಲಿ 54–ಸ್ಕೌಟ್ಸ್, 54–ಗೈಡ್ಸ್, 18–ರೋವರ್ಸ್, 40–ರೇಂಜರ್ಸ್ ಒಟ್ಟು 166 ವಿದ್ಯಾರ್ಥಿಗಳು ಭಾಗವಹಿಸಿದ್ದರು. ಶಿಬಿರಾರ್ಥಿಗಳಿಗೆ ಪ್ರಶ್ನೋತ್ತರದ ಮೂಲಕ ಮಾಹಿತಿಯನ್ನು ನೀಡಲಾಯಿತು. ಶ್ರೀ ಎ.ವಿ. ರಾಜೇಶ್, ಎಲ್.ಟಿ. (ರೋವರ್), ಶ್ರೀ ಹೆಚ್. ಶಿವಶಂಕರಪ್ಪ, ಡಿ.ಟಿ.ಸಿ, ಶ್ರೀ ಎಂ.ಕೆ. ಕೃಷ್ಣಸ್ವಾಮಿ., ಕೇಂ.ಸ್ಥಾ.ಆ.(ವ.ಶಿ.), ಸಂಪನ್ಮೂಲ ವ್ಯಕ್ತಿಗಳಾಗಿ ರೋವರ್ಸ್–ರೇಂಜರ್ಸ್‌ಗಳಿಗೆ ತರಬೇತಿ ನೀಡಿದರು. ಸಮಾರಂಭದಲ್ಲಿ ಜಿಲ್ಲಾ ಇತರೆ ಪದಾಧಿಕಾರಿಗಳು ಉಪಸ್ಥಿತರಿದ್ದರು. ಶ್ರೀ ಚಂದ್ರಶೇಖರಯ್ಯ ಕೆ.ವಿ., ಜಿಲ್ಲಾ ಕಾರ್ಯದರ್ಶಿ, ವಂದನಾರ್ಪಣೆ ಮಾಡಿದರು. ಶ್ರೀ ಎ.ವಿ ರಾಜೇಶ್, ಎಲ್.ಟಿ (ರೋವರ್) ನಿರೂಪಿಸಿದರು.

* ಶಿವಮೊಗ್ಗ ಜಿಲ್ಲಾ ಸಂಸ್ಥೆ ಹಾಗೂ ಸ್ಥಳೀಯ ಸಂಸ್ಥೆಯ ಸಹಯೋಗದೊಂದಿಗೆ ಜುಲೈ 26 ರಂದು ಜಿಲ್ಲಾ ಸ್ಕೌಟ್ ಭವನ, ಶಿವಮೊಗ್ಗದಲ್ಲಿ "ಕಾರ್ಗಿಲ್ ವಿಜಯ ದಿವಸ ಮತ್ತು ಪೋಷಕರ ದಿನ"ವನ್ನು ಆಚರಿಸಲಾಯಿತು. 'ಅಮರ್ ಜವಾನ್' ಸ್ಮಾರಕವನ್ನು ಮಾಡಿ, ಜ್ಯೋತಿ ಬೆಳಗಿಸಿ, ಪುಷ್ಪಗುಚ್ಛವನ್ನು ಅರ್ಪಿಸಲಾಯಿತು. ಸನ್ಮಾನ್ಯ ಸುಭೇದಾರ್ ಮೇಜರ್ ಯೋಗನಾದ ಜಿ.ಎಲ್., ನಿವೃತ್ತ ಸೈನ್ಯಾಧಿಕಾರಿ ಇವರು ಮುಖ್ಯ ಅತಿಥಿಯಾಗಿ ಆಗಮಿಸಿದ್ದರು. ಶ್ರೀ ಗಣಪತಿ., ಎಲ್.ಟಿ(ರೋವರ್)ರವರು ಸ್ವಾಗತಿಸಿದರು. ಶ್ರೀ ಎ.ವಿ. ರಾಜೇಶ್., ಶಿವಮೊಗ್ಗ ಸ್ಥಳೀಯ ಸಂಸ್ಥೆಯ ಕಾರ್ಯದರ್ಶಿರವರು ಕಾರ್ಗಿಲ್ ಯುದ್ಧ ಕಾರಣ, ಯುದ್ಧದಲ್ಲಿ ತಮ್ಮ ಪ್ರಾಣದ ಹಂಗು ತೊರೆದು ಹೋರಾಡಿದ ಸೈನಿಕರ ಧೈರ್ಯ, ಶೌರ್ಯದ ಬಗ್ಗೆ ರೋಚಕವಾಗಿ ವರ್ಣಿಸಿದರು. ಪೋಷಕರ ದಿನಾಚರಣೆಯ ಬಗ್ಗೆ ಮಾತನಾಡಿದರು. ಮುಖ್ಯ ಅತಿಥಿಗಳಾಗಿ ಆಗಮಿಸಿದ್ದ ಸುಭೇದಾರ್ ಮೇಜರ್ ಯೋಗಾನಂದ ಜಿ.ಎಲ್.ರವರು ಮಾತನಾಡುತ್ತಾ ಕಾರ್ಗಿಲ್ ಯುದ್ಧ ಅದರ ಪರಿಣಾಮ, ಪ್ರಾಣತ್ಯಾಗ ಮಾಡಿ ಹುತಾತ್ಮರಾದವರನ್ನು ನೆನೆದರು. ಅಲ್ಲದೆ ಸೈನ್ಯಕ್ಕೆ ಸೇರಬಯಸುವ ಯುವಕರಿಗೆ ತಮ್ಮ ನಿವೃತ್ತ ಸೈನಿಕ ಸಂಘದ ವತಿಯಿಂದ ಮಾರ್ಗದರ್ಶನ ಮಾಡುವುದಾಗಿ ತಿಳಿಸಿದರು. ಅಧ್ಯಕ್ಷತೆಯನ್ನು ವಹಿಸಿದ್ದಾ ಜಿಲ್ಲಾ ಸಂಸ್ಥೆಯ ಮುಖ್ಯ ಆಯುಕ್ತರಾದ ಶ್ರೀಮತಿ ಶಕುಂತಲ ಚಂದ್ರಶೇಖರ್‌ರವರು ಕಾರ್ಗಿಲ್ ಯುದ್ಧದಲ್ಲಿ ಹುತಾತ್ಮರಾದ ಯೋಧರಿಗೆ ನಮನ ಸಲ್ಲಿಸಿದರು ಹಾಗೂ ಯುದ್ಧದಲ್ಲಿ ತಮ್ಮ ಮಕ್ಕಳನ್ನು ಬಲಿದಾನವಾಗಿ ನೀಡಿದ ಪೋಷಕರಿಗೆ ವಂದಿಸಿದರು. ಸಭೆಯಲ್ಲಿ 200ಕ್ಕೂ ಹೆಚ್ಚು ರೋವರ್ಸ್–ರೇಂಜರ್ಸ್ ಹಾಗೂ ಜಿಲ್ಲಾ ಪದಾಧಿಕಾರಿಗಳು ಹಾಜರಿದ್ದು ಎಲ್ಲರೂ ಅಮರ್ ಜವಾನ್ ಸ್ಮಾರಕಕ್ಕೆ ಪುಷ್ಪಾರ್ಚನೆ ಮಾಡಿದರು. ಜಿಲ್ಲಾ ಪದಾಧಿಕಾರಿಗಳು ಉಪಸ್ಥಿತರಿದ್ದರು.



* ಶಿವಮೊಗ್ಗ ಜಿಲ್ಲಾ ಸಂಸ್ಥೆ ಹಾಗೂ ಸ್ಥಳೀಯ ಸಂಸ್ಥೆಯ ಸಹಯೋಗದೊಂದಿಗೆ ಆಗಸ್ಟ್ 01 ರಂದು ಶಿವಮೊಗ್ಗ ನಗರದ ಪ್ರತಿಷ್ಠಿತ ಶಾಲೆಯಾದ ಪಬ್ಲಿಕ್ ಶಾಲೆಯಲ್ಲಿ "ವಿಶ್ವ ಸ್ಕಾರ್ಫ್ ದಿನಾಚರಣೆ"ಯನ್ನು ಆಚರಿಸಲಾಯಿತು. ಶಾಲೆಯ ಪ್ರಾಂಶುಪಾಲರಾದ ಶ್ರೀಮತಿ ದಿವ್ಯಶೆಟ್ಟಿ ಹಾಗೂ ಶ್ರೀ ಜಿ. ವಿಜಯಕುಮಾರ್, ಆಡಳಿತಾಧಿಕಾರಿಯವರು ಸಹಕರಿಸಿದರು. ಕಾರ್ಯಕ್ರಮದಲ್ಲಿ 90 ಬನ್ನೀಸ್, 150 ಸ್ಕೌಟ್ಸ್ ಮತ್ತು ಗೈಡ್ಸ್ ಮಕ್ಕಳ ಜೊತೆಯಲ್ಲಿ ಶಾಲೆಯ ಇನ್ನಿತರ 200ಕ್ಕೂ ಹೆಚ್ಚು ವಿದ್ಯಾರ್ಥಿಗಳು




ಭಾಗವಹಿಸಿದ್ದರು. ಮುಖ್ಯ ಅತಿಥಿಗಳಾಗಿ ಉಪಸ್ಥಿತರಿದ್ದ ಶ್ರೀಮತಿ ಶಕುಂತಲ ಚಂದ್ರಶೇಖರ್‌ರವರು ಮಾತನಾಡುತ್ತಾ ಸ್ಕಾರ್ಫ್‌ನ ಆಕಾರ ಮತ್ತು ಮಹತ್ವವನ್ನು ತಿಳಿಸಿಕೊಟ್ಟರು. ಕಾರ್ಯಕ್ರಮದ ಅಧ್ಯಕ್ಷತೆಯನ್ನು ವಹಿಸಿದ್ದ ಶ್ರೀಮತಿ ದಿವ್ಯಶೆಟ್ಟಿ., ಶಾಲಾ ಪ್ರಾಂಶುಪಾಲರು ಮಕ್ಕಳಿಗೆ ಸ್ಕೌಟ್ಸ್ ಮತ್ತು ಗೈಡ್ಸ್ ಸೇರುವುದರಿಂದ ಆಗುವ ಪ್ರಯೋಜನಗಳ ಬಗ್ಗೆ ವಿವರವಾಗಿ ತಿಳಿಸಿದರು. ಶ್ರೀ ಜಿ. ವಿಜಯಕುಮಾರ್‌ರವರು ಮಕ್ಕಳ ಸರ್ವಾಂಗೀಣ ಬೆಳವಣಿಗೆ, ಕೌಶಲ್ಯದ ಬಗ್ಗೆ ತಿಳಿಸಿದರು. ಶ್ರೀಯುತ ಎ.ವಿ. ರಾಜೇಶ್ ಎಲ್.ಟಿ.(ರೋವರ್) ಇವರು ವಿವಿಧ ಬಣ್ಣದ ಸ್ಕಾರ್ಫ್‌ಗಳ ಬಗ್ಗೆ ಮಾಹಿತಿ ನೀಡಿ ಅವುಗಳನ್ನು ಧರಿಸುವ ಪದಾಧಿಕಾರಿಗಳ ಬಗ್ಗೆ ತಿಳಿಸಿದರು. ಅಂದು ಶಾಲೆಯಲ್ಲಿ ವಿವಿಧ ದೇಶ, ಬಣ್ಣಗಳ ಸ್ಕಾರ್ಫ್‌ಗಳ ಪ್ರದರ್ಶನವನ್ನು ಏರ್ಪಡಿಸಲಾಗಿತ್ತು. ಜಿಲ್ಲಾ ಪದಾಧಿಕಾರಿಗಳು ಉಪಸ್ಥಿತರಿದ್ದರು. ಮಕ್ಕಳಿಗೆ ಸಿಹಿ ಹಂಚಲಾಯಿತು.

## ಉಡುಪಿ

* ಜುಲೈ 17 ರಂದು ಶ್ರೀ ಲೋಕೇಶ್, ಮಾನ್ಯ ಉಪನಿರ್ದೇಶಕರು ಶಿಕ್ಷಣ ಇಲಾಖೆ ಉಡುಪಿ ಹಾಗೂ ಶ್ರೀ ಅಶೋಕ್ ಕಾಮತ್ ಮಾನ್ಯ ಡಯಟ್ ಪ್ರಾಂಶುಪಾಲರು ಇವರ ಮಾರ್ಗದರ್ಶನದಲ್ಲಿ ಉಡುಪಿ ಜಿಲ್ಲೆಯ ಕ್ಷೇತ್ರ ಶಿಕ್ಷಣಾಧಿಕಾರಿಗಳು, ದೈಹಿಕ ಶಿಕ್ಷಣ ಅಧಿಕಾರಿಗಳು, ಸಿ.ಆರ್.ಪಿ., ಬಿ.ಆರ್.ಪಿ., ಇ.ಒ., ಇಲಾಖಾಧಿಕಾರಿಗಳ ಸಭೆಯನ್ನು ಡಯಟ್ ಕಚೇರಿಯಲ್ಲಿ ಆಯೋಜಿಸಲಾಯಿತು ಸುಮಾರು 106 ಅಧಿಕಾರಿಗಳು ಹಾಗೂ ಜಿಲ್ಲಾ ಪದಾಧಿಕಾರಿಗಳು ಭಾಗವಹಿಸಿದ್ದರು. ಈ ಸಭೆಯನ್ನು ಮಾನ್ಯ ರಾಜ್ಯ ಮುಖ್ಯ ಆಯುಕ್ತರಾದ ಡಾ॥ ಪಿ.ಜಿ.ಆರ್. ಸಿಂಧಿಯಾ ಇವರು ಉದ್ಘಾಟಿಸಿ ಸ್ಕೌಟ್ಸ್–ಗೈಡ್ಸ್ ಪ್ರಗತಿಯ, ಹಾಗೂ ಬೆಳವಣಿಗೆಯ ಬಗ್ಗೆ ಸವಿಸ್ತಾರವಾಗಿ ಮಾಹಿತಿಯನ್ನು ನೀಡಿದರು. ಬಂದಂತಹ ಎಲ್ಲಾ ಅಧಿಕಾರಿಯವರಿಗೆ ನೆನಪಿನ ಕಾಣಿಕೆಯಾಗಿ ಬ್ಯಾಗ್, ಫೈಲ್ ನೀಡಲಾಯಿತು. ಕಾರ್ಯಕ್ರಮದ ಸ್ವಾಗತವನ್ನು ಜಿಲ್ಲಾ ಕಾರ್ಯದರ್ಶಿ ಶ್ರೀ ಆನಂದ್ ಬಿ. ಅಡಿಗ, ಪ್ರಾಸ್ತಾವಿಕ ನುಡಿಯನ್ನು ಶ್ರೀ ಪ್ರಭಾಕರ್ ಭಟ್, ರಾಜ್ಯ ಸಂಘಟನಾ ಆಯುಕ್ತರು, ವಂದನಾರ್ಪಣೆಯನ್ನು ಜಿಲ್ಲಾ ಖಜಾಂಚಿ ಶ್ರೀ ಹರಿಪ್ರಸಾದ್ ರೈ ನೆರವೇರಿಸಿದರು. ಕಾರ್ಯಕ್ರಮವನ್ನು ರಾಜ್ಯ ಸಹಾಯಕ ಸಂಘಟನಾ ಆಯುಕ್ತ ಶ್ರೀಮತಿ ಸುಮನ್ ಶೇಖರ್ ಸಂಘಟಿಸಿದ್ದರು.



* ಆಗಸ್ಟ್ 13 ರಂದು ಇಂದ್ರಾಳಿ ರೈಲ್ವೆ ನಿಲ್ದಾಣದಲ್ಲಿ 98ನೇ ತಿಂಗಳ ಸ್ವಚ್ಛತಾ ಕಾರ್ಯಕ್ರಮವನ್ನು ನಡೆಸಲಾಯಿತು. ರೈಲ್ವೆ ಆಫೀಸರ್ ಆಗಿರುವಂತಹ ಶ್ರೀಮತಿ ಶಾಲಿನಿ ಇವರ ನೇತೃತ್ವ ಹಾಗೂ ಸಂಪೂರ್ಣ ಸಹಕಾರದೊಂದಿಗೆ




ನಡೆಯಿತು. ಈ ಕಾರ್ಯಕ್ರಮದಲ್ಲಿ ಇನ್ನೋರ್ವ ರೈಲ್ವೆ ಅಧಿಕಾರಿ ಶ್ರೀ ಉದಯ್ ಶೆಟ್ಟಿ, ಜಿಲ್ಲಾ ಮುಖ್ಯ ಆಯುಕ್ತರಾದ ಶ್ರೀ ಇಂದ್ರಾಳಿ ಜಯಕರ್ ಶೆಟ್ಟಿ ಭಾಗವಹಿಸಿ ಮಕ್ಕಳನ್ನು ಪ್ರೋತ್ಸಾಹಿಸಿದರು. ಈ ಸಂದರ್ಭದಲ್ಲಿ ರೈಲಿನಲ್ಲಿ ಪ್ರಯಾಣಿಸಿ ಬಂದ ಉಡುಪಿ ಕ್ಷೇತ್ರ ಶಿಕ್ಷಣಾಧಿಕಾರಿಯಾಗಿರುವಂತಹ ಡಾ. ಎಲ್ಲಮ್ಮ ಇವರು ರೋವರ್–ರೆಂಜರ್ಸ್‌ಗಳ ಸ್ವಚ್ಛತಾ ಸೇವೆಯನ್ನು ಕಂಡು ಖುಷಿಪಟ್ಟು, ಶುಭ ಹಾರೈಸಿದರು. ಈ ಸಂದರ್ಭದಲ್ಲಿ ಉಡುಪಿ ಜಿಲ್ಲೆಯ ವಿವಿಧ ಕಾಲೇಜುಗಳಿಂದ ಐವತ್ತಕ್ಕೂ ಹೆಚ್ಚು ರೋವರ್–ರೇಂಜಸ್ ಆರ್.ಎಲ್., ಆರ್.ಎಸ್.ಎಲ್. ಉಪಸ್ಥಿತರಿದ್ದು ಶ್ರೀಮತಿ ಸುಮನ್ ಶೇಖರ್, ರಾಜ್ಯ ಸಹಾಯಕ ಸಂಘಟನಾ ನಾಯಕರು ಕಾರ್ಯಕ್ರಮವನ್ನು ಸಂಘಟಿಸಿದರು.

* ಆಗಸ್ಟ್ 13 ರಂದು ಪಿಪಿಸಿ ಆಂಗ್ಲ ಮಾಧ್ಯಮ ಶಾಲೆ ಅದಮಾರು ಇಲ್ಲಿ ಹೊಸ ಬನ್ನಿ, ಸ್ಕೌಟ್ಸ್, ಗೈಡ್ಸ್, ಕಬ್, ಬುಲ್‌ಬುಲ್ ದಳಗಳನ್ನು ಮಾನ್ಯ ಜಿಲ್ಲಾ ಮುಖ್ಯ ಆಯುಕ್ತರಾದ ಶ್ರೀ ಇಂದ್ರಾಳಿ ಜಯಕರ್ ಶೆಟ್ಟಿ ಇವರು ಉದ್ಘಾಟಿಸಿದರು. ಈ ಸಂದರ್ಭದಲ್ಲಿ ಸ್ಥಳೀಯ ಸಂಸ್ಥೆಯ ಅಧ್ಯಕ್ಷರಾದ ಶ್ರೀ ಎನ್.ಎಂ. ಹೆಗಡೆ, ಸ್ಥಳೀಯ ಸಂಸ್ಥೆ ಪದಾಧಿಕಾರಿಗಳು ಶಾಲೆಯ ಆಡಳಿತ ಅಧಿಕಾರಿ ಹಾಗೂ ಶಾಲಾ ಮುಖ್ಯೋಪಾಧ್ಯಾಯರು, ಜಿಲ್ಲಾ ಕಾರ್ಯದರ್ಶಿ ಶ್ರೀ ಆನಂದ್ ಅಡಿಗ, ರಾಜ್ಯ ಸಹಾಯಕ ಸಂಘಟನಾ ಆಯುಕ್ತರಾದ ಶ್ರೀಮತಿ ಸುಮನ್ ಶೇಖರ್ ದಳನಾಯಕ ನಾಯಕಿಯರು ಉಪಸ್ಥಿತರಿದ್ದರು.



## ರಾಮನಗರ

* ರಾಮನಗರ ಜಿಲ್ಲೆ ಹಾರೋಹಳ್ಳಿ ಪ್ರಗತಿ ವಿದ್ಯಾನಿಕೇತನ ಶಾಲೆಯ ಸ್ಕೌಟ್ಸ್ ಮತ್ತು ಗೈಡ್ಸ್, ಸ್ಕೌಟರ್ಸ್ ಮತ್ತು ಗೈಡರ್ಸ್‌ಗಳಾದ ಶ್ರೀಮತಿ ರೇಖಾ,





ಶ್ರೀಮತಿ ಕುಮುದಿನಿ, ಶ್ರೀಮತಿ ಪ್ರಭಾವತಿ, ಶ್ರೀಮತಿ ಲಲಿತಾ, ಶ್ರೀಮತಿ ಮಮತಾ, ಶ್ರೀಮತಿ ಅನುಶ್ರೀ, ಶ್ರೀಮತಿ ಪೂರ್ಣಿಮ, ಶ್ರೀಮತಿ ರೂಪ ಮತ್ತು ಶ್ರೀಮತಿ ಧನಲಕ್ಷ್ಮಿ ಇವರುಗಳ ನೇತೃತ್ವದಲ್ಲಿ ಪರಿಸರ ಸ್ನೇಹಿ ಗಣಪನನ್ನು ತಯಾರಿಸಿದ ಸಂದರ್ಭ.

## ವಿಜಯಪುರ

* ಪೋಷಕರ ದಿನಾಚರಣೆಯ ಅಂಗವಾಗಿ ಮುದ್ದೇಬಿಹಾಳದ ಚಿನ್ಮಯಿ ಜೆ.ಸಿ. ಶಾಲೆಯಲ್ಲಿ ಪಾದಪೂಜೆ ಕಾರ್ಯಕ್ರಮ ಜರುಗಿತು. ಸದರಿ ಕಾರ್ಯಕ್ರಮವನ್ನು ಸ್ಕೌಟ್ ಮಾಸ್ಟರ ಶ್ರೀ ಬಸವರಾಜ ರಾಮವಾಡಗಿ, ಗೈಡ್ ಕ್ಯಾಪ್ಟನ್ ಕುಮಾರಿ ಶ್ರೀಮತಿ ಅಶ್ವಿನಿನೇರ್ತಿ ಇವರು ನಡೆಸಿಕೊಟ್ಟರು. ಶಾಲೆಯ ಎಲ್ಲ ಶಿಕ್ಷಕ ಬಂಧುಗಳು ಸಹಕರಿಸಿದರು.

* ಆಗಸ್ಟ್ 15 ರಂದು 80ನೇ ಸ್ವಾತಂತ್ರ್ಯ ದಿನಾಚರಣೆಯ ಅಂಗವಾಗಿ ವಿಜಯಪುರ ಜಿಲ್ಲಾ ಸ್ಕೌಟ್ ಭಾವನದಲ್ಲಿ ಧ್ವಜಾರೋಹಣ ಕಾರ್ಯಕ್ರಮ ನೆರವೇರಿತು. ಧ್ವಜಾರೋಹಣವನ್ನು ಮಾನ್ಯ ಮುಖ್ಯ ಆಯುಕ್ತರಾದ ಶ್ರೀ ಸಿದ್ದಣ್ಣ ಎಂ. ಸಕ್ರಿ ಇವರ ಉಪಸ್ಥಿತಿಯಲ್ಲಿ ಜಿಲ್ಲಾ ಆಯುಕ್ತರು (ಗೈ) ಶ್ರೀಮತಿ ವಿದ್ಯಾವತಿ ಅಂಕಲಗಿ ನೆರವೇರಿಸಿದರು. ಕಾರ್ಯಕ್ರಮದಲ್ಲಿ ಜಿಲ್ಲಾ ಆಯುಕ್ತರು (ಕಬ್) ಶ್ರೀ ಬಿ.ಎಂ. ಆಜೂರ, ನ್ಯಾಯವಾದಿಗಳು ಶ್ರೀ ಸುಭಾಷ್ ಅಂಕಲಗಿ, ಶ್ರೀ ಉದಯ ಯಾಳವಾರ, ಲೀಡರ್ ಟ್ರೈನರ್ ಶ್ರೀ ಶಂಕರ ಬಜಂತ್ರಿ, ಚೌಡೇಶ್ವರಿ ಬ್ಯಾಂಕಿನ ಆಡಳಿತ ಮಂಡಳಿಯ ಪದಾಧಿಕಾರಿಗಳು, ಸಿಬ್ಬಂದಿ ವರ್ಗದವರು ಅಂಗಡಿಗಳ ಮಾಲೀಕರು ಉಪಸ್ಥಿತರಿದ್ದರು. ಎ.ಎಸ್.ಓ.ಸಿ.ಡಿಬಿ. ಅತ್ತಾರ ಕಾರ್ಯಕ್ರಮ ನಿರೂಪಿಸಿ ವಂದಿಸಿದರು. ನಂತರ ಜಿಲ್ಲಾ ಕ್ರೀಡಾಂಗಣದಲ್ಲಿ 9 ಗಂಟೆಗೆ ಮಾನ್ಯ ಸಚಿವರು ಶ್ರೀ ಎಂ.ಬಿ. ಪಾಟೀಲ, ಮಾನ್ಯ ಶಾಸಕರು ಶ್ರೀ ಬಸವನಗೌಡ ರಾಮನಗೌಡ ಪಾಟೀಲ (ಯತ್ನಾಳ್) ಇವರುಗಳ ಉಪಸ್ಥಿತಿಯಲ್ಲಿ ಧ್ವಜಾರೋಹಣ ಕಾರ್ಯಕ್ರಮ ನೆರವೇರಿತು. ನಂತರ ನಡೆದ ಸಾಮೂಹಿಕ ಕವಾಯತಿನಲ್ಲಿ ಸರಕಾರಿ ಹೆಣ್ಣು ಮಕ್ಕಳ ಶಾಲೆ ತೊರವಿ ಗೈಡ್ ತಂಡ, ಸಂತ ಜೋಸೆಫ್ ಶಾಲೆಯ ಸ್ಕೌಟ್ಸ್ ಮತ್ತು ಗೈಡ್ ತಂಡ ಭಾಗವಹಿಸಿದವು. ಸಂತ ಜೋಸೆಫ್ ಶಾಲೆಯ ಗೈಡ್ ತಂಡ ಪ್ರಥಮ ಸ್ಥಾನ ಪಡೆದು ಜಿಲ್ಲಾ ಸಂಸ್ಥೆಗೆ ಕೀರ್ತಿ ತಂದಿದೆ. ಕವಾಯತಿನಲ್ಲಿ ಭಾಗವಹಿಸಿದ ಎಲ್ಲ ತಂಡದ ಮಕ್ಕಳನ್ನು ಜಿಲ್ಲಾ ಮುಖ್ಯ ಆಯುಕ್ತರಾದ ಶ್ರೀ ಸಿದ್ದಣ್ಣ ಸಕ್ರಿ ಹಾಗೂ ಜಿಲ್ಲಾ ಪದಾಧಿಕಾರಿಗಳು ಅಭಿನಂದಿಸಿದರು.



# ಶ್ರದ್ಧಾಂಜಲಿ



ಮಾಜಿ ಸಚಿವರು ಹಾಗೂ ತಿಪಟೂರು ವಿಧಾನಸಭಾ ಕ್ಷೇತ್ರದ ಮಾಜಿ ಶಾಸಕರಾದ, ಸರಳ ಸಜ್ಜನ ರಾಜಕಾರಣಿ **ಶ್ರೀ ಬಿ.ಸಿ. ನಾಗೇಶ್** ಅವರು ದಿನಾಂಕ 18–08–2026ರಂದು ಬೆಂಗಳೂರಿನಲ್ಲಿ ನಿಧನರಾದರು. ಇವರಿಗೆ 67 ವರ್ಷ ವಯಸ್ಸಾಗಿತ್ತು.

ಶ್ರೀಯುತರು ಶಿಕ್ಷಣ ಸಚಿವರಾಗಿ ಪ್ರಾಮಾಣಿಕವಾಗಿ ಸೇವೆ ಸಲ್ಲಿಸಿ, ಶಿಕ್ಷಣ ಕ್ಷೇತ್ರದಲ್ಲಿ ಶಿಸ್ತು ಮತ್ತು ಸುಧಾರಣೆ ತರಲು ಮಹತ್ವದ ಪ್ರಯತ್ನ ಮಾಡಿದ ಅವರ ಸೇವೆ ಸದಾ ಸ್ಮರಣೀಯ. ಭಾರತ್ ಸ್ಕೌಟ್ಸ್ ಮತ್ತು ಗೈಡ್ಸ್ ಕರ್ನಾಟಕದ ರಾಜ್ಯ ಉಪಾಧ್ಯಕ್ಷರಾಗಿ ಸಂಸ್ಥೆಯೊಂದಿಗೆ ಆತ್ಮೀಯವಾಗಿ ಸಂಪರ್ಕ ಹೊಂದಿದ್ದರು. ಇವರು ತಮ್ಮ ಧರ್ಮಪತ್ನಿ ಶ್ರೀಮತಿ ವೀಣಾ ನಾಗೇಶ್, ಮಗಳು ಶ್ರೀಮತಿ ಶಾರದಾ, ಮಗ ಶ್ರೀ ವಿಶ್ವದೀಪ್ ಹಾಗು ಮೊಮ್ಮಕ್ಕಳು ಮತ್ತು ಅಪಾರ ಬಂಧು ಮಿತ್ರರನ್ನು ಅಗಲಿದ್ದಾರೆ.



ಭಾರತ್ ಸ್ಕೌಟ್ಸ್ ಮತ್ತು ಗೈಡ್ಸ್ ಕರ್ನಾಟಕ ರಾಜ್ಯ ಸಂಸ್ಥೆಯಲ್ಲಿ ಸಹಾಯಕ ಕಾರ್ಯದರ್ಶಿ, ರಾಜ್ಯ ಕಾರ್ಯದರ್ಶಿಯಾಗಿ ರಾಜ್ಯ ಆಯುಕ್ತರು (ಸ್ಕೌ) ಮತ್ತು ರಾಜ್ಯ ಸಂಸ್ಥೆಯ ಉಪಾಧ್ಯಕ್ಷರಾಗಿ ಹಾಗು ಧರ್ಮದರ್ಶಿಯಾಗಿ ಸೇವೆ ಸಲ್ಲಿಸಿ ಮತ್ತು ರಾಷ್ಟ್ರೀಯ ಸಂಸ್ಥೆ ನವದೆಹಲಿಯಲ್ಲಿ ಕಾರ್ಯನಿರ್ವಾಹಕ ನಿರ್ದೇಶಕರಾಗಿ ಸೇವೆ ಸಲ್ಲಿಸಿದ **ಶ್ರೀ ಟಿ.ಎಸ್. ಲೂಕಾಸ್ ಅವರು** ದಿನಾಂಕ 24.08.2026ರಂದು ಬೆಂಗಳೂರಿನಲ್ಲಿ ದೈವಾಧೀನರಾಗಿರುತ್ತಾರೆ. ಶ್ರೀಯುತರಿಗೆ 98 ವರ್ಷ ವಯಸ್ಸಾಗಿತ್ತು. ಶ್ರೀಯುತರು ಕರ್ನಾಟಕ ಮಾತ್ರವಲ್ಲದೆ ಭಾರತದಾದ್ಯಂತ ಸ್ಕೌಟಿಂಗ್ ಮತ್ತು ಗೈಡಿಂಗ್ ಚಳವಳಿಯ ಬೆಳವಣಿಗೆಗೆ ತಮ್ಮ ಅಮೂಲ್ಯವಾದ ಸೇವೆ ಹಾಗೂ ಅಪಾರ ಕೊಡುಗೆಯನ್ನು ನೀಡಿದವರಾಗಿ ಎಲ್ಲರ ಮೆಚ್ಚುಗೆಗೆ ಪಾತ್ರರಾಗಿರುತ್ತಾರೆ. ಶ್ರೀಯುತರು ಮಗ ಶ್ರೀ ಸಾಲೋಮನ್ ಲೂಕಾಸ್, ಮಗಳು ಶ್ರೀಮತಿ ಹನ್ನಹ ಬ್ರೂನೊ ಹಾಗು ಮೊಮ್ಮಕ್ಕಳು ಮತ್ತು ಅಪಾರ ಬಂಧು ಮಿತ್ರರನ್ನು ಅಗಲಿದ್ದಾರೆ.



ಭಾರತ್ ಸ್ಕೌಟ್ಸ್ ಮತ್ತು ಗೈಡ್ಸ್ ಕರ್ನಾಟಕ ರಾಜ್ಯ ಸಂಸ್ಥೆಯಲ್ಲಿ ರಾಜ್ಯ ಸಂಘಟನಾ ಆಯುಕ್ತರಾಗಿದ್ದ ದಿವಂಗತ ಎಸ್. ಆದಿಕೇಶವಲು ಅವರ ಧರ್ಮಪತ್ನಿ **ಶ್ರೀಮತಿ ಸುಶೀಲ ಆದಿಕೇಶವಲು** ಅವರು ದಿನಾಂಕ: 17.06.2026 ರಂದು ಬೆಂಗಳೂರಿನಲ್ಲಿ ನಿಧನರಾದರು ಇವರಿಗೆ 80 ವರ್ಷ ವಯಸ್ಸಾಗಿತ್ತು. ಇವರು ಒಬ್ಬ ಮಗಳು, ಮೊಮ್ಮಕ್ಕಳು ಮತ್ತು ಅಪಾರ ಬಂಧು ಮಿತ್ರರನ್ನು ಅಗಲಿದ್ದಾರೆ.

ಇವರುಗಳ ಆತ್ಮಕ್ಕೆ ಸದ್ಗತಿ ದೊರಕಲೆಂದು ಹಾಗೂ ಅವರ ಅಗಲಿಕೆಯ ದುಃಖವನ್ನು ಭರಿಸುವ ಶಕ್ತಿಯನ್ನು ಅವರುಗಳ ಕುಟುಂಬದವರಿಗೆ ನೀಡಲೆಂದು ಭಗವಂತನಲ್ಲಿ ಪ್ರಾರ್ಥಿಸುತ್ತೇವೆ.

**– ರಾಜ್ಯ ಕಾರ್ಯದರ್ಶಿ**

# 80ನೇ ಸ್ವಾತಂತ್ರ್ಯ ದಿನಾಚರಣೆ

ಆಗಸ್ಟ್ 15 ರಂದು ಬೆಂಗಳೂರಿನ ನೃಪತುಂಗ ರಸ್ತೆಯ ಶಾಲಾ ಶಿಕ್ಷಣ ಇಲಾಖೆ ಕಛೇರಿಯ ಆವರಣದಲ್ಲಿ 80ನೇ ಸ್ವಾತಂತ್ರ್ಯ ದಿನಾಚರಣೆಯ ಅಂಗವಾಗಿ ಶ್ರೀ ವಿಕಾಸ್ ಕಿಶೋರ್ ಸುರಳ್ಕರ್, ಭಾ.ಆ.ಸೇ, ಆಯುಕ್ತರು, ಶಾಲಾ ಶಿಕ್ಷಣ ಇಲಾಖೆ ಅವರು ಧಜಾರೋಹಣವನ್ನು ನೆರವೇರಿಸಿ ಶುಭ ಕೋರಿದರು.

ಈ ಸಂದರ್ಭದಲ್ಲಿ ಶಾಲಾ ಶಿಕ್ಷಣ ಇಲಾಖೆಯ ಅಧಿಕಾರಿಗಳು, ಸಿಬ್ಬಂದಿ ವರ್ಗದವರು, ಸ್ಕೌಟ್ಸ್ ಮತ್ತು ಗೈಡ್ಸ್, ಕರ್ನಾಟಕ ರಾಜ್ಯ ಸಂಸ್ಥೆಯ ಸಿಬ್ಬಂದಿಗಳು, ಶ್ರೀ ಭಕ್ತೇಶ್, ರೋವರ್ ಸ್ಕೌಟ್ ಲೀಡರ್ ಮತ್ತು ಮಾಗಡಿ ರಸ್ತೆಯ ಬಿ.ಬಿ.ಎಂ.ಪಿ ಪದವಿ ಪೂರ್ವ ಕಾಲೇಜಿನ ರೋವರ್ಸ್-ರೇಂಜರ್ಸ್‌ಗಳು ಭಾಗವಹಿಸಿದ್ದರು.








ಆಗಸ್ಟ್ 05 ರಂದು ಕೇಂದ್ರ ಕಛೇರಿಯ ಕೊಂಡಜ್ಜಿ ಬಸಪ್ಪ ಸಭಾಂಗಣದಲ್ಲಿ, ಭಾರತ್ ಸ್ಕೌಟ್ಸ್ ಮತ್ತು ಗೈಡ್ಸ್ ಕರ್ನಾಟಕ, ವನಲೋಕ ಹಾಗೂ ಎಂಪ್ರೀ ಸಹಯೋಗದಲ್ಲಿ ಆಯೋಜಿಸಿದ್ದ Green Schools Bengaluru Conclave ಕಾರ್ಯಕ್ರಮದಲ್ಲಿ ಭಾಗವಹಿಸಿ ಪರಿಸರ ಸಂರಕ್ಷಣೆ, ಹಸಿರು ಶಾಲೆಗಳ ನಿರ್ಮಾಣ ಮತ್ತು ಯುವಜನರಲ್ಲಿ ಪರಿಸರ ಜಾಗೃತಿ ಬೆಳೆಸುವ ಅಗತ್ಯತೆಯ ಕುರಿತು ಮಾತನಾಡಿದ ಸಂದರ್ಭ.

ಈ ಕಾರ್ಯಕ್ರಮದಲ್ಲಿ ಕರ್ನಾಟಕ ಸರ್ಕಾರದ ಅರಣ್ಯ ಇಲಾಖೆಯ ಪ್ರಧಾನ ಕಾರ್ಯದರ್ಶಿ ಶ್ರೀ ಶ್ರೀನಿವಾಸಲು, ಎಂಪ್ರೀ ನಿರ್ದೇಶಕರಾದ ಶ್ರೀ ಪ್ರಮೋದ್ ಕಟ್ಟಿ, ಶ್ರೀ ವಾಸುದೇವ್, ಶ್ರೀ ಹರಿರಾಮಮೂರ್ತಿ, ಡಾ. ಲಕ್ಷ್ಮಿಕಾಂತ್, ರಾಜ್ಯ ಕಾರ್ಯದರ್ಶಿ ಶ್ರೀ ಕೆ. ಗಂಗಪ್ಪ ಗೌಡ ಸೇರಿದಂತೆ ಅನೇಕ ಗಣ್ಯರು ಉಪಸ್ಥಿತರಿದ್ದರು.

RNI No: 13348/1959. Title Code: KARBIL00285. Posted at Periodical Rate Rs. 2/-
Date of Publishing 28th of Every Month
Posted at: Bengaluru PSO, Mysore Road, Bengaluru-26 on 28th & 30th of every month (No. of Pages: 40)

SHAHEEN
GROUP OF INSTITUTIONS

37 Years of
SHAPING FUTURE WITH EXCELLENCE

COURSES OFFERED

- **Class XI-XII (Science)**
  Integrated with NEET/JEE
- **Class XI-XII (Arts)**
  Integrated with UPSC/CLAT
- **Class XI-XII (Commerce)**
  Integrated with CA Foundation
- **NEET LONG TERM**
  Repeaters Batch
- **Health Sciences**
  BPT, B.Sc. Nursing, D.Pharm & GNM
- **BA/B.Sc/B.Com/BCA**
  Integrated with UPSC
- **Shaheen Australian International School**
  Grades Parent Toddler to Grade 8
- **MA/MSc/MBA**
  Integrated with UPSC, AI/ML, CA Foundation
- **Shaheen MBBS**
  Tajikistan & Kyrgyzstan
- **Shaheen Value School**
  KG to Class X



04 ABROAD INSTITUTIONS
150+ AICU CENTRES
117+ INDIAN CENTRES
3500+ NEET ACHIEVERS EVERY YEAR
45K+ STUDENTS STUDYING
16 STATES IN INDIA

CONSISTENTLY SECURING 1%
GOVT. MBBS SEATS OF INDIA

6000+
DOCTORS
ALUMNI OF SHAHEEN

**Head Office:** Shaheen Nagar, BIDAR. Toll Free: **1800 121 6235** www.shaheengroup.org

If not delivered, please return to :
THE EDITOR, Karnataka Scout & Guide
State Headquarters, Shanthi Gruha
#39, Palace Road, Bengaluru - 560 001
Ph.: 080-22260017, 22267470
e-mail.: info@bsgkarnataka.org
www.bsgkarnataka.in

Published, Editor & Owened by: K. Gangappa Gowda belongs to: Bharat Scouts and Guides, Karnataka, No.39, Shanthi Gruha Palace Rd, Bengaluru 560 001. Published at: Bharat Scouts and Guides, Karnataka, No.39, Shanthi Gruha Palace Road, Bengaluru-560 001
Printed by: L. Lingappa at Sathyasri Printers Pvt. Ltd., 16/1, 3rd Cross, 2nd Main, Kasturiba Nagar, Mysore Road, Bengaluru-26